Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–18 | ಸಂಚಿಕೆ–39 | ಸೆಪ್ಟೆಂಬರ್ 23–29, 2024 | ಪುಟ 16 | ರೂ.10/–
Volume-18 | Issue-39 | September 23-29, 2024 | Pages:16 | Price: 10/-



ನಾಗಮಂಗಲ: ಹೊತ್ತಿ ಉರಿದಿದ್ದೇಕೆ?



ಒಂದು ರಾಷ್ಟ್ರ, ಒಂದು ಚುನಾವಣೆ: ವಿನಾಶಕಾರಿ ಚಿತಾವಣೆ

ಸಂಘ ಪರಿವಾರದ ದಾಳ ಕಾಂಗ್ರೆಸ್ಸಿನ ಮೌನ

ಕಲ್ಯಾಣ ಇಲ್ಲದ ಈ ಕರ್ನಾಟಕ

ಸೀತಾರಾಮ್ : ಅವರೊಂದು ಹೊಳೆವ ನಕ್ಷತ್ರ

ಆ ವಾಕ್ಯವೇ ಅಧ್ಯಯನಕ್ಕೆ ಪ್ರೇರೇಪಿಸಿತು

ಕಾಮ್ರೇಡ್ ಸೀತಾರಾಮ್ ಯೆಚೂರಿ ಅವರೊಂದಿಗೆ ಸಂದರ್ಶನ

ಸೆಪ್ಟೆಂಬರ್ 13, 2024ರಂದು ಪ್ರಜಾಶಕ್ತಿ ಪತ್ರಿಕೆಯಲ್ಲಿ ಪ್ರಕಟಿಸಲಾದ, ಈ ಹಿಂದೆ ಕಾಮ್ರೇಡ್ ಸೀತಾರಾಮ್ ಯೆಚೂರಿ ಅವರೊಡನೆ ನಡೆಸಿದ ಸಂದರ್ಶನದ ಲೇಖನವನ್ನು ಕನ್ನಡಕ್ಕೆ ಅನುವಾದಿಸಲಾಗಿದೆ.

ಕಾಮ್ರೇಡ್, ಮಾರ್ಕ್ಸ್‌ವಾದ ಅಧ್ಯಯನದ ಅವಶ್ಯಕತೆ ಎಲ್ಲಿಯವರೆಗೂ ಇರುತ್ತದೆ?

ಮಾರ್ಕ್ಸ್‌ವಾದಿ ಎಂದರೇನೇ ಅಧ್ಯಯನಶೀಲ. ಅಧ್ಯಯನ ಇಲ್ಲದೆ ಇದ್ದರೆ ಮಾರ್ಕ್ಸ್‌ವಾದಿಯಾಗಲು ಎಂದಿಗೂ ಸಾಧ್ಯವಿಲ್ಲ. ಮಾರ್ಕ್ಸ್‌ವಾದಿಗೆ ಅಧ್ಯಯನ ಎಂಬುದು ಸ್ವಾಭಾವಿಕವಾಗಿ ಇರುತ್ತದೆ. ಇರಬೇಕು. ಅದು ಕಮ್ಯುನಿಸಂನ ಅವಿಭಾಜ್ಯ ಅಂಗವಾಗಿರಬೇಕು. ಲೆನಿನ್ ಹೇಳಿದಂತೆ, 'ಮಾರ್ಕಿಸಂ ಈಸ್ ದಿ ಕಾಂಕ್ರೀಟ್ ಅನಾಲೈಸಿಸ್ ಆಫ್ ಕಾಂಕ್ರಿಟ್ ಕಂಡೀಷನ್ಸ್' (ನಿರ್ದಿಷ್ಟ ಪರಿಸ್ಥಿತಿಯನ್ನು ನಿರ್ದಿಷ್ಟವಾಗಿ ವಿಶ್ಲೇಷಣೆ ಮಾಡುವುದು). ಅಧ್ಯಯನವು ಜೀವನ ಪರ್ಯಂತ ಇರಬೇಕು. ಇದನ್ನು ಗುರುತಿಸದೇ ಹೋದರೆ, ಡೀಜನರೇಷನ್ (ಅವನತಿ)ಗೆ? ಹಾಗಾಗಿ ಡೀವಿಯೇಷನ್ಸ್ (ವಿಚಲನೆಗಳು)ಗೂ ಗುರಿಯಾಗುತ್ತೇವೆ. ತಪ್ಪು ದಾರಿ ಹಿಡಿಯುತ್ತೇವೆ. ಈ ಎರಡನ್ನು ಸರಿ ಮಾಡಿಕೊಳ್ಳಬೇಕು. ಮತ್ತೊಂದೆಡೆ, ಜನರು ಯಾಕಾಗಿ ಮಾರ್ಕ್ಸ್‌ವಾದದ ಕಡೆಗೆ ಆಕರ್ಷಿತರಾಗಿದ್ದಾರೆಂದು ನೋಡಿದರೆ, ಇಲ್ಲಿಯವರೆಗೆ ಪ್ರಪಂಚದಲ್ಲಿ ಮಾರ್ಕ್ಸ್‌ವಾದವೊಂದೇ ವೈಜ್ಞಾನಿಕ. ಲೆನಿನ್ ಮಾತುಗಳಲ್ಲೇ ನೋಡಿದರೆ ಮಾರ್ಕ್ಸ್‌ವಾದದಲ್ಲಿ ಎರಡು ಅಂಶಗಳಿವೆ. ಒಂದು ಕ್ರಾಂತಿಕಾರಿ ಸ್ವಭಾವ. ಎರಡು ವೈಜ್ಞಾನಿಕ. ಇವೆರಡರಲ್ಲಿ ಯಾವುದಾದರೂ ಒಂದು ಇಲ್ಲದೇ ಹೋದರೆ ಮಾರ್ಕ್ಸ್‌ವಾದವೇ ತಪ್ಪುದಾರಿಗೆ ಬೀಳುತ್ತದೆ.

ವೈಜ್ಞಾನಿಕ ಅಧ್ಯಯನವನ್ನು ಹೇಗೆ ವ್ಯಾಖ್ಯಾನಿಸಬಹುದು? ಸಮಗ್ರ ಅಧ್ಯಯನ ಹೇಗಿರಬೇಕು?

ಅಧ್ಯಯನಕ್ಕೆ ಓದುವುದು ಮೂಲ ಅಗತ್ಯ, ಆದರೆ ಓದುವುದರಿಂದಲೇ ಅಧ್ಯಯನ ಪೂರ್ಣವಾಗಲಾರದು. ಅಧ್ಯಯನವು ಅನುಭವಗಳ ಮೇಲೆ ಕೂಡಾ ಅವಲಂಬಿತವಾಗಿದೆ. ಮಾರ್ಕ್ಸ್‌ವಾದಿಗೆ ಅನುಭವಗಳು ಚಳುವಳಿಗಳ ಮೂಲಕ ಬರುತ್ತವೆ. ಚಳುವಳಿಗಳೆಂದರೆ ಜನಸಾಮಾನ್ಯರೊಂದಿಗೆ ಇದ್ದು, ಹೋರಾಟ, ಓದು, ಅಧ್ಯಯನ, ಚಳವಳಿಗಳಲ್ಲಿ ಕೆಲಸ ಮಾಡಿದ ಅನುಭವ. ಇವೆಲ್ಲವೂ ಜೊತೆಗೂಡಿದರೆ ಮಾತ್ರ ಸಮಗ್ರ ಅಧ್ಯಯನವಾಗುತ್ತದೆ. ಪುಸ್ತಕ ಅಧ್ಯಯನ... ಸಾಮಾಜಿಕ ಅಧ್ಯಯನ... ಚಳುವಳಿಗಳ ಅಧ್ಯಯನ... ಈ ಮೂರರ ಸಮ್ಮಿಶ್ರಣವೇ ಸಮಗ್ರ ಅಧ್ಯಯನ.

ಒಬ್ಬ ಸಾಮಾನ್ಯ ಕಾರ್ಯಕರ್ತ ಅಧ್ಯಯನವನ್ನು ಎಲ್ಲಿಂದ ಪ್ರಾರಂಭಿಸಬೇಕು? ನಿಮ್ಮ ಅನುಭವಗಳಿಂದ ಹೇಳಿ?

ಪ್ರತಿಯೊಬ್ಬರಿಗೂ ವೈಯಕ್ತಿಕ ಅನುಭವಗಳಿರುತ್ತವೆ. ಅವುಗಳನ್ನು ಸಾಮಾನ್ಯೀಕರಿಸುವುದು ಕಷ್ಟ. ಇದು ಸಾಧ್ಯವೂ ಅಲ್ಲ. ಸಾಮಾಜಿಕ ಪರಿಸ್ಥಿತಿಗಳು ಯಾವುವು, ಹೇಗೆ ಬದಲಾಗುತ್ತಿವೆ? ಈ ರೀತಿ ಏಕೆ ನಡೆಯುತ್ತಿದೆ? ಎಂಬ ಸಂದೇಹಗಳು ಬರುತ್ತವೆ. ಆ ಪ್ರಶ್ನೆಯಿಂದಲೇ ಅಧ್ಯಯನ ಮಾಡಬೇಕೆಂಬ ಅಗತ್ಯ ಮತ್ತು ಆಸಕ್ತಿ ಹುಟ್ಟುತ್ತದೆ. ಮಾರ್ಕ್ಸ್ ಕೂಡ 'ಡೌಟ್ ಎವೆರಿಥಿಂಗ್' (ಪ್ರತಿಯೊಂದನ್ನೂ ಅನುಮಾನಿಸು) ಎಂದಿದ್ದರು. ಕುತೂಹಲ ಮತ್ತು ಪ್ರಶ್ನೆಗಳು ಅಧ್ಯಯನವನ್ನು ಉತ್ತೇಜಿಸುತ್ತವೆ. ಆ ಸಂದೇಹ ಎಲ್ಲಿಂದ ಶುರುವಾಗುತ್ತದೆಯೋ ಅಲ್ಲಿಂದ ಅಧ್ಯಯನ ಪ್ರಾರಂಭವಾಗಬೇಕು.


ನಾನು ಅರ್ಥಶಾಸ್ತ್ರ ಪದವಿ (ಎಕಾನಮಿಕ್ಸ್ ಗ್ರ್ಯಾಜುಯೇಷನ್)ಯನ್ನು ಓದುತ್ತಿದ್ದಾಗ ಅರ್ಥಶಾಸ್ತ್ರದಲ್ಲಿ ಮಾರ್ಕ್ಸ್‌ವಾದಿ ತಿಳುವಳಿಕೆಯು ಮೊದಲು ಪರಿಚಯವಾಯಿತು. ಮಾರ್ಕ್ಸ್ ಒಂದೆಡೆ 'ಆರ್ಥಿಕ ನ್ಯಾಯದ ತತ್ವಗಳು ಸಾಮಾಜಿಕ ಪರಿಸ್ಥಿತಿಗಳಿಗಿಂತ ಮೇಲೇರಲು ಸಾಧ್ಯವೇ ಇಲ್ಲ' (Principles of Economic Justice Can Never Rise Above the Social Condition) ಎಂದು ಹೇಳುತ್ತಾರೆ. ಈ ವಾಕ್ಯವೇ ನನ್ನನ್ನು ಅಧ್ಯಯನಕ್ಕೆ ಪ್ರೇರೇಪಿಸಿತು. ನ್ಯಾಯ ಎನ್ನುವುದು ಸಾಮಾಜಿಕ ಪರಿಸ್ಥಿತಿಗಳಿಗೆ ಸಂಬಂಧವನ್ನು ಒಳಗೊಂಡಿರುತ್ತದೆ. ಇಂದಿನ ಆಧುನಿಕ ನಾಗರಿಕ ಸಮಾಜದಲ್ಲಿ ನ್ಯಾಯ ಸಾಧ್ಯವೇ? 'ನ್ಯಾಯವು ಸಾಪೇಕ್ಷ ಪದವಾಗಿದೆ ಮತ್ತು ಸಾಮಾಜಿಕ ಪರಿಸ್ಥಿತಿಗಳು, ಅವುಗಳು ಸ್ವತಃ ಬದಲಾಗುತ್ತವೆ' ("Justice Itself is a Relative Term and Social Conditions Change Themselves").

ಶೈಕ್ಷಣಿಕ ಅಧ್ಯಯನದಿಂದ ಆಸಕ್ತಿ ಪ್ರಾರಂಭವಾದದು ಒಂದು ಭಾಗವಾದರೆ, ಇನ್ನೊಂದು ಬದಿಯಲ್ಲಿ ನಮ್ಮ ಸಾಮಾಜಿಕ ಪರಿಸ್ಥಿತಿಗಳು ಸಹ ಕಾರಣವಾಗುತ್ತವೆ. ನಾನು ಶಾಲಾ, ಕಾಲೇಜು ಶಿಕ್ಷಣವನ್ನು ಹೈದರಾಬಾದಿನಲ್ಲಿ ಪಡೆದಿದ್ದೇನೆ. ನಾನು 1967–68ರಲ್ಲಿ ನಕ್ಸಲೀಯರನ್ನು, ಆ ನಂತರ ಪ್ರತ್ಯೇಕ ತೆಲಂಗಾಣ ಚಳವಳಿಯನ್ನು ನೋಡಿದೆ. ಪ್ರತ್ಯೇಕ ತೆಲಂಗಾಣದಿಂದಾಗಿ ಹೈದರಾಬಾದ್ ಅನ್ನು ಬಿಟ್ಟು ಹೋಗಬೇಕಾಗಿ ಬಂತು. ಆ ಸಮಯದಲ್ಲಿ ಒಂದು ವರ್ಷದ ಓದು ಹೋಯಿತು. ಇದಕ್ಕೆಲ್ಲಾ ಕಾರಣಗಳೇನು? ಈ ಚಳುವಳಿಗಳು ಯಾಕಾಗಿ ನಡೆಯುತ್ತಿವೆ? ಎಂದು ಅದರಿಂದಲೂ ನಾನು ಯೋಚಿಸಿದೆ.

ನಮ್ಮ ಸಮಾಜದಲ್ಲಿನ ಬೆಳವಣಿಗೆಗಳನ್ನು ವಿಶ್ಲೇಷಿಸುತ್ತಾ... ಬರುವ ಸಂದೇಹಗಳಿಗೆಲ್ಲ ಪರಿಹಾರವೇನು? ಎಂದು ನಾನು ಯೋಚಿಸುತ್ತಿದ್ದೆ. ಸುತ್ತಲಿನ ಪರಿಸ್ಥಿತಿಗಳು, ಪರಿಣಾಮಗಳಿಗೆ ಕಾರಣವೇನು? ಅವುಗಳಿಗೆ ಪರಿಹಾರ ಏನಿದೆ ಎಂದು ವಿಶ್ಲೇಷಿಸಿಕೊಂಡದ್ದು ನಾನು ಎಡಪಕ್ಷದ ಕಡೆಗೆ ಬರಲು ಕಾರಣವಾಯ್ತು. ಆದರೆ, ನಿಜವಾದ ಅಧ್ಯಯನ ಪ್ರಾರಂಭಿಸಬೇಕಾದ್ದು ಒಂದು ಪುಸ್ತಕದಿಂದ ಅಲ್ಲ ಅನುಭವಗಳಿಂದ.

ಎಡಕ್ಕೆ ನೋಡುವ ಆರಂಭಿಕ ಹಂತಗಳಲ್ಲಿ ನೀವು ಯಾವ ಪುಸ್ತಕಗಳನ್ನು ಓದಿದ್ದೀರಿ?

ಆಗ ಪ್ರಗತಿಪರ ಸಾಹಿತ್ಯ ಚೆನ್ನಾಗಿತ್ತು. ರಾಬರ್ಟ್ ಫ್ರಾಸ್ಟ್ ಅವರ ಪುಸ್ತಕಗಳಿದ್ದವು. ಅಮೇರಿಕಾದಲ್ಲಿ ಕಾರ್ಮಿಕ ಚಳುವಳಿಯ ಉದಯದ ಕುರಿತ ಸ್ಪಾರ್ಟಕಸ್ (Spartacus) ಅವರ ಪುಸ್ತಕಗಳು ಬಂದಿದ್ದವು. ಅವುಗಳನ್ನು ಓದಿದೆ. ಮಾರ್ಕ್ಸ್‌ವಾದಿ ಸಾಹಿತ್ಯವನ್ನು ಮುಖ್ಯವಾಗಿ ಓದಲು ಪ್ರಾರಂಭಿಸಿದ್ದು ನಾನು ಅರ್ಥಶಾಸ್ತ್ರ ಪದವಿ ಓದುತ್ತಿದ್ದಾಗ. ಅಂತಹ ಸಂದರ್ಭಗಳಲ್ಲಿ ಬಂಡವಾಳಶಾಹಿ ಎಂದರೇನು? ನಿಜವಾಗಿ ಅದನ್ನು ಹೇಗೆ ಅರ್ಥಮಾಡಿಕೊಳ್ಳಬೇಕು? ಎಂದು ತಿಳಿಯುವ ಸಲುವಾಗಿಯೇ ಮಾರ್ಕ್ಸ್‌ವಾದಿ ಸಾಹಿತ್ಯದತ್ತ ಮುಖ ಮಾಡಿದೆ. ಲೆನಿನ್ ಅವರ 'ರಾಜ್ಯ ಮತ್ತು ಕ್ರಾಂತಿ' ನಾನು ಆಸಕ್ತಿಯಿಂದ ಓದಿದ ಮೊದಲ ಪುಸ್ತಕ. ಅದಕ್ಕೂ ಮೊದಲು ಓದಿದ್ದ ಪುಸ್ತಕಗಳಿಗಿಂತಲೂ ಆಸಕ್ತಿಯಿಂದ ಓದಿದ್ದು, ಪ್ರಭಾವ ಬೀರಿದ್ದು ಇದೇ ಪುಸ್ತಕ. ಅಂದೇ ಸಮಾಜವಾದಕ್ಕಾಗಿ ನಾವು ಮಾಡುವ ಹೋರಾಟ ಯಾವ ರೀತಿಯಲ್ಲಿ ಇರಬೇಕು ಎಂಬುದು ಅರ್ಥವಾಗುತ್ತದೆ.



ಮಾರ್ಕ್ಸ್‌ವಾದಿ ಸಾಹಿತ್ಯದ ಪರಿಚಯದ ನಂತರ ಸಂಪೂರ್ಣ ಯೋಜನಾಬದ್ಧವಾಗಿ ಓದುವುದು ಯಾವಾಗ ಪ್ರಾರಂಭವಾಯಿತು?

ಒಮ್ಮೆ ಆರಂಭಿಸಿದ ನಂತರ ಅದು ನಿರಂತರ ಕಾರ್ಯಕ್ರಮವಾಗಿ ಮುಂದುವರೆಯಿತು. ಪದವಿ ಓದುತ್ತಿದ್ದ ಸಮಯವೆಲ್ಲಾ ಇದೇ ರೀತಿ ಓದಿದ್ದರೂ, ಪ್ರಬುದ್ಧತೆಯ ಹಂತ ಮಾತ್ರ ದೆಹಲಿಯ ಜೆಎನ್‌ಯು ನಲ್ಲಿದ್ದಾಗಲೇ. ಅಲ್ಲಿ ನಿಯಮಿತವಾಗಿ ಅಧ್ಯಯನಕ್ಕಾಗಿ ಗುಂಪು (ಸ್ಟಡಿ ಗ್ರೂಪ್)ಗಳನ್ನು ಆಯೋಜಿಸುತ್ತಾರೆ. ಒಬ್ಬರು ಅತಿಥಿಯನ್ನು ಕರೆದು ಉಪನ್ಯಾಸ, ಪುಸ್ತಕಗಳ ಮೇಲೆ ಅಧ್ಯಯನ ಗುಂಪುಗಳನ್ನು ಆಯೋಜಿಸುವ ಆರೇಳು ಮಂದಿ ಸ್ವಯಂಪ್ರೇರಣೆಯಿಂದ ಮಾಡುವವರು. ಕ್ಯಾಪಿಟಲ್ ನ ಮೂರೂ ಸಂಪುಟಗಳನ್ನು ಆಗಲೇ ಓದಿದ್ದೇವೆ. ..ಪ್ರತಿ ಶನಿವಾರ ಸಂಜೆ. ಮಾರ್ಕ್ಸ್‌ವಾದಿ ಶ್ರೇಷ್ಠತೆಗಳನ್ನು ಅದೇ ರೀತಿ ಓದುತ್ತೇವೆ.

ವಿದ್ಯಾರ್ಥಿ ಹಂತ ಹಾಗಾಗಿ? ಅಧ್ಯಯನಕ್ಕಾಗಿ ಸ್ಟಡಿ ಗ್ರೂಪ್ ಗಳನ್ನು ಆಯೋಜಿಸುವವರಾ? ಸ್ಟಡೀ ಗ್ರೂಪ್ ನಾಗಿಯೇ ಓದುತ್ತಿದ್ದವರಾ?

ಎರಡೂ ಅಲ್ಲ... ಓದಿದ್ದನ್ನು ಅರ್ಥಮಾಡಿಕೊಳ್ಳುವುದಕ್ಕಾಗಿ. ಓದಿದ್ದು ಒಬ್ಬೊಬ್ಬರಿಗೂ ಒಂದೊಂದು ವಿಧದಲ್ಲಿ ಅರ್ಥವಾಗುತ್ತದೆ. ಸ್ಟಡಿ ಗ್ರೂಪ್ ನಲ್ಲಿ ಇಂತಹ ಪರಸ್ಪರ ತಿಳುವಳಿಕೆಯಿಂದ ನಿಜವಾದ ತಿಳುವಳಿಕೆಯನ್ನು ತಲುಪಲಾಗುತ್ತದೆ.

ಮಾರ್ಕ್ಸ್‌ವಾದಿ ಸಾಹಿತ್ಯವನ್ನು ಓದುವುದಕ್ಕೆ ಮೊದಲು ಇತರ ಸಾಹಿತ್ಯವನ್ನು ಓದುವ ಅಭ್ಯಾಸವಿತ್ತೇ? ಅಥವಾ ಇವುಗಳನ್ನು ನೇರವಾಗಿ ಓದಿದಿರಾ?

ಬಾಲ್ಯದಿಂದಲೂ ಸಾಹಿತ್ಯವನ್ನು ಓದುವ ಅಭ್ಯಾಸ ಇತ್ತು. ಅದಕ್ಕೆ ಮುಖ್ಯ ಕಾರಣ ನನ್ನ ಅಜ್ಜ (ತಾಯಿಯ ತಂದೆ). ಅವರು ಹೈಕೋರ್ಟ್ ಜಡ್ಜ್ ಆಗಿದ್ದರು. ಮನೆಯೇ ದೊಡ್ಡ ಗ್ರಂಥಾಲಯವಾಗಿತ್ತು. ಅವರ ಮೂಲಕ ಬಾಲ್ಯದಿಂದಲೂ ಓದುವ ಅಭ್ಯಾಸವಿತ್ತು. ಆ ಅಭ್ಯಾಸ ನಂತರದ ಕಾಲದಲ್ಲಿ ಬಹಳ ಉಪಯೋಗಕ್ಕೆ ಬಂತು. ನಿಜವಾದ ಓದುವಿಕೆಗೆ ಒಂದು ಬೌದ್ಧಿಕ ಶಿಸ್ತು (Intellectual Discipline) ಅಗತ್ಯವಿದೆ. ಅದು ಎಷ್ಟು ಮುಖ್ಯವೆಂದು ಇಂದಿಗೂ ತಿಳಿಯುತ್ತಿದೆ. ಅನುಭವದಲ್ಲಿ ತಿಳಿಯುತ್ತಿರುತ್ತದೆ. ನಿರಂತರ ಪ್ರಯಾಣ ಮಾಡುತ್ತಿರುವುದರಿಂದ ಓದುವುದು ಇತ್ತೀಚೆಗೆ ಓದು ಸರಿಯಾಗಿ ನಡೆಯುತ್ತಿಲ್ಲ. ಆದರೆ ಪ್ರಯಾಣದ ಸಮಯವನ್ನು ಓದಲು ಬಳಸುತ್ತೇನೆ.

ಆ ದಿನಗಳಲ್ಲಿ ಯಾವ ಪುಸ್ತಕಗಳನ್ನು ಓದಿದ್ದೀರಿ?

ಆ ದಿನಗಳಲ್ಲಿ ಹೊಸದಾಗಿ ಬರುತ್ತಿದ್ದ ಭಾರತೀಯ ಆಂಗ್ಲ ಬರಹಗಾರರ ಪುಸ್ತಕಗಳನ್ನು ಓದುತ್ತಿದ್ದೆ. ಆರ್.ಕೆ. ನಾರಾಯಣನ್ ಆಗಷ್ಟೇ ಜನಪ್ರಿಯರಾಗುತ್ತಿದ್ದ ಬರಹಗಾರ. ಭಾರತದ ಪರಿಸ್ಥಿತಿಯಲ್ಲಿ ವಾಸ್ತವತೆಯನ್ನು ಅವರು ಹೇಗೆ ಅರ್ಥಮಾಡಿಕೊಳ್ಳುತ್ತಾರೆ ಎಂಬುದನ್ನು ತಿಳಿಯಲು ಕೂಡಾ ಓದಿದವನು ನಾನು. ಮತ್ತೊಂದೆಡೆ, ಇನ್ನೊಬ್ಬ ಅಜ್ಜನಿಗೆ (ನನ್ನ ತಂದೆಯ ತಂದೆ) ಧರ್ಮ ಸಂಬಂಧ ಪುರಾಣಗಳಲ್ಲಿ ತುಂಬಾ ಆಸಕ್ತಿ. ಅವರ ಮೂಲಕ ರಾಮಾಯಣ, ಮಹಾಭಾರತ, ಭಾಗವತಗಳನ್ನು ಓದಿದ್ದೇನೆ. ಅವರಿಂದಲೂ ಸಾಕಷ್ಟು ಕಲಿತಿದ್ದೇನೆ. ಅವುಗಳನ್ನು ನಿರಾಕರಿಸುವ ಅಗತ್ಯವಿಲ್ಲ. ಆ ಅಭೂತ ಕಲ್ಪನೆಯಿಂದ ವಾಸ್ತವವನ್ನು ಅರಿಯಲು ಹಲವು ಪ್ರಶ್ನೆಗಳು ಏಳುತ್ತವೆ. ಅವುಗಳನ್ನು ಕೇಳಿದೆನಾದರೂ ಅವರಿಗೆ ಉತ್ತರ ಹೇಳಲಾಗಲಿಲ್ಲ.

ರಾಮಾಯಣದಲ್ಲಿ ದಕ್ಷಿಣದ ರಾಜರನ್ನು... ರಾಮನ ಮಿತ್ರರು ಮತ್ತು ಭಕ್ತರ ಸಹಿತ ಪ್ರಾಣಿಗಳಂತೆ ಚಿತ್ರಿಸುವುದರ ಒಳಾರ್ಥವೇನು? ಆ ರೀತಿ ಏಕೆ ಹಾಗೆ ಚಿತ್ರಿಸಲಾಗಿದೆ? ಎಂಬುದು ನನ್ನ ಸಂದೇಹಗಳಲ್ಲಿ ಒಂದು. ರಾಮಾಯಣ ಕಥೆ ಬಂದ ದಿನಗಳಲ್ಲಿ ದ್ರಾವಿಡರ ಮೇಲೆ ಆರ್ಯರ ಮೇಲುಗೈಯಿಂದಾಗಿ ಆ ರೀತಿ ಬರೆದಿದ್ದಾರೆ ಎಂದು ಕೆಲವು ವರ್ಷಗಳ ನಂತರ ಅರ್ಥವಾಯಿತು. ಅಂದಿನ ಸಾಮಾಜಿಕ ವಾಸ್ತವ ಆ ಕಥೆಯಲ್ಲಿ ಆ ರೀತಿ ಪ್ರತಿಬಿಂಬಿತವಾಗಿತ್ತು. ಇವುಗಳ ಅಧ್ಯಯನ ಮಾಡುವುದನ್ನು ಅಭಿವೃದ್ಧಿಗೆ ಅಡ್ಡಿ ಎಂಬಂತೆ ನೋಡಬಾರದು. ವಾಸ್ತವಿಕತೆಯನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಅವುಗಳನ್ನು ಓದಬೇಕು... ಒಂದೆಡೆ ಸಮಕಾಲೀನ ಸಾಹಿತ್ಯ, ಮತ್ತೊಂದೆಡೆ ಪುರಾಣಗಳು, "ಸ್ಪಾರ್ಟಕಸ್" ನಂತಹ ಪುಸ್ತಕಗಳಲ್ಲಿನ ದಂಗೆಗಳು... ಇವೆಲ್ಲವೂ ಪ್ರಗತಿಶೀಲ ಸಾಹಿತ್ಯ ಬೆಳೆದು ಬರುವುದಕ್ಕೆ ಕೊಡುಗೆ ನೀಡುತ್ತವೆ.

ಪ್ರಗತಿಶೀಲ ಸಾಹಿತ್ಯವನ್ನು ಆಯ್ಕೆಮಾಡಿ ಓದುತ್ತಿದ್ದಿರಾ?

ಹೇಳಬೇಕೆಂದರೆ, ಓದಿದರೆ ಪ್ರಗತಿಪರ ಸಾಹಿತ್ಯ ಯಾವುದು ಎಂಬುದು ತಿಳಿಯುತ್ತದೆ. ಇದು ಪ್ರೋಗ್ರೆಸಿವ್?, ಇದು ರಿಯಾಕ್ಷನರಿ ಎಂದು ಆಯ್ಕೆ ಮಾಡಿಕೊಂಡು ಪುಟ 6 ಕ್ಕೆ

ಕಲ್ಯಾಣ ಕಾಣದ ಈ ಕರ್ನಾಟಕ

ಸಂಪಾದಕೀಯ

ಕಲ್ಯಾಣ ಕರ್ನಾಟಕ–ಹೈದರಾಬಾದ್ ಕರ್ನಾಟಕದ ಅಭಿವೃದ್ಧಿಯನ್ನೇ ಪ್ರಧಾನ ಲಕ್ಷ್ಯವಾಗಿರಿಸಿ ಕಲ್ಬುರ್ಗಿಯಲ್ಲಿ ನಡೆದ ಕರ್ನಾಟಕ ಸರ್ಕಾರದ ಸಚಿವ ಸಂಪುಟದ ಸಭೆ ತನ್ನ ಘೋಷಿತ ಗುರಿಯನ್ನು ತಲುಪಿತೇ? ಎನ್ನುವುದು ಪರಿಶೀಲನಾರ್ಹ. ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಪ್ರದೇಶಗಳು ಎಂದೇ ಗುರುತಿಸಲಾದ ಉತ್ತರ ಕರ್ನಾಟಕ, ಹೈದ್ರಾಬಾದ್ ಕರ್ನಾಟಕ ಪ್ರದೇಶಗಳ ಅಭಿವೃದ್ಧಿಗೆ ಅಧಿಕಾರಕ್ಕೆ ಬಂದ ಬಹುತೇಕ ಸರ್ಕಾರಗಳು ತಮ್ಮದೇ ಯೋಜನೆಗಳನ್ನು ಘೋಷಿಸುವುದನ್ನು ಒಂದು ಸಂಪ್ರದಾಯದಂತೆ ಅನುಸರಿಸಿಕೊಂಡು ಬರಲಾಗುತ್ತಿದೆ. ಪ್ರಾದೇಶಿಕ ಅಸಮಾನತೆಯ ಕುರಿತ ಡಾ.ಡಿ.ಎಂ.ನಂಜುಡಪ್ಪನವರ ವರದಿ ಪ್ರಕಟವಾದ ಬಳಿಕ ಸರಕಾರಗಳಿಗೆ ಒಂದು ತಾತ್ವಿಕ ಹಾಗೂ ಆಡಳಿತತಾತ್ಮಕ ಚೌಕಟ್ಟು ದೊರೆತಿರುವುದು ನಿಜ.

ಆದರೆ ಅಲ್ಲಿ ಗುರುತಿಸಲಾದ ಅನಭಿವೃದ್ದಿ, ಹಿಂದುಳಿದಿರುವಿಕೆಯನ್ನು ಹೋಗಲಾಡಿಸಲು ಸಮಾಜದ ಮೂಲ ಸಂರಚನೆಯಲ್ಲಿ ಕೈಗೊಳ್ಳ ಬೇಕಾದ ಕ್ರಮಗಳ ಸಫಲತೆ ಮತ್ತು ವಿಫಲತೆಗಳ ಕುರಿತು ಮರು ಚಿಂತನೆಗಳೇ ಇಲ್ಲ, ಮೌಲ್ಯಮಾಪನವೂ ಇಲ್ಲ. ಹೀಗಾಗಿ ಈ ಪ್ರದೇಶಗಳ ಅಭಿವೃದ್ಧಿ ಮಾತು ನಾಲಿಗೆಯ ಮೇಲೆ ನಲಿದಾಡುವ ಮಾತಿನ ಮಟ್ಟಕ್ಕೆ, ಉತ್ತರ ಕರ್ನಾಟಕದ ಅಭಿವೃದ್ದಿ ಚಿಂತನೆಗೆ ಬೆಳಗಾವಿಯಲ್ಲಿ ಅಧಿವೇಶನ ನಡೆಸುವುದು, ಕಲ್ಬುರ್ಗಿಯಲ್ಲಿ ಭರ್ಜರಿ ಯಾಗಿ ಸಚಿವ ಸಂಪುಟದ ಸಭೆಗಳನ್ನು ನಡೆಸುವುದರಲ್ಲಿ ಸಂತೃಪ್ತಿ ಕಾಣಲಾಗುತ್ತಿದೆ. ಅಂದರೆ ಯಾವುದೇ ಯೋಜನೆಗಳು, ಕಾರ್ಯಕ್ರಮಗಳನ್ನು ಪ್ರಕಟಿಸುವುದು, ಅದಕ್ಕಿಂತಿಷ್ಟು ಹಣ ಹಂಚುವುದು ನಡೆಯುವುದಿಲ್ಲ ಎಂದೇನೂ ಅಲ್ಲ. ಅವೆಲ್ಲವನ್ನೂ ಮಾಡಲಾಗುತ್ತಿದೆ. ಆದರೆ 2002 ರಲ್ಲಿ ನಂಜುಂಡಪ್ಪನವರ ವರದಿ ನೀಡಿದ ಬಳಿಕ ಇದುವರೆಗಿನ ವರ್ಷಗಳಲ್ಲಿನ ಈ ಕ್ರಮಗಳು ಹಿಂದುಳಿದಿರುವಿಕೆಗೆ ಕಾರಣವಾದ ಸ್ಥಿತಿಯನ್ನು ಬದಲಾಯಿಸುತ್ತಿದೆಯೇ ಎನ್ನುವುದು.

ಈಗಲೂ ಮುಖ್ಯಮಂತ್ರಿ ಸಿದ್ಧರಾಮಯ್ಯ ನವರು 46 ಯೋಜನೆಗಳನ್ನು, ಅವುಗಳಿಗೆ ಒಟ್ಟು 11,770 ಕೋಟಿ ರೂ.ಗಳ ಮೊತ್ತವನ್ನು ಹಂಚಿಕೆ ಮಾಡಲಾಗಿದೆ ಎಂದು ಪ್ರಕಟಿಸಿದ್ದಾರೆ. ಈ ಪ್ರದೇಶಗಳಲ್ಲಿ ಹೊಸದಾಗಿ 45 ಪ್ರಾಥಮಿಕ ಆರೋಗ್ಯ ಕೇಂದ್ರಗಳು, 31 ಸಮುದಾಯ ಆರೋಗ್ಯ ಕೇಂದ್ರ, ಅಲ್ಲದೇ 9 ತಾಲೂಕು ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವುದು, 2 ತಾಲೂಕಾಸ್ಪತ್ರೆಗಳನ್ನ ಜಿಲ್ಲಾ ಆಸ್ಪತ್ರೆ ಮಟ್ಟಕ್ಕೆ ಪರಿವರ್ತಿಸುವುದು, ಅಲ್ಲದೆ ವಸತಿ ನಿಲಯ, ವಸತಿ ಶಾಲೆಗಳ ಆರಂಭ, ಕಟ್ಟಡ ನಿರ್ವಹಣೆಗೆ ಆಡಳಿತಾತ್ಮಕ ಒಪ್ಪಿಗೆ ಗಳು ಸೇರಿವೆ. ಇನ್ನೂ ಮುಖ್ಯವಾಗಿ ಈ ಪ್ರದೇಶದಲ್ಲಿ ಪ್ರತ್ಯೇಕವಾದ ಸೆಕ್ರೆಟಾರಿಯೇಟ್ ರಚನೆ ಮಾಡಿರುವುದು ಬಹುದಿನದ ಬೇಡಿಕೆ ಈಡೇರಿಸಿದಂತಾಗಿದೆ. ಕುಡಿಯುವ ನೀರಿಗಾಗಿ 7,200 ಕೋಟಿ ರೂ.ಗಳನ್ನು ಪ್ರಧಾನವಾಗಿ ಕಲ್ಬುರ್ಗಿ, ಬೀದರ್ ಗಳಿಗೆ ನೀಡಲಾಗಿದೆ. ಬೀದರ್ ಮತ್ತು ರಾಯಚೂರು ಮುನಿಸಿಪಲ್ ಕೌನ್ಸಿಲ್ ಗಳನ್ನು ಮಹಾನಗರ ಪಾಲಿಕೆಗಳಾಗಿ ಮೇಲ್ದರ್ಜೆಗೇರಿಸಲಾಗುವುದು. ಅಂದರೆ ಇಲ್ಲಿ ನಗರದ ಅಭಿವೃದ್ಧಿಗೆ ಹೆಚ್ಚುವರಿ ಸ್ಥಾನಮಾನವನ್ನು ಕಲ್ಪಿಸಲಾಗುವುದು. ಕಲ್ಬುರ್ಗಿ ನಗರವನ್ನು ಸ್ಮಾರ್ಟ್ ಸಿಟಿ ಯನ್ನಾಗಿ ಮಾಡಲು ರೂ.1685 ಕೋಟಿ ರೂಪಾಯಿಗಳ ಹಣವನ್ನು ನೀಡುವ ಭರವಸೆಯನ್ನು ನೀಡಲಾಗಿದೆ. ಈ ಭಾಗದಲ್ಲಿ ಇರುವ ಖಾಲಿ ಹುದ್ದೆಗಳಲ್ಲಿ 17,439 ಹುದ್ದೆಗಳಿಗೆ ಭರ್ತಿ ಮಾಡಲು ಅನುಮೋದನೆ ನೀಡಲಾಗಿದೆ ಎಂದು ಹೇಳಲಾಗಿದೆ.

ಈ ಭಾಗದ ಹಿಂದುಳಿದಿರುವಿಕೆಯನ್ನ ಲಕ್ಷಿಸಿ ಉದ್ಯೋಗ ಮತ್ತು ಶಿಕ್ಷಣದಲ್ಲಿ ವಿಶೇಷ ಮೀಸಲಾತಿಯನ್ನು ಕಲ್ಪಿಸಲು ಸಂವಿಧಾನದ 371 ಜೆ ತಿದ್ದುಪಡಿ ತಂದು ಜಾರಿಯಲ್ಲಿದೆ. ಆದರೆ ಇದರ ಅನುಷ್ಠಾನದ ಬಗೆಗೆ ಗಂಭೀರವಾದ ಪ್ರಯತ್ನಗಳಿಲ್ಲ. ಇಲ್ಲಿ ಆಗುತ್ತಿರುವ ಆಡಳಿತಾತ್ಮಕ ನಿರ್ಲಕ್ಷ ಮತ್ತು ವಂಚನೆಗಳ ಕುರಿತಾದ ಪರಿಶೀಲನೆ ಇಲ್ಲ. ಮುಖ್ಯವಾಗಿ ಈ ಭಾಗದ ಜನಪ್ರತಿನಿಧಿಗಳು–ಶಾಸಕರು, ಸಂಸದರು, ಮಂತ್ರಿಗಳ ನಿಷ್ಕಾಳಜಿ ಖಂಡನೀಯವಾದದ್ದು. ಈಗಲಾದರೂ 371 ಜೆ ವಿಧಿಯ ಅನುಷ್ಠಾನದ ಕುರಿತಾದಂತೆ ವಿಮರ್ಶೆ ಮಾಡಲಾಗುವುದು ಎನ್ನುವ ಸಂಪುಟದ ನಿರ್ಧಾರ ಸ್ವಲ್ಪ ಸಮಾಧಾನಕರ ಅಂಶ.

ಹಿಂದಿನಿಂದ ಸಂಪುಟ ಅಂಗೀಕರಿಸಿದ ಯೋಜನೆಗಳಿಗೆ ಹಣ ನೀಡಲಾಗುತ್ತಿದೆ. ಪ್ರಾದೇಶಿಕ ಅಸಮಾನತೆಯ ಕುರಿತಾದ ಉನ್ನತ ಅಧಿಕಾರ ಸಮಿತಿಯು ಅಧ್ಯಯನ ಮಾಡಿ ನೀಡಿದ ಡಾ.ಡಿ.ಎಂ. ನಂಜುಂಡಪ್ಪ ಅವರ ವರದಿ 2002ರಲ್ಲಿ ಸಲ್ಲಿಕೆಯಾಗಿತ್ತು. ಅದರಂತೆ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಸರ್ಕಾರ 19,778 ಕೋಟಿ ಅನುದಾನ ಹಂಚಿಕೆ ಮಾಡಿತ್ತು. ಅದರಲ್ಲಿ 13,299 ಕೋಟಿ ಬಿಡುಗಡೆ ಮಾಡಿದೆ, ಇದರಲ್ಲಿ 11,374 ಕೋಟಿ ಖರ್ಚು ಮಾಡಲಾಗಿದೆ. ಒಟ್ಟು 35,885 ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು 27,264 ಕಾಮಗಾರಿಗಳು ಪೂರ್ಣಗೊಳಿಸಲಾಗಿದೆ ಎಂದು ಹೇಳಲಾಗುತ್ತಿದೆ. ಇಲ್ಲಿಯವರೆಗೂ ಈ ಭಾಗದ ಅಭಿವೃದ್ಧಿಗೆ ಸಾಮಾನ್ಯ ಬಜೆಟ್ ಹಣ ಅಲ್ಲದೇ ಬಂದ ವಿಶೇಷ ಅನುದಾನ ಇದು.

ಇವೆಲ್ಲವನ್ನೂ ತುಲನೆ ಮಾಡಿ, ನಿಜಕ್ಕೂ ಪ್ರಾದೇಶಿಕ ಅಸಮಾನತೆಯನ್ನು ತೊಲಗಿಸುವಲ್ಲಿ ಇವೆಲ್ಲ ಯೋಜನೆಗಳು ಮತ್ತು ಹಣಕಾಸು ನೀಡಿಕೆ ನಿಜಕ್ಕೂ ಪರಿಹಾರ ಮತ್ತು ಪ್ರಯೋಜನವನ್ನು ತಂದಿದೆಯೇ ಎಂದು ನೋಡಿದಾಗ ಫಲಿತಾಂಶ ಅತ್ಯಂತ ದುರ್ಬಲ. ಬಹು ಮುಖ್ಯವಾಗಿ, ನಂಜುಂಡಪ್ಪನ ನವರ ವರದಿಯಲ್ಲಿನ ಶಿಫಾರಸು ಸಲಹೆಗಳನ್ನು ಗಮನದಲ್ಲಿರಿಸಿದಾಗಲೂ ಮತ್ತು ನಂತರದಲ್ಲಿ ಸರ್ಕಾರ ಕೈಗೊಂಡ ಯೋಜನೆ ದೃಷ್ಟಿಕೋನ ಮತ್ತು ಜಾರಿಯ ವಿಧಾನಗಳು ಈ ಭಾಗದಲ್ಲಿನ ಪ್ರಾದೇಶಿಕ ಅಸಮಾನತೆ ಮತ್ತು ವಿಶೇಷವಾಗಿ ಬಡತನದ ಈ ಹಿಂದುಳಿದರವಿಕೆಗೆ ಕಾರಣವಾದ ಮೂಲಭೂತ ಅಂಶಗಳನ್ನು ನಿವಾರಿಸಲು ಗಮನ ನೀಡದೆ ಇರುವುದು ಕಂಡು ಬರುತ್ತದೆ. ಡಾ.ಡಿ.ಎಂ.ನಂಜುಂಡಪ್ಪನವರ ವರದಿಯು ಈ ಭಾಗದ ಸಮಸ್ಯೆಗಳನ್ನು ಗುರುತಿಸಿದೆ. ಆದರೆ ಮೂಲಭೂತ ಪರಿಹಾರ ಸೂಚಿಸುವಲ್ಲಿ ಸೋತಿದೆ.

ಈ ಭಾಗದ ಬಡತನ, ಅತ್ಯಂತ ಹಿಂದುಳಿದಿರುವಿಕೆಯ ಪ್ರಧಾನ ಕಾರಣ ಅತ್ಯಧಿಕ ಪ್ರಮಾಣದಲ್ಲಿ ಭೂಹೀನರಿರುವುದು ಮತ್ತು ಅವರು ಕೃಷಿಕೂಲಿಕಾರರಾಗಿ ದುಡಿಯುತ್ತಿರುವುದು. ಮತ್ತು ಕೆಲವೇ ಜನರಲ್ಲಿ ಭೂಮಿಯ ಕೇಂದ್ರೀಕರಣವಾಗಿರುವುದು. ಈ ಪ್ರಧಾನ ಪ್ರಶ್ನೆಯನ್ನು ಇತ್ಯರ್ಥ ಪಡಿಸದೇ, ಈ ಪ್ರದೇಶದಲ್ಲಿನ ಕೈಗಾರಿಕೆಗಳ ಬೆಳವಣಿಗೆಗೆ ಒತ್ತು ನೀಡದೆ ಪ್ರಾದೇಶಿಕ ಅಸಮಾನತೆಯನ್ನು ಮತ್ತು ಅದಕ್ಕೆ ಅಂಟಿಕೊಂಡಿರುವ ಬಡತನ ಮತ್ತು ದಾರಿದ್ರ ಶೈಕ್ಷಣಿಕ ಸಾಂಸ್ಕೃತಿಕ ಹಿಂದುಳಿದಿರುವಿಕೆಯನ್ನು, ಸಾಮಾಜಿಕ ಧಮನವನ್ನು ನಿವಾರಿಸುವುದು ಅಸಾಧ್ಯ. ಈ ಪ್ರಶ್ನೆಗಳಿಗೆ ಗಮನ ಕೊಡದೆ ಇಲ್ಲಿಯವರೆಗೂ ಈ ಸರ್ಕಾರಗಳು ನಿರ್ಲಕ್ಷ ತೋರಿಸುತ್ತಾ ಬಂದಿವೆ. ಮತ್ತು ಪ್ರಜ್ಞಾಪೂರ್ವಕವಾದ ನಿರ್ಲಕ್ಷತನ ಎದ್ದು ಕಾಣುತ್ತದೆ. ಅಂದರೆ ಈ ಸರ್ಕಾರಗಳಿಗೆ ಇಲ್ಲಿಯ ಭೂ ಸಂಬಂಧಗಳನ್ನು ಬದಲಾಯಿಸುವ ಮೂಲಭೂತ

ಪುಟ 12 ಕ್ಕೆ

ತಿರುಪತಿಯ ಲಡ್ಡಿನಲ್ಲಿ ಹಲವು ಕಲಬೆರೆಕೆಗಳು!

ಈ ವಾರ

ಎಸ್.ವೈ.ಗುರುಶಾಂತ್

ತಿರುಪತಿ ತಿಮ್ಮಪ್ಪನ ದೇವಸ್ಥಾನದ ಪ್ರಸಾದ ಲಡ್ಡು. ಈ ಲಡ್ಡು ವಿಭಿನ್ನ ರುಚಿ ಇರುವ ಕಾರಣದಿಂದಲೂ ಅತ್ಯಂತ ಸುಪ್ರಶಿದ್ದ, ಹಾಗಾಗಿ ಲಡ್ಡಿಗೆ ಭಾರೀ ಬೇಡಿಕೆ. ಈ ಬೇಡಿಕೆಗೆ ಅನುಗುಣವಾಗಿ ಪೂರೈಕೆಯೂ ಕಷ್ಟ ಸಾಧ್ಯವಾಗುವುದಿಲ್ಲ ವಾದ್ದರಿಂದ ಬೇಡಿಕೆಯೆನೂ ತಗ್ಗುವುದಿಲ್ಲ.

ತಿರುಪತಿ ಗೆ ಹೋಗಿ ತಿಮ್ಮಪ್ಪ, ಅಲುಮೇಲ ಮಂಗಮ್ಮನ ದರ್ಶನ ಮಾಡಿ ಬಂದವರು ಪ್ರಸಾದ, ಕೈಗೆ ಕಟ್ಟುವ ಮುಂಗೈ ದಾರ, ನಾಮ ವಿಭೂತಿ, ಫೋಟೋ ಇತ್ಯಾದಿಗಳಿಗೆ ಪೂಜೆ ಸಲ್ಲಿಸಿ ತಮ್ಮ ಆಪ್ತರಿಗೆ ಪ್ರಸಾದ ಹಂಚುವುದು ವಾಡಿಕೆ. ಬಹು ಹಿಂದೆ ಅಲ್ಲಿಯ ಕಾಳಹಸ್ತಿಗೂ ಹೋಗಿ ಬಂಗಾರದ ಹಲ್ಲಿ ದರ್ಶನ ಮಾಡಿ ಬಂದವರಿಗೆ ಹಾಗೂ ಅಲ್ಲಿಂದ ತಂದ ಫೋಟೋಗೆ ನಮಸ್ಕರಿಸಿದರೆ ಹಲ್ಲಿ ಬಿದ್ದ ದೋಷ ನಿವಾರಣೆ ಆಗುತ್ತದೆ ಎಂಬ ನಂಬಿಕೆ. ತಿರುಪತಿಗೆ ಹೋಗಿ ಬರುವುದು ಎನ್ನುವುದು ಆ ಕಾಲದಲ್ಲಿ ಜೀವಮಾನದ ಒಂದು ಸಾಧನೆಯೂ ಆಗಿರುತ್ತಿತ್ತು. ತಿರುಪತಿ ತಿಮ್ಮಪ್ಪನಿಗೂ ಭಾರತದ ಹಲವಾರು ಸಮುದಾಗಳಿಗೂ ಇರುವ ನಂಟು ಚಾರಿತ್ರಿಕ, ಧಾರ್ಮಿಕ, ಸಾಂಸ್ಕೃತಿಕ ವೂ ಆಗಿದೆ. ಕರ್ನಾಟಕದ ಮೂಲೆ ಮೂಲೆಗಳಲ್ಲಿ ಭಕ್ತ ಸಮೂಹವಿದೆ. ಇಂತಹ ಅನೇಕ ಕಾರಣಗಳಿಂದ ಭಕ್ತಸಾಗರದಲ್ಲಿ ಇಳಿಕೆಯಾಗಿಯೇ ಇಲ್ಲ, ಹೆಚ್ಚುತ್ತಲೇ ಇದೆ.

ಪ್ರತಿ ವರ್ಷದ ಆದಾಯವೂ ಸಾವಿರಾರು ಕೋಟಿಗೂ ಮೀರಿ ಖಜಾನೆ ತುಂಬಿ ಹರಿಯುತ್ತದೆ. ತಿರುಪತಿ ದೇವಸ್ಥಾನ ಪ್ರಪಂಚದಲ್ಲೇ ಅತ್ಯಂತ ಸಿರಿವಂತಿಕೆಯ ದೇವಸ್ಥಾನ. ಅದರ ಒಟ್ಟು ಸಂಪತ್ತು 3 ಲಕ್ಷ ಕೋಟಿಗೂ ಮೀರಿದೆ! ಕಳೆದ 2023–24 ರಲ್ಲಿ ವಾರ್ಷಿಕ ಹುಂಡಿ ಆದಾಯ 1611 ಕೋಟಿ ರೂ. ಗಳು. ಹೂಡಿಕೆಯ ಮೇಲಿನ ಬಡ್ಡಿ 1167 ಕೋಟಿ.ರೂ.ಗಳು. ಅಲ್ಲಿ ಮಾರುವ ಪ್ರಸಾದದಿಂದ 600 ಕೋಟಿ ರೂ.ಗಳ ಗಳಿಕೆ, ದರ್ಶನದ ಟಿಕೇಟಿನಿಂದ 338 ಕೋಟಿ.ರೂ.ಗಳು, ಅರ್ಜಿತ ಸೇವೆಯಿಂದ 150 ಕೋಟಿ ರೂ.ಗಳು ಹೀಗೆ ಇವನ್ನೆಲ್ಲವನ್ನೂ ಒಳಗೊಳಿಸಿ 2024–25 ರ ಸಾಲಿನಲ್ಲಿ 5141.74 ಕೋಟಿ ರೂಪಾಯಿಗಳ ಬಜೆಟ್ ಗೆ ತಿರುಪತಿ ತಿರುಮಲ ದೇವಸ್ಥಾನಂ ಟ್ರಸ್ಟ್ ಅಂಗೀಕಾರ ನೀಡಿದೆ. ಇನ್ನು ಉಳಿದ ಆದಾಯದ ಮೂಲಗಳು ಅನೇಕ. ಅರ್ಚಕರಿಗೂ ಅಲ್ಲಿ ಸಂಬಳ ಇದೆ. ಆದರೆ ಹಲವಾರು ದೇವಸ್ಥಾನಗಳನ್ನು ನೋಡಿದರೆ ನೇರ ಆದಾಯಗಳನ್ನು ಮೀರಿದ ಆದಾಯ ಇದ್ದೇ ಇರುತ್ತದೆ. (ತಟ್ಟೇ ಕಾಸು/ದಕ್ಷಿಣೆ). ಕೆಲವು ವರ್ಷಗಳ ಹಿಂದೆ ಸ್ವಾಮಿಯ ಸೇವೆ ಮಾಡುವ ಪ್ರಧಾನ ಅರ್ಚಕರ ಮಗಳ ಮದುವೆಗೆ ಹಾಕಿದ ಬಂಗಾರದ ಆಭರಣ (ತಗಡಿನ ಹೊದಿಕೆ ಎನ್ನಬಹುದು) ಪ್ರಮಾಣವೇ ಪ್ರಮಾಣೀಕರಣ!

ಹೀಗೆ ಅನೇಕ ಸಂಗತಿಗಳು, ಓರೆಕೋರೆಗಳು ಇದ್ದಾಗ್ಯೂ ಸಾರ್ವಜನಿಕರ ಈ ಹಣ ಸಾರ್ವಜನಿಕರ ಉದ್ದೇಶಕ್ಕಾಗಿಯೇ ಸರ್ಕಾರ ಬಳಸುತ್ತದೆ ಎನ್ನುವುದು ಅತ್ಯಂತ ಮಹತ್ವದ ಸಂಗತಿಯಾಗಿದೆ.

ಇಂತಹ ಧೈವ ಕ್ಷೇತ್ರದಲ್ಲಿ ಭಾರಿ ಹಗರಣವೊಂದು ನಡೆದಿರುವ ಆರೋಪದ ಸುದ್ದಿ ಹೊರ ಬಂದಿದೆ. ಅಲ್ಲಿನ ಲಡ್ಡು ತಯಾರಿಕೆಯಲ್ಲಿ ಬಳಸಲಾಗುವ ತುಪ್ಪದಲ್ಲಿ ಮೀನಿನ ಎಣ್ಣೆ,ದನಗಳ ಮತ್ತು ಹಂದಿಗಳ ಕೊಬ್ಬು ಮಿಶ್ರಣ ಮಾಡಿರುವುದು ಪ್ರಯೋಗಾಲಯದ ಪರೀಕ್ಷೆಯಲ್ಲಿ ಕಂಡು ಬಂದಿದೆ ಎಂದು ಸ್ವತಃ ಆಂದ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ವೇ ಎಮ್.ಡಿ.ಎ.ಶಾಸಕರ ಸಭೆಯಲ್ಲಿ ಹೇಳಿದ್ದಾರೆ. ಅದನ್ನು ಸಮರ್ಥಿಸುವ ಪ್ರಯೋಗಾಲಯದ ರಿಪೋರ್ಟ್ ತೋರಿಸಿದ್ದಾರೆ. ಇದು ಲಡ್ಡು ತಯಾರಿಕೆಯ ಪದಾರ್ಥಗಳ ಬಳಕೆಯ ಗುಣಮಟ್ಟ, ಮಾನದಂಡಗಳ ನಗ್ನ ಉಲ್ಲಂಘನೆ ಮತ್ತು ಕಲಬೆರೆಕೆಯ ಭಾರಿ ವಂಚನೆ ಆಗಿದೆ ಎಂದಾಯ್ತು. ಪ್ರಸಾದ ಪವಿತ್ರವೆಂದು ನಂಬಿ ಸ್ವೀಕರಿಸುವ ಭಕ್ತರಿಗೆ ಈ ಸುದ್ದಿ ದಿಗ್ಭ್ರಮೆ ತಂದಿದೆ. ಕಲಬೆರಕೆಯಾಗಿದ್ದಲ್ಲಿ ಭಕ್ತರ ಧಾರ್ಮಿಕ ನಂಬಿಕೆಗಳಿಗೆ ಬಗೆದ ವಂಚನೆಯಾಗಿದ್ದು ಇದು ಅಘಾತಕಾರಿ ಎಂದು ಆಕ್ರೋಶವೂ ವ್ಯಕ್ತವಾಗಿದೆ.

ಈ ಬಗ್ಗೆ ಖಂಡಿತಕ್ಕೂ ಸೂಕ್ತ ತನಿಖೆ ಆಗಲೇಬೇಕು, ತಕ್ಕ ಕಠಿಣ ಶಿಕ್ಷೆ ಆಗಲೇಬೇಕು. ಕೇವಲ ಧಾರ್ಮಿಕ ಎನ್ನುವುದಕ್ಕೆ ಮಾತ್ರ ಅಲ್ಲ, ಕಳಪೆ, ಕಲಬೆರಕೆ ಗುಣ ಮಟ್ಟದ ಉತ್ಪನ್ನ, ವಂಚನೆ ಯಂತಹ ಪ್ರಶ್ನೆಗಳ ಆಧಾರದಲ್ಲೂ.

ಈ ಪ್ರಕರಣ ಈಗ ಇನ್ನೂ ಒಂದಷ್ಟು ಮುಂದಕ್ಕೆ ಹೋಗುತ್ತಿದೆ. ಹಿಂದೆ 2020 ರಲ್ಲಿ ಇಲ್ಲಿನ ಲಡ್ಡು ತಯಾರಿಕೆಯಲ್ಲಿ ಬಳಸುವ ತುಪ್ಪವನ್ನು ಕದ್ದು ಕಡಿಮೆ ಬೆಲೆಗೆ ಹೊರಗೆ ಮಾರಲಾಗುತ್ತಿದೆ, ಅದನ್ನು ಖರೀದಿಸಿದವರು ಹೆಚ್ಚಿನ ಬೆಲೆಗೆ ಮಾರಲಾಗುತ್ತಿರುವ ಭ್ರಷ್ಟ ಪ್ರಕರಣವದು. ಅದರ ವಿಚಾರಣೆಯೂ ನಡೆದಿದೆ.

ಈಗ ಹೊರ ಬಂದಿರುವ ಹಗರಣದ ತನಿಖೆ, ಅದರಲ್ಲಿ ಯಾರ ಪಾತ್ರ ಏನು ಎನ್ನುವುದಿನ್ನೂ ತಿಳಿದಿಲ್ಲ. ಅದು ಗಂಭಿರ ಆಳ ತನಿಖೆಯ ನಂತರವೇ ಬರಬೇಕು. ಆದರೆ ಕೆಲವರು ವಿಚಿತ್ರ ವಾದ ವೈಖರಿ ಮಂಡಿಸುತ್ತಾ ಅಪರಾಧಿಯ ಶೋದ ಮುಗಿಸಿಯೇ ಬಿಟ್ಟಿದ್ದಾರೆ. ಅವರ ತನಿಖೆಯ ಜಾಡು ಹೀಗಿದೆ. ನಡೆದಿರುವುದು ಯಾರ ಕಾಲದಲ್ಲಿ? ಆಗ ಮುಖ್ಯಮಂತ್ರಿ ಆಗಿದ್ದವರು ಯಾರು? ವೈ.ಎಸ್. ಆರ್. ಕಾಂಗ್ರೆಸ್ ನ ಜಗನ್ ಮೋಹನರೆಡ್ಡಿ ಅಲ್ಲವೇ?. ಈತ ಕ್ರಿಶ್ಚಿಯನ್ ಮತಧರ್ಮಕ್ಕೆ ಸೇರಿದಾತ. ಹಾಗಾಗಿ ಹಿಂದುಗಳ ಪಾವಿತ್ರ್ಯ ರಕ್ಷಣೆ ಆಗಲು ಸಾಧ್ಯವೇ? ಎನ್ನುವ ವಾದ. ಅದರಲ್ಲೂ ವಾಟ್ಸ್ ಅಪ್ ಯೂನಿವರ್ಸಿಟಿ ಯಲ್ಲಿ ಭರ್ಜರಿ ಪ್ರಚಾರ ಆರಂಭಗೊಂಡಿದೆ.

ಬಿಜೆಪಿಯ ನೇತೃತ್ವದ ಎನ್.ಡಿ.ಎ. ಭಾಗವಾಗಿರುವ ತೆಲುಗು ದೇಶಂನ ಚಂದ್ರಬಾಬು ನಾಯ್ಡು ಸರ್ಕಾರದಲ್ಲಿ ಉಪ ಮುಖ್ಯಮಂತ್ರಿಯಾಗಿರುವ ಪವನ್ ಕಲ್ಯಾಣ್ 'ಸನಾತನ ಧರ್ಮವನ್ನು ರಕ್ಷಿಸಲು ಏನೆಲ್ಲವನ್ನೂ ಮಾಡಬೇಕಿದೆ' ಎಂದು ಹೇಳಿದ್ದಾರೆ. ಮುಂದುವರಿದು 'ರಾಷ್ಟ್ರ ಮಟ್ಟದಲ್ಲಿ ಸನಾತನ ಧರ್ಮ ರಕ್ಷಣಾ ಮಂಡಳಿ ರಚಿಸುವ ಕಾಲವೀಗ ಬಂದಿದೆ. ಅದು ದೇಶದ ಎಲ್ಲಾ ದೇವಸ್ಥಾನ ಗಳಿಗೆ ಸಂಬಂಧಿಸಿದ ವಿಷಯಗಳನ್ನು ನೋಡಿಕೊಳ್ಳಬೇಕು 'ಎಂದು ಸಾಮಾಜಿಕ ಮಾಧ್ಯಮದಲ್ಲಿ ಬರೆದು ಕೊಂಡಿದ್ದಾರೆ! ಇದಕ್ಕೆ ತತ್ ಕ್ಷಣವೇ ಪ್ರತಿಕ್ರಿಯಿಸಿರುವ ಖ್ಯಾತ ನಟ ಪ್ರಕಾಶ್ ರೈ ಯವರು 'ಪ್ರಿಯ ಪವನ್ ಕಲ್ಯಾಣ್ ರವರೇ, ನೀವು ಸರ್ಕಾರದಲ್ಲಿ ಉಪ ಮುಖ್ಯಮಂತ್ರಿ ಆಗಿರುವ ರಾಜ್ಯದಲ್ಲಿನ ಸಮಸ್ಯೆ. ಅದನ್ನು ತನಿಖೆ ಮಾಡಿ, ಅಪರಾಧಿಗಳನ್ನು ಪತ್ತೆ ಹಚ್ಚಿ, ಶಿಕ್ಷೆ ಕೊಡಿಸಿ' ಎಂದಿದ್ದಾರೆ. ಅಂದರೆ ಇದನ್ನು ರಾಷ್ಟ್ರೀಯ ಮಟ್ಟಕ್ಕೆ ಹಬ್ಬಿಸುವ ಉದ್ದೇಶವನ್ನು ಪ್ರಶ್ನಿಸಿ, ಟೀಕಿಸಿದ್ದಾರೆ. ಪವನ್ ಕಲ್ಯಾಣ್ ಇಂತಹ ಮಾತುಗಳನ್ನು ವಿವೇಕದಿಂದ ತೆಗೆದುಕೊಳ್ಳುವ

ಪುಟ 12 ಕ್ಕೆ



ಸೆಪ್ಟೆಂಬರ್ 17 ಒಂದು ಐತಿಹಾಸಿಕ ಸಂದರ್ಭವಾಗಿದೆ. ಈ ದಿನವನ್ನು ಹೈದರಾಬಾದ್ ಕರ್ನಾಟಕ ಮತ್ತು ತೆಲಂಗಾಣ ಜನರು ವಿಮೋಚನಾ ದಿನವನ್ನಾಗಿ ಸಂಭ್ರಮದಿಂದ ಆಚರಿಸುತ್ತಾರೆ. ಇದು ಮುಸ್ಲೀಂ ರಾಜನ ವಿರುದ್ಧ ಹಿಂದೂಗಳ ಜಯ ಎಂಬಂತೆ ಆರೆಸ್ಸೆಸ್ ಮತ್ತು ಬಿಜೆಪಿ ಬಿಂಬಿಸುತ್ತಿದ್ದರೆ, ನೆಹರೂ ಮತ್ತು ಸರ್ಧಾರ್ ಪಟೇಲ್ ಸರ್ಕಾರ ನಿಜಾಮರ ವಿರುದ್ಧ ಯುದ್ಧ ಮಾಡಿ ಹೈದರಾಬಾದ್ ಪ್ರಾಂತ್ಯವನ್ನು ಭಾರತದ ಒಕ್ಕೂಟದಲ್ಲಿ ವಿಲೀನಗೊಳಿಸಿತು ಎಂದು ಕಾಂಗ್ರೆಸ್ ನವರು ಹೇಳುತ್ತಿದ್ದಾರೆ. ಅಂದಿನ ರಾಜ ನಿಜಾಮ್ ಮತ್ತು ಊಳಿಗಮಾನ್ಯ ಪದ್ಧತಿ ಹಾಗೂ ಜಮೀನ್ದಾರಿ ವ್ಯವಸ್ಥೆಯ ವಿರುದ್ಧ ಮತ್ತು ಭೂಮಿಗಾಗಿ, ಕೂಲಿ ಹೆಚ್ಚಳಕ್ಕಾಗಿ ಹಾಗೂ ವೆಟ್ಟಿ ಚಾಕರಿ ವಿರುದ್ಧ ನಡೆದ ರೈತರ ಸಶಸ್ತ್ರ ಹೋರಾಟ, ಈ ಸಶಸ್ತ್ರ ಹೋರಾಟಕ್ಕೆ ಕಮ್ಯೂನಿಸ್ಟರು ನೀಡಿದ ನಾಯಕತ್ವ, ಇವೆಲ್ಲವೂ ವಿಮೋಚನೆಗೆ ಕಾರಣ ಎಂಬ ನಿಜವಾದ ಇತಿಹಾಸವನ್ನು ಇವರು ಮರೆಮಾಚುತ್ತಿದ್ದಾರೆ. ಸೆಪ್ಟೆಂಬರ್ 17 ರಂದು ನಿಜವಾಗಿ ಏನಾಯಿತು?

ಹೈದರಾಬಾದ್ ವಿಮೋಚನೆ: ನಿಜವಾಗಿ ನಡೆದಿದ್ದೇನು?

ಸಿ.ಸಿದ್ದಯ್ಯ

ಇದೇ ಸೆಪ್ಟೆಂಬರ್ 17ರಂದು ಕಾಂಗ್ರೆಸ್ ನೇತೃತ್ವದಲ್ಲಿನ ಕರ್ನಾಟಕ ರಾಜ್ಯ ಸರ್ಕಾರ ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ "ವಿಮೋಚನಾ ದಿನ"ವನ್ನಾಗಿ ಆಚರಿಸಿತು. ರಾಜ್ಯದ ಮುಖ್ಯ ಮಂತ್ರಿಯಾದಿಯಾಗಿ ಹಲವು ಸಚಿವರು, ಶಾಸಕರು, ಸಂಸದರು ಕಲ್ಯಾಣ ಕರ್ನಾಟಕದ ಹಲವು ಪ್ರದೇಶಗಳಲ್ಲಿ ವಿಮೋಚನಾ ದಿನದಂದು ಸಭೆ ಸಮಾರಂಭಗಳಲ್ಲಿ ಭಾಗಿಯಾಗಿದ್ದರು.

ಬಿಜೆಪಿಯು ಎರಡು ತೆಲುಗು ರಾಜ್ಯಗಳಲ್ಲಿ ತನ್ನ ಅನುಯಾಯಿಗಳು ಬಿಡುಗಡೆ ಮಾಡಿದ "ರಜಾಕಾರ" ಎಂಬ ತೆಲುಗು ಚಲನಚಿತ್ರವನ್ನು ವ್ಯಾಪಕವಾಗಿ ಪ್ರಚಾರ ಮಾಡುವ ಮೂಲಕ ಅಂದಿನ ಸಶಸ್ತ್ರ ರೈತರ ಹೋರಾಟವನ್ನು ಕೋಮು ಘರ್ಷಣೆ ಎಂದು ಬಿಂಬಿಸಲು ಪ್ರಯತ್ನಿಸಿದೆ. ನಿರಂತರವಾಗಿ ಅದನ್ನೇ ಪ್ರಚಾರ ಮಾಡುತ್ತಿದೆ. ಒಂದು ಧರ್ಮವು ಇನ್ನೊಂದು ಧರ್ಮದಿಂದ ವಿಮೋಚನೆಯನ್ನು ಸಾಧಿಸಿದೆ ಎಂದು ಹೇಳುವ ಮೂಲಕ ಇತಿಹಾಸವನ್ನು ತಿರುಚಲು ಬಿಜೆಪಿ ಹೊರಟಿದೆ.

ಮತ್ತೊಂದಡೆ, ಕಾಂಗ್ರೆಸ್ ಪಕ್ಷವು, ಹೈದಾರಾಬಾದ್ ವಿಮೋಚನೆ ನೆಹರೂ ಮತ್ತು ಸರ್ಧಾರ್ ಪಟೇಲ್ ಅವರ ದಿಟ್ಟ ನಿರ್ಧಾರದಿಂದ ಆಗಿದೆ ಎನ್ನುತ್ತಾ, ಅಂದಿನ ನಿಜಾಮರ ದಬ್ಬಾಳಿಕೆ ವಿರುದ್ದ ಮತ್ತು ಊಳಿಗಮಾನ್ಯ ಪದ್ದತಿ, ಜಮೀನ್ದಾರಿ ವ್ಯವಸ್ಥೆಯ ವಿರುದ್ಧ ನಡೆದ ತೆಲಂಗಾಣ ರೈತರ ಸಶಸ್ತ್ರ ಹೋರಾಟ, ಈ ಕಾರಣಕ್ಕಾಗಿ ಅಂದಿನ ನೆಹರೂ–ಸರ್ಧಾರ್ ಪಟೇಲ್ ಸರ್ಕಾರ ನಿಜಾಮ್ ಮೀರ್ ಒಸ್ಮಾನ್ ಅಲಿ ಖಾನ್ ಜೊತೆ ಮಾಡಿಕೊಂಡ ಒಪ್ಪಂದ, ಹೈದರಾಬಾದ್ ವಿಮೋಚನೆಯ ನಂತರ ಭಾರತ ಸರ್ಕಾರದ ಸೈನಿಕರು ರೈತರ ಸಶಸ್ತ್ರ ಹೋರಾಟವನ್ನು ಹತ್ತಿಕ್ಕಿದ್ದು, ಇದರಿಂದ ಸಾವಿರಾರು ರೈತರು ಪ್ರಾಣ ಕಳೆದುಕೊಂಡಿದ್ದು.. ಇವೆಲ್ಲವನ್ನೂ ಮರೆಮಾಚಲು ಪ್ರಯತ್ನಿಸುತ್ತಿದ್ದಾರೆ.

ಪಾಳೆಯಗಾರರ ಮತ್ತು ಜಮೀನ್ದಾರರ ದಬ್ಬಾಳಿಕೆ

ಹೈದಾರಾಬಾದ್ ರಾಜವಂಶವು ತೆಲಂಗಾಣ ಮತ್ತು ಬಾಗಶಃ ಕನ್ನಡ, ಮರಾಠಿ ಮತ್ತು ಉರ್ದು ಮಾತನಾಡುವ ಜನರನ್ನು ಒಳಗೊಂಡ ಪ್ರದೇಶವಾಗಿತ್ತು. ಇದು ಭಾರತವು ಸ್ವಾತಂತ್ರ್ಯ ಪಡೆದಾಗ ಅತಿದೊಡ್ಡ ರಾಜಪ್ರಭುತ್ವದ ರಾಜ್ಯಗಳಲ್ಲಿ ಒಂದಾಗಿತ್ತು. ಈ ಪ್ರದೇಶದಲ್ಲಿ ದೊಡ್ಡ ಜಮೀನ್ದಾರರು ಸಾವಿರಾರು ಎಕರೆ ಭೂಮಿಯನ್ನು ಹೊಂದಿದ್ದರು. ಅವರು ರೈತರು ಮತ್ತು ಕೂಲಿಕಾರರನ್ನು ತೀವ್ರ ದಮನಕ್ಕೆ ಒಳಪಡಿಸಿದ್ದರು ಮತ್ತು ಅವರ ಶ್ರಮದ ತೀವ್ರ ಶೋಷಣೆ ಮಾಡುತ್ತಿದ್ದರು. ಇದನ್ನು ಪ್ರಶ್ನಿಸಿದ ರೈತರ ಮೇಲೆ ಜಮೀನ್ದಾರರ ಗೂಂಡಾಗಳು ತೀವ್ರ ಹಲ್ಲೆ ಮಾಡಿ ಕೊಲ್ಲುತ್ತಿದ್ದರು. ಹಿಂದೂ ಜಮೀನ್ದಾರರ ಈ ಕ್ರೂರ ದಾಳಿಗಳಿಗೆ ಮುಸ್ಲೀಂ ರಾಜ ನಿಜಾಂ ಸೈನಿಕರ ಬೆಂಬಲವಿತ್ತು. ಇದರ ವಿರುದ್ದ ಸೆಟೆದು ನಿಂತ ರೈತರು ಕಮ್ಯೂನಿಸ್ಟರ ನಾಯಕತ್ವದಲ್ಲಿ ಸಶಸ್ತ್ರ ಹೋರಾಟಕ್ಕೆ ಮುಂದಾದರು.

ಜಮೀನ್ದಾರಿ ವ್ಯವಸ್ಥೆಯ ವಿರುದ್ಧ ರೈತರ ಸಶಸ್ತ್ರ ಹೋರಾಟ

ಜುಲೈ 4 ಮತ್ತು ಸೆಪ್ಟೆಂಬರ್ 10ರ ಮಹತ್ವವನ್ನು ಒಟ್ಟಿಗೆ ನೋಡಿದಾಗ ಮಾತ್ರ ಸೆಪ್ಟೆಂಬರ್ 17ರ ವಿಶಿಷ್ಟತೆಯುಳ್ಳ ವಿಮೋಚನೆಯು ಸಂಪೂರ್ಣವಾಗಿ ಅರ್ಥವಾಗುತ್ತದೆ.

ಜಮೀನ್ದಾರನಾದ ವಿಸ್ನೂರಿನ ದೇಶಮುಖ ಹಾಗೂ ರಾಮಚಂದ್ರ ರೆಡ್ಡಿಯ ಗೂಂಡಾಗಳ ದಾಳಿಗೆ ದೊಡ್ಡಿ ಕೋಮರಯ್ಯ ಬಲಿಯಾದ ದಿನ ಜುಲೈ 4. ಅದೇ ಜಮೀನ್ದಾರನ ದಾಳಿಯಿಂದ ತನ್ನನ್ನು ಮತ್ತು ತನ್ನ ಬೆಳೆಯನ್ನು ರಕ್ಷಿಸಲು ಸಾಹಸದಿಂದ ಹೋರಾಡಿದ ಐಲಮ್ಮನ ವರ್ದಂತಿ ಸೆಪ್ಟೆಂಬರ್ 10. ಈ ಊಳಿಗಮಾನ್ಯ ಪದ್ದತಿ, ಜಮೀನ್ದಾರಿ ವ್ಯವಸ್ಥೆಯ ವಿರುದ್ಧ ನಡೆದ ರೈತರ ಸಶಸ್ತ್ರ ಹೋರಾಟದ ಫಲವೇ ಹೈದರಾಬಾದ್ ಸಂಸ್ಥಾನ ಮತ್ತು ಅದರ ಭಾಗವಾಗಿದ್ದ ಇಂದಿನ ಹೈದಾರಾಬಾದ್ ಕರ್ನಾಟಕದ ಪ್ರದೇಶಗಳು ಸೆಪ್ಟೆಂಬರ್ 17ರಂದು ಭಾರತೀಯ ಒಕ್ಕೂಟದಲ್ಲಿ ವಿಲೀನ. ಜಾತಿ, ಧರ್ಮ, ಪ್ರಾದೇಶಿಕ ಬೇಧಭಾವಗಳಿಲ್ಲದ ಬೃಹತ್ ಚಳುವಳಿ ಅದು. ಬಡ ರೈತರ ಮೇಲೆ ಹಲ್ಲೆ, ದೌರ್ಜನ್ಯ ಮಾಡುತ್ತಿದ್ದ ಭೂಮಾಲೀಕರು ಹಿಂದೂಗಳೇ ಆಗಿದ್ದರು. ಅರಸರು ಮುಸ್ಲಿಮರು. ಭೂಮಿಗಾಗಿ, ಕೂಲಿ ಹೆಚ್ಚಳಕ್ಕಾಗಿ, ವೆಟ್ಟಿಚಾಕರಿಯ ವಿಮುಕ್ತಿಗಾಗಿ ನಡೆದ ರೈತರು ನಡೆಸಿದ ಸಶಸ್ತ್ರ ಹೋರಾಟ ಅದು.

ನಿಜಾಮರ ವಿರುದ್ದ ಹೋರಾಡಿ ಅಮರರಾದ ಮುಸ್ಲೀಂ ಯೋಧರು

ದೊಡ್ಡಿ ಕೊಮರಯ್ಯನ ಹತ್ಯೆಯ ನಂತರ ಸಶಸ್ತ್ರ ಹೋರಾಟಕ್ಕೆ ಕರೆ ನೀಡಿದ ನಾಯಕತ್ವದ ಗುಂಪಿನಲ್ಲಿ ಮಕ್ದುಮ್ ಮೊಹಿಯುದ್ದೀನ್ ಒಬ್ಬರು. ನಿಜಾಮರ ರಾಜಪ್ರಭುತ್ವದ ನಿರಂಕುಶ ಆಡಳಿತವನ್ನು ವಿರೋಧಿಸಿದ ಯೋಧರು ಶೋಯಬುಲ್ಲಾ ಖಾನ್ ಮತ್ತು ಮಕ್ದುಮ್ ಮೊಹಿಯುದ್ದೀನ್. ಊಳಿಗಮಾನ್ಯ ರಾಜಪ್ರಭುತ್ವವನ್ನು ತಿರಸ್ಕರಿಸಿ, ಸಮಸಮಾಜಕ್ಕಾಗಿ ಹೈದರಾಬಾದ್‌ನ ಹೃದಯಭಾಗದಲ್ಲಿ "ಕಾಮ್ರೇಡ್ಸ್ ಅಸೋಸಿಯೇಷನ್" ಅನ್ನು ಪ್ರಾರಂಭಿಸಿದ ಪ್ರಮುಖರಲ್ಲಿ ಆಲಂ ಖುಂದ್ ಮಿರಿ ಒಬ್ಬರು. ಜಮೀನ್ದಾರನ ದೌರ್ಜನ್ಯಕ್ಕೆ, ನಿಜಾಮನ ಸೈನಿಕರ ಷಡ್ಯಂತ್ರಕ್ಕೆ ಬಲಿಯಾಗಿ ಅಮರರಾದವರು ಶೇಖ್ ಬಂದಗಿ. ಚಾಕಲಿ ಐಲಮ್ಮ ಬೆಳೆ ರಕ್ಷಣೆಗಾಗಿ ತಿರುಗಿನಿಂತು ಹೋರಾಡಿದ ದಳದ ನಾಯಕ ಭೀಮಿರೆಡ್ಡಿ ನರಸಿಂಹ ರೆಡ್ಡಿ. ಫಲಿತಾಂಶವಾಗಿ ವಿಸ್ನೂರು ರಾಮಚಂದ್ರ ರೆಡ್ಡಿಯ ಗೂಂಡಾಗಳು ಮತ್ತು ನಿಜಾಮನ ಪೊಲೀಸರು ಭೀಮಿರೆಡ್ಡಿ ನರಸಿಂಹ ರೆಡ್ಡಿ ಅವರ ಬಾಯಿಗೆ ಮೂತ್ರ ಸುರಿದರು. ಹಿಂದೂ ಜಮೀನ್ದಾರರು, ಮುಸ್ಲಿಂ ರಾಜ, ರಜಾಕಾರರು ಒಟ್ಟಾಗಿ ರೈತರ ಮೇಲೆ ದಾಳಿ ಮಾಡುವುದಕ್ಕೆ ಧರ್ಮ ಅಡ್ಡಬರಲಿಲ್ಲ. ತಿರುಗಿಬಿದ್ದು ಹೋರಾಟಕ್ಕೆ ನಿಂತ ರೈತರಿಗೂ, ಬುದ್ಧಿಜೀವಿಗಳಿಗೂ ಧರ್ಮ ಅಡ್ಡಬರಲಿಲ್ಲ.

'ಕಾಮ್ರೇಡ್ಸ್ ಅಸೋಸಿಯೇಷನ್' ಸ್ಥಾಪನೆ

1934ರಲ್ಲಿ ಕಾಕಿನಾಡದಲ್ಲಿ ಕಮ್ಯುನಿಸ್ಟ್ ಪಕ್ಷ ಆರಂಭವಾಯಿತು. 1939 ರಲ್ಲಿ ಹೈದರಾಬಾದ್ ನಗರದಲ್ಲಿ 'ಕಾಮ್ರೇಡ್ಸ್ ಅಸೋಸಿಯೇಷನ್' ಸ್ಥಾಪಿಸಿದರು. 1941ರಲ್ಲಿ ನಿಜಾಂ ಪ್ರಾಂತ್ಯದಲ್ಲಿ ಕಮ್ಯುನಿಸ್ಟ್ ಪಕ್ಷದ ಬೀಜ ಬಿತ್ತಲಾಯಿತು. ಮುನಗಲ್ ಪ್ರದೇಶದಿಂದ ಸೂರ್ಯಪೇಟೆಗೆ ಹೆಜ್ಜೆಹಾಕಿದ ಚಂದ್ರು ರಾಜೇಶ್ವರ ರಾವ್ ಅವರು ಅಲ್ಲಿಯೂ ಕಮ್ಯುನಿಸಂ ಬೀಜಗಳನ್ನು ಬಿತ್ತಿದರು.



ಅಕ್ಟೋಬರ್ 1946 ರಲ್ಲಿ ಪ್ರಾರಂಭವಾದ ಸಶಸ್ತ್ರ ಹೋರಾಟಕ್ಕೆ ನಾಯಕತ್ವವನ್ನು ಕಮ್ಯುನಿಸ್ಟ್ ಪಕ್ಷವು ಪುಚ್ಚಲಪಲ್ಲಿ ಸುಂದರಯ್ಯನವರಿಗೆ ವಹಿಸಿತು. ಕರಾವಳಿ ಪ್ರದೇಶದಲ್ಲಿ ನಡೆಯುತ್ತಿದ್ದ ಉಪ್ಪು ಸತ್ಯಾಗ್ರಹದಲ್ಲಿ ಮತ್ತು ಅಸಹಕಾರ ಚಳವಳಿಯಲ್ಲಿ ತೆಲಂಗಾಣದ ಯುವಕರು ಭಾಗವಹಿಸುತ್ತಿದ್ದರು. ಆಂಧ್ರ ಪ್ರದೇಶದಿಂದ ಅನೇಕ ಮಂದಿ ಕಮ್ಯೂನಿಸ್ಟ್ ಕಾರ್ಯಕರ್ತರು ಬಂದು ತೆಲಂಗಾಣ ಸಶಸ್ತ್ರ ರೈತ ಹೋರಾಟದಲ್ಲಿ ನೇರವಾಗಿ ಭಾಗವಹಿಸಿದರು. ತೆಲಂಗಾಣ ರೈತ ಹೋರಾಟ ಯೋಧರಿಗೆ ಆಂಧ್ರ ಪ್ರದೇಶದ ಗಡಿ ಜಿಲ್ಲೆಗಳ ಜನರು ರಕ್ಷಣೆ ನೀಡಿದರು. ಕಮ್ಯುನಿಸ್ಟ್ ಪಕ್ಷದ ನಾಯಕರು ಸಶಸ್ತ್ರ ಹೋರಾಟಕ್ಕೆ ಹಾಗೂ ಸೈದ್ಧಾಂತಿಕ ಅಂಶಗಳ ಕುರಿತು ಮಾರ್ಗದರ್ಶನ ನೀಡಿದರು. ಸಿಂಗರೇಣಿ ಕಾರ್ಮಿಕ ಚಳುವಳಿಯ ಮುಖಂಡ ಶೇಷಗಿರಿ ಅವರು ವಿಜಯವಾಡದಲ್ಲಿ ಭೂಗತರಾಗಿಯೂ ಚಳುವಳಿ ನಡೆಸಿದರು.

ಆಂಧ್ರ ಮಹಾಸಭಾ ಮತ್ತು ಕನ್ನಡ ಪರಿಷತ್ ಸ್ಥಾಪನೆ

1901 ರಲ್ಲಿಯೇ ಹೈದರಾಬಾದಿನ ಹೃದಯಭಾಗದಲ್ಲಿ 'ಶ್ರೀಕೃಷ್ಣ ದೇವರಾಯ ಆಂಧ್ರ ಭಾಷಾ ನಿಲಯ' ಪ್ರಾರಂಭವಾಯಿತು. 1920ರಲ್ಲೇ ಖಾಜಿಪೇಟ ಸಮೀಪ ಮಡಿಕೊಂಡ ಎಂಬಲ್ಲಿ ತೆಲುಗು ಗ್ರಂಥಾಲಯವಿತ್ತು. 1922ರಲ್ಲಿ ಸುರವರಂ ಪ್ರತಾಪರೆಡ್ಡಿ 'ಗೋಲ್ಕೊಂಡ' ಪತ್ರಿಕೆಯನ್ನು ಆರಂಭಿಸಿದರು. ಅಭಿವೃದ್ಧಿ ಹೊಂದಿದ ದೇಶಗಳ ಪ್ರಭಾವದಿಂದ ಕೆಲವು ಬುದ್ಧಿಜೀವಿಗಳು, ವ್ಯಾಪಾರಿಗಳು ಮತ್ತು ಸಣ್ಣ ಸಣ್ಣ ಬಂಡವಾಳಶಾಹಿಗಳು ಭಾಷಾ ಮತ್ತು ಸಾಂಸ್ಕೃತಿಕ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಇದರ ಫಲವಾಗಿ 1930ರಲ್ಲಿ ಜೋಗಿಪೇಟೆಯಲ್ಲಿ ಆಂಧ್ರ ಮಹಾಸಭಾ ಪ್ರಾರಂಭವಾಯಿತು. ಮತ್ತೊಂದೆಡೆ, ಹೈದರಾಬಾದ್ ಸಂಸ್ಥಾನದಲ್ಲಿ ಇರುವ ಮರಾಠಿ ಪ್ರಾಂತದಲ್ಲಿ ಮಹಾರಾಷ್ಟ್ರ ಪರಿಷತ್, ಕನ್ನಡ ಪ್ರಾಂತದಲ್ಲಿ ಕನ್ನಡ ಪರಿಷತ್‌ಗಳ ಹೆಸರಿನಲ್ಲಿ ಸಾಂಸ್ಕೃತಿಕ ಚಳವಳಿಯನ್ನು ಆಯೋಜಿಸಲಾಯಿತು.

ಕಮ್ಯುನಿಸ್ಟ್ ಪಕ್ಷದತ್ತ ಆಕರ್ಷಿತರಾದ ಆಂಧ್ರ ಮಹಾಸಭಾ ಕಾರ್ಯಕರ್ತರು

ಆಂಧ್ರ ಮಹಾಸಭಾ ಕಾರ್ಯಕರ್ತರು ಕಮ್ಯುನಿಸ್ಟ್ ಪಕ್ಷದತ್ತ ಆಕರ್ಷಿತರಾದರು. ಆದ್ದರಿಂದ ಆಂಧ್ರ ಮಹಾಸಭಾ ಸಾಂಸ್ಕೃತಿಕ ವಿಷಯಗಳಿಗಷ್ಟೇ ಸೀಮಿತವಾಗದೆ, ಭೂಮಾಲೀಕರ ಶೋಷಣೆ ಮತ್ತು ದೌರ್ಜನ್ಯದ ವಿರುದ್ಧ ಹೋರಾಡಿತು. ಸಾಂಸ್ಕೃತಿಕ ಪ್ರಯತ್ನವಾಗಿ ಪ್ರಾರಂಭವಾಗಿ, ಸುಧಾರಣಾ ಚಳುವಳಿಯಾಗಿ ರೂಪುತಾಳಿ, ಮುಂದೆ ಅದು ಸಶಸ್ತ್ರ ರೈತ ಹೋರಾಟವಾಗಿ ಬದಲಾಯಿತು. ಕ್ರಮೇಣ ಆಂಧ್ರ ಮಹಾಸಭಾದಲ್ಲಿ ಮೂರು ಧೋರಣೆಗಳು ಹೊರಹೊಮ್ಮಿದವು. 1934 ರಲ್ಲಿ, ಸಂಪ್ರದಾಯವಾದಿಗಳು ಮತ್ತು ಸುಧಾರಣಾವಾದಿಗಳ ನಡುವೆ ಸಂಘರ್ಷ ಪ್ರಾರಂಭವಾಯಿತು. ದಾಶರಥಿ ವೆಂಕಟಾಚಾರ್ಯರಂತಹ ಮೂಲಭೂತವಾದಿಗಳಿಗೆ ಸುಧಾರಣಾ ಚಳವಳಿ ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಕೂಡಾ ಸಹಿಸಲಾಗಲಿಲ್ಲ. ಸುರವರಂ ಪ್ರತಾಪರೆಡ್ಡಿಯಂತಹ ಪ್ರಜಾಪ್ರಭುತ್ವವಾದಿಗಳು ಮೂಲಭೂತವಾದವನ್ನು ತಿರಸ್ಕರಿಸಿದರು. ಸುಧಾರಣಾ ಚಳವಳಿಗಾಗಿ ಸೊಂಟ ಬಿಗಿಗೊಳಿಸಿದರು. 1943 ರ ಹೊತ್ತಿಗೆ, ಸುಧಾರಣಾವಾದಿಗಳಿಗೂ, ವರ್ಗ ಹೋರಾಟಕ್ಕೂ ಮಧ್ಯೆ ಸಂಘರ್ಷ ರೂಪುಗೊಂಡಿತು. ರಾವಿ ನಾರಾಯಣ ರೆಡ್ಡಿ, ಬದ್ದಂ ಯಲ್ಲಾರೆಡ್ಡಿ ಮುಂತಾದ ನಾಯಕರು ಜಮೀನ್ದಾರಿ ವಿರೋಧಿ ವರ್ಗದ ಹೋರಾಟವನ್ನು ಮುನ್ನಡೆಸಿದರು. 1944 ರ ಭುವನಗಿರಿ ಮಹಾಸಭಾದಲ್ಲಿ ಆಂಧ್ರ ಮಹಾಸಭಾ ವಿಭಜನೆಯಾಯಿತು. ರಾವಿ ನಾರಾಯಣ ರೆಡ್ಡಿಯವರ ನೇತೃತ್ವದಲ್ಲಿ ಆಂಧ್ರ ಮಹಾಸಭಾ ರೈತರ ನಿಜವಾದ 'ಸಂಘ' ಎಂದು ಗುರುತಿಸಲ್ಪಟ್ಟಿತು.

ಸಾಮಂತ ರಾಜ್ಯಗಳಲ್ಲಿ ಹೋರಾಡದಿರಲು ಕಾಂಗ್ರೆಸ್ ನಿರ್ಧಾರ

ಬ್ರಿಟಿಷ್ ಭಾರತದಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ನಾಯಕತ್ವ ವಹಿಸುತ್ತಿದ್ದ ಕಾಂಗ್ರೆಸ್ ಪಕ್ಷವು, ಸಾಮಂತ ರಾಜ್ಯಗಳಾಗಿದ್ದ ಸಂಸ್ಥಾನಗಳಲ್ಲಿ ಹೋರಾಡದಿರಲು ನಿರ್ಧರಿಸಿಕೊಂಡಿತು. ಕಾಂಗ್ರೆಸ್ ಪಕ್ಷದ ಧೋರಣೆಯು ತೆಲಂಗಾಣದಲ್ಲಿ ಆರ್ಯ ಸಮಾಜದ ಹೆಸರಿನಲ್ಲಿ ಕೆಲಸ ಮಾಡುತ್ತಿದ್ದ ಮತಾಂಧರಿಗೆ ಬಲ ಮತ್ತಷ್ಟು ಬಂದಂತಾಯಿತು. ಔರಂಗಾಬಾದ್ ಪ್ರಾಂತ್ಯಕ್ಕೆ ಸೇರಿದ ವಕೀಲ ಖಾಸಿಂ ರಜ್ವಿ ನೇತೃತ್ವದಲ್ಲಿ ರಚನೆಯಾದ "ರಜಾಕಾರ' ಸಂಘಟನೆಯು ಶ್ರೀಮಂತರ ಪರವಾದ ಕೇಂದ್ರವಾಗಿ ರೈತರ ಮೇಲೆ ದಾಳಿ ನಡೆಸಿತು. ಆಂಧ್ರ ಮಹಾಸಭಾ ಮತ್ತು ಕಮ್ಯುನಿಸ್ಟರ ನಾಯಕತ್ವದಲ್ಲಿ ಊಳಿಗಮಾನ್ಯ ಪದ್ದತಿ ವಿರೋಧಿ ಹೋರಾಟ ಪ್ರಾರಂಭವಾದ ನಂತರವೇ, ಅಂದಿನ ಮತಾಂಧರ ಪ್ರಯತ್ನಕ್ಕೆ ತಡೆ ಬಿದ್ದಿತು. ಭಾರತ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕನಂತರ, ಗಡಿ ಪ್ರದೇಶಗಳಲ್ಲಿ ಭೀಕರವಾದ ಕೋಮು ಘರ್ಷಣೆಗಳು ನಡೆದವು. ಆದರೆ, ಹೈದರಾಬಾದ್ ಸಂಸ್ಥಾನವನ್ನು ಭಾರತದೊಂದಿಗೆ ವಿಲೀನಗೊಳಿಸುವ ಸಮಯದಲ್ಲಿ ಕಮ್ಯುನಿಸ್ಟ್ ಚಳವಳಿ ಮತ್ತು ಊಳಿಗಮಾನ್ಯ ಪದ್ದತಿ ವಿರೋಧಿ ಹೋರಾಟ ದುರ್ಬಲವಾಗಿದ್ದ ಮರಾಠವಾಡ

ಪುಟ 12 ಕ್ಕೆ

ಸಂಘಪರಿವಾರದ ರಾಜಕೀಯ ದಾಳ, ಕಾಂಗ್ರೆಸ್ ಪಕ್ಷದ ಮುಂದಾಳುಗಳು ಮೌನ

ಮುನೀರ್ ಕಾಟಿಪಳ್ಳ



ಈದ್ ಮಿಲಾದ್ ಮೆರವಣಿಗೆಗಳು ಒಂದಿಷ್ಟು ಆತಂಕ, ಉದ್ವಿಗ್ನತೆಯ ನಡುವೆಯೂ ಶಾಂತಿಯುತವಾಗಿ ಮುಗಿಯಿತು. ಉದ್ರೇಕಕಾರಿ ಹೇಳಿಕೆ, ಮಾತುಗಳ ಮೂಲಕ ಉದ್ವಿಗ್ನತೆ, ಘರ್ಷಣೆ ಹುಟ್ಟು ಹಾಕಿ, ಕರಾವಳಿ ಜಿಲ್ಲೆಗಳಲ್ಲಿ ಧಾರ್ಮಿಕ ಧ್ರುವೀಕರಣವನ್ನು ಅದೇ ಮಟ್ಟದಲ್ಲಿ ಕಾಪಿಟ್ಟುಕೊಳ್ಳುವ ಸಂಘಪರಿವಾರದ ಯೋಜನೆಗೆ ದೊಡ್ಡ ಯಶಸ್ಸು ಸಿಗದಿದ್ದರೂ, ಆಂತರಿಕವಾಗಿ ಸಮಾಧಾನಕರ ಯಶಸ್ಸು ದೊರಕಿರುವುದಂತೂ ಸತ್ಯ. ಗಣೇಶೋತ್ಸವದ ಮೆರವಣಿಗೆಗೆ ಮುಸ್ಲಿಮರು ಸಿಹಿ ಹಂಚಬಾರದು ಎಂದು ಬಂಟ್ವಾಳದ ಯಾವುದೋ ಮೂಲೆಯ ಗಣೇಶೋತ್ಸವ ಸಮಿತಿ, ಸ್ಥಳೀಯ ಮಸೀದಿ ಆಡಳಿತಕ್ಕೆ ಪತ್ರ ಬರೆಯುವುದರೊಂದಿಗೆ ಆರಂಭವಾದ ಕಿಡಿ ಹಚ್ಚುವ ಯತ್ನ, ದೂರದ ಮಂಡ್ಯ ಜಿಲ್ಲೆಯ ನಾಗಮಂಗಲದವರೆಗೂ ಸುತ್ತು ಹೊಡೆದು, ಅದೇ ಬಂಟ್ವಾಳದ ಬಿ.ಸಿ. ರೋಡ್ ನಲ್ಲಿ ಈದ್ ಮಿಲಾದ್ ಮೆರವಣಿಗೆಗೆ ಸಂಘಪರಿವಾರದ ಮುತ್ತಿಗೆ ಯತ್ನದ ಪ್ರಹಸನದೊಂದಿಗೆ ಕೊನೆಯಾಗಿದೆ.

ಇಲ್ಲಿಗೆ ಈ ಸುತ್ತಿನ ಪ್ರಯತ್ನಗಳು ಮುಗಿದಿದ್ದರೂ (ದಸರಾ ಹಬ್ಬದ ಸಂತೆಗಳಲ್ಲಿ ಮುಸ್ಲಿಂ ವ್ಯಾಪಾರಸ್ಥರಿಗೆ ಬಹಿಷ್ಕಾರದ ವಿಷಯ ಮುಂದಕ್ಕಿದೆ) ಕೆಲವು ಪ್ರಶ್ನೆಗಳು ಹಾಗೆಯೆ ಬಾಕಿ ಉಳಿದಿವೆ. ಈ ಪ್ರಶ್ನೆಗಳು ಬಜರಂಗದಳಕ್ಕೊ, ಧರ್ಮ ರಕ್ಷಣೆಯ ಗುತ್ತಿಗೆದಾರ ಶರಣ್ ಪಂಪ್ ವೆಲ್ ಗೊ, ಶರಣ್ ಪಂಪ್ ವೆಲ್ ಬೆಂಕಿ ಹಚ್ಚುವ ಮಾತುಗಳಿಗೆ ಅದೇ ಧಾಟಿಯಲ್ಲಿ ಉತ್ತರಿಸಬೇಕು ಎಂದು ಹಠಕ್ಕೆ ಬೀಳುವ ಮುಸ್ಲಿಂ ಸಮುದಾಯದಲ್ಲಿ ಅಲ್ಪ ಸಂಖ್ಯೆಯಲ್ಲಿರುವ ಅತಿರೇಕಿಗಳಿಗೋ ಅಲ್ಲ. ಪ್ರಶ್ನೆ ಇರುವುದು ಕರ್ನಾಟಕ ರಾಜ್ಯದ ಕಾಂಗ್ರೆಸ್ ಸರಕಾರಕ್ಕೆ, ಇಲ್ಲಿನ ಪೊಲೀಸ್ ಇಲಾಖೆಗೆ. ಕಾಂಗ್ರೆಸ್ ಪಕ್ಷದ ಅಧಿಪತಿಗಳಿಗೆ.

ಹೇಳಿ ಕೇಳಿ, ಶರಣ್ ಪಂಪ್ ವೆಲ್ ಪೊಲೀಸ್ ದಾಖಲೆಗಳ ಪ್ರಕಾರ ಅಪಾಯಕಾರಿ ಕಮ್ಯೂನಲ್ ಕ್ರಿಮಿನಲ್. ಅಂತಹ ಪೊಲೀಸ್ ದಾಖಲೆ ಹೊಂದಿದವರ ಮೇಲೆ ಇಂತಹ ಸೂಕ್ಷ್ಮ ಸಂದರ್ಭದಲ್ಲಿ ಕಟ್ಟೆಚ್ಚರದ ನಿಗಾ ಇಡುವುದು, ಕಾನೂನಿನ ಬಲೆಯನ್ನು ಹರಡಿ ಚಟುವಟಿಕೆ ನಿರ್ಬಂಧಿಸುವುದು ಪೊಲೀಸ್ ಇಲಾಖೆಯಲ್ಲಿ ಸಹಜ ವಿದ್ಯಾಮಾನ. ಆದರೆ, ಅದಕ್ಕೆ ವ್ಯತಿರಿಕ್ತವಾಗಿ ಈದ್ ಮಿಲಾದ್ ದಿನ ಬಿ.ಸಿ. ರೋಡ್ ನಲ್ಲಿ ಶರಣ್ ಪಂಪ್ ವೆಲ್ ಸಿನೆಮಾ ಶೈಲಿಯಲ್ಲಿ ಜನನಾಯಕನ ರೀತಿ ವಿಜೃಂಭಿಸಲು ಪೊಲೀಸ್ ಇಲಾಖೆ ಪೂರ್ಣ ಅವಕಾಶ ಒದಗಿಸಿತು.

ಬಂಟ್ವಾಳದ ಯಾವುದೋ ಮೂಲೆಯ ಗಣೇಶೋತ್ಸವ ಸಮಿತಿ, ಸ್ಥಳೀಯ ಮಸೀದಿ ಆಡಳಿತಕ್ಕೆ ಪತ್ರ ಬರೆಯುವುದರೊಂದಿಗೆ ಆರಂಭವಾದ ಕಿಡಿ ಹಚ್ಚುವ ಯತ್ನ, ದೂರದ ಮಂಡ್ಯ ಜಿಲ್ಲೆಯ ನಾಗಮಂಗಲದವರೆಗೂ ಸುತ್ತು ಹೊಡೆದು, ಅದೇ ಬಂಟ್ವಾಳದ ಬಿ.ಸಿ. ರೋಡ್ ನಲ್ಲಿ ಈದ್ ಮಿಲಾದ್ ಮೆರವಣಿಗೆಗೆ ಸಂಘಪರಿವಾರದ ಮುತ್ತಿಗೆ ಯತ್ನದ ಪ್ರಹಸನದೊಂದಿಗೆ ಕೊನೆಯಾಗಿದೆ.

ನಾಗಮಂಗಲದ ಘಟನೆಯ ಮರುದಿನ ಮಂಗಳೂರಿನಲ್ಲಿ ಸಂಘಪರಿವಾರ ಆಯೋಜಿಸಿದ್ದ ಪ್ರತಿಭಟನಾ ಸಭೆಯಲ್ಲಿ ಶರಣ್ ಪಂಪ್ ವೆಲ್ ತೀರಾ ಉದ್ರೇಕಕಾರಿ ಕೋಮು ಪ್ರಚೋದಕ ಭಾಷಣ ಮಾಡಿದ್ದರು. "ಈದ್ ಮಿಲಾದ್ ಮೆರವಣಿಗೆ ತಡೆಯುತ್ತೇವೆ" ಎಂದು ಬಹಿರಂಗವಾಗಿ ಮುಸ್ಲಿಂ ಸಮುದಾಯಕ್ಕೆ ಬೆದರಿಕೆ ಒಡ್ಡಿದ್ದರು. ಇದು ದೊಡ್ಡ ಸುದ್ದಿಯಾದರೂ ಮಂಗಳೂರು ಪೊಲೀಸರು ಏನೂ ನಡದೇ ಇಲ್ಲ, ಪಂಪ್ ವೆಲ್ ಮಾತೇ ಆಡಿಲ್ಲ ಎಂಬಂತೆ ಮೌನವಹಿಸಿದ್ದರು. ಇದು ಸಾಮಾಜಿಕ ಜಾಲತಾಣದಲ್ಲಿ ದೊಡ್ಡ ಸದ್ದು ಮಾಡಿ, ಮುಸ್ಲಿಂ ಸಮುದಾಯದ ಕೆಲವರು ಸಾಮಾಜಿಕ ಜಾಲತಾಣದಲ್ಲಿ ಪಂಪ್ ವೆಲ್ ಧಾಟಿಯಲ್ಲಿ ಪ್ರತಿ ಸವಾಲು ಹಾಕುವವರೆಗೂ ಮುಂದುವರಿಯಿತು.

ಮುಸ್ಲಿಂ ಸಮುದಾಯದ ಒಳಗಡೆಯ ವಾಟ್ಸಪ್ ಗುಂಪುಗಳಲ್ಲಿ ಉಂಟಾದ ಒತ್ತಡದ ಪರಿಣಾಮ ಬಂಟ್ವಾಳದ ಕಾಂಗ್ರೆಸ್ ಪಕ್ಷದ ಇಬ್ಬರು ಮುಸ್ಲಿಂ ಪುರಸಭಾ ಸದಸ್ಯರಾದ ಶೆರೀಫ್ ಹಾಗೂ ಹಸೈನಾರ್ ರವರು ಈದ್ ಮಿಲಾದ್ ಮುನ್ನಾ ದಿನ ಶರಣ್ ಪಂಪ್ ವೆಲ್ ಗೆ ಸವಾಲಿನ ವಾಯ್ಸ್ ಕ್ಲಿಪ್ ಅನ್ನು ವಾಟ್ಸಪ್ ಗುಂಪಿನಲ್ಲಿ ಹರಿಯಬಿಟ್ಟ ಮೇಲೆ ಪರಿಸ್ಥಿತಿ ಕಾವೇರಿತು. ಎರಡೂ ಕಡೆಯ ಅತಿರೇಕಿಗಳು ಆ ವಾಯ್ಸ್ ಕ್ಲಿಪ್ ಸುತ್ತ ಬಿರುಸಿನ, ಆವೇಶದ ಚರ್ಚೆ ಶುರು ಹಚ್ಚಿದರು. ಇದನ್ನೇ ಕಾಯುತ್ತಿದ್ದ ಸಂಘಪರಿವಾರ ಎಚ್ಚೆತ್ತುಕೊಂಡು ಊರಿಗೆ ಬೆಂಕಿ ಹಚ್ಚಲು ಬೇಕಾದ ಹತಾರಗಳನ್ನು ಸಿದ್ದಪಡಿಸತೊಡಗಿತು. ಬಜರಂಗದಳದ ಜಿಲ್ಲಾ ಸಂಚಾಲಕ, ಶರಣ್ ಪಂಪ್ ವೆಲ್ ನೆರಳು ಪುನೀತ್ ಅತ್ತಾವರ "ಜಿಹಾದಿಗಳ ಸವಾಲು ಸ್ವೀಕರಿಸಲಾಗಿದೆ. ನಾಳೆ ಬೆಳಿಗ್ಗೆ ಈದ್ ಮಿಲಾದ್ ಮೆರವಣಿಗೆಗೆ ಬಿ.ಸಿ. ರೋಡ್ ಗೆ ಬರುತ್ತೇವೆ. ತಾಖತ್ತಿದ್ದರೆ ತಡೆಯಿರಿ" ಎಂದು ಫೇಸ್ ಬುಕ್ ಪೋಸ್ಟ್ ಹಾಕಿ ಮುಸ್ಲಿಮರ ವಿರುದ್ಧ ಬಿ.ಸಿ. ರೋಡ್ ಚಲೋ ಘೋಷಿಸಿದರು. ಬಿಜೆಪಿ ಶಾಸಕರುಗಳು, ಮರಿಕಿರಿ ನಾಯಕರುಗಳು ತಾಮುಂದು ನಾಮುಂದು ಎಂಬಂತೆ ಮುಸ್ಲಿಮರ, ಈದ್ ಮಿಲಾದ್ ಮೆರವಣಿಗೆಯ ವಿರುದ್ಧ ಯಾವ ಮುಲಾಜೂ ಇಲ್ಲದೆ ಹೇಳಿಕೆಗಳನ್ನು ಹೊರಡಿಸಿದರು.

ಆಗ ಎಚ್ಚೆತ್ತ ದಕ್ಷಿಣ ಕನ್ನಡ ಜಿಲ್ಲಾ ಪೊಲೀಸರು ಶರಣ್ ಪಂಪ್ ವೆಲ್ ಸವಾಲಿಗೆ ಪ್ರತಿ ಸವಾಲು ಹಾಕಿದ್ದ ಕಾಂಗ್ರೆಸ್ ಪಕ್ಷದ ಮುಸ್ಲಿಂ ಪುರಸಭಾ ಸದಸ್ಯರಿಬ್ಬರ ವಿರುದ್ಧ ರಾತ್ರೋರಾತ್ರಿ ಎಫ್ಐಆರ್ ದಾಖಲಿಸಿದರು. ವಶಕ್ಕೆ ಪಡೆದು ಪೊಲೀಸ್ ಠಾಣೆಯಲ್ಲಿ ಕುಳ್ಳಿರಿಸಿದರು. ಪೊಲೀಸರ ಈ ಏಕಪಕ್ಷೀಯ ಕ್ರಮದ ವಿರುದ್ಧ ಮುಸ್ಲಿಂ ಸಮುದಾಯದಿಂದ ಆಕ್ರೋಶ ವ್ಯಕ್ತವಾಗತೊಡಗಿದಾಗ ಬ್ಯಾಲೆನ್ಸ್ ಸಾಧಿಸಲು ಮಂಗಳೂರು ನಗರ ಪೊಲೀಸರು ಸೆನ್ ಠಾಣೆಯಲ್ಲಿ ಪುನೀತ್ ಅತ್ತಾವರ, ಶರಣ್ ಪಂಪ್ ವೆಲ್ ಮೇಲೆ ಪ್ರಕರಣ ದಾಖಲಿಸಿದರು. ಅತ್ತ ಸುರತ್ಕಲ್ ಸಮೀಪದ ಕಾಟಿಪಳ್ಳದ ಮಸೀದಿಯೊಂದರ ಮೇಲೆ ಬಜರಂಗದಳದ ಬೆಂಬಲಿಗರು ಕಲ್ಲು ತೂರಿದರು. ಅಷ್ಟು ಹೊತ್ತಿಗೆ ಶರಣ್ ಪಂಪ್ ವೆಲ್ ಪ್ರಚೋದಕ ಹೇಳಿಕೆ ನೀಡಿ ನಾಲ್ಕು ದಿನ ದಾಟಿತ್ತು. ಹೀಗೆ ಶೆರೀಫ್, ಹಸೈನಾರ್ ನನ್ನು ಎಫ್ಐಆರ್ ದಾಖಲಿಸಿ ವಶಕ್ಕೆ ಪಡೆದ ಪೊಲೀಸರು, ತಮ್ಮದೆ ದಾಖಲೆಯ ಪ್ರಕಾರ ಮತೀಯ ಸಾಮರಸ್ಯಕ್ಕೆ ಅತಿ ದೊಡ್ಡ ಅಪಾಯಕಾರಿಗಳಾದ ಶರಣ್ ಪಂಪ್, ಪುನೀತ್ ಅತ್ತಾವರನನ್ನು ಮುಟ್ಟುವ ಧೈರ್ಯ ತೋರಲಿಲ್ಲ. ಆ ಮೂಲಕ ಶೆರೀಫ್, ಹಸೈನಾರ್ ಬಂಧನ ಬಜರಂಗದಳದ ಕಾರ್ಯಕರ್ತರ ಸಮಾಧಾನಕ್ಕಾಗಿ ಎಂಬುದೂ ಖಾತ್ರಿಯಾಯ್ತು.



ಅತ್ತ ಜಿಲ್ಲೆಯ ಮುಸ್ಲಿಮರು ಇದ್ಯಾವುದಕ್ಕೂ ಪ್ರತಿಕ್ರಿಯಿಸದೆ, ಕಲ್ಲು ತೂರಾಟದಿಂದ ಪುಡಿಯಾದ ಗಾಜನ್ನು ತೆರವುಗೊಳಿಸಿ ಹೊಸ ಗಾಜು ಅಳವಡಿಸಲು ಪೊಲೀಸರಿಗೆ ಅವಕಾಶ ಕೊಟ್ಟು, ತಮ್ಮ ಪಾಡಿಗೆ ತಾವು ಈದ್ ಮಿಲಾದ್ ಸಿದ್ದತೆಯಲ್ಲಿ ಮುಳುಗಿ ಹೋದರು. ಕೋಮು ಸಂಘರ್ಷದ ಅವಕಾಶಕ್ಕಾಗಿ ಕಾಯುತ್ತಿದ್ದ ಸಂಘಪರಿವಾರ ಸುಮ್ಮನಿರಲಿಲ್ಲ. ರಾತ್ರಿ ಇಡೀ ಸಿದ್ದತೆ ನಡೆಸಿ, ಬೆಳಿಗ್ಗೆ ಈದ್ ಮಿಲಾದ್ ಮೆರವಣಿಗೆ ಹೊರಡುವ ಸಮಯಕ್ಕೆ ಮೊದಲೇ ಬಿ.ಸಿ. ರೋಡ್ ಜಂಕ್ಷನ್ ನಲ್ಲಿ ಕೇಸರಿ ಧರಿಸಿದ ಕಾರ್ಯಕರ್ತರ ದೊಡ್ಡ ದಂಡು ಜಮಾಯಿಸುವಂತೆ ನೋಡಿಕೊಂಡಿತು. ಈದ್ ಮಿಲಾದ್ ಮೆರವಣಿಗೆ ತಡೆಯುವುದಾಗಿ ಘೋಷಿಸಿತು. ಹೀಗೆ ಸೇರಿದ ಗುಂಪಿನಲ್ಲಿ ಅಪಾಯಕಾರಿ ಕ್ರಿಮಿನಲ್‌ಗಳು, ಈ ಹಿಂದೆ ಕೋಮು ದ್ವೇಷದ ಕೊಲೆಗಳಲ್ಲಿ, ದೊಂಬಿ, ಹಲ್ಲೆ ಪ್ರಕರಣಗಳಲ್ಲಿ ಭಾಗಿಯಾದವರು "ಹಿಂದೂ ನಾಯಕ"ರ ಗೆಟಪ್ ನಲ್ಲಿ ಸೇರಿಕೊಂಡಿದ್ದರು.

ಈದ್ ಮಿಲಾದ್ ತಡೆಯುವ ಹೇಳಿಕೆಗೆ FIR ದಾಖಲಾಗಿದ್ದ ಶರಣ್ ಪಂಪ್ ವೆಲ್, ಪುನೀತ್ ಅತ್ತಾವರ ಸಹ ಭಾಗಿಯಾಗಿದ್ದರು. ಈ ರೀತಿಯ ಮತೀಯ ಕ್ರಿಮಿನಲ್ ಹಿನ್ನಲೆಯವರು ಅಲ್ಲಿ ಮುಸ್ಲಿಂ ವಿರೋಧಿ ತೀರಾ ಉದ್ರೇಕಕಾರಿ ಹೇಳಿಕೆಗಳನ್ನು ಪೊಲೀಸರ ಮುಂದೆ ನೀಡಿದರು. ಶರಣ್ ಪಂಪ್ ವೆಲ್ ಸಿನೆಮಾ ಶೈಲಿಯಲ್ಲಿ ಗುಂಪಿಗೆ ಎಂಟ್ರಿ ಕೊಟ್ಟು ಮುಸ್ಲಿಮರ ವಿರುದ್ದ ದ್ವೇಷ ಭಾಷಣ ಮಾಡಿದರು. ಈದ್ ಮಿಲಾದ್ ಮೆರವಣಿಗೆ ಬರುವ ದಾರಿಗೆ ನುಗ್ಗಲು ತೊಡಗಿದರು. ಇದೆಲ್ಲವೂ ಪೊಲೀಸರ ಸಮ್ಮುಖವೇ ನಡೆಯಿತು. ಪಶ್ಚಿಮ ವಲಯ ಐಜಿಪಿ, ದ.ಕ. ಜಿಲ್ಲಾ ಎಸ್‌ಪಿ ಸ್ಥಳದಲ್ಲಿ ಉಪಸ್ಥಿತರಿದ್ದು ಬೆಳವಣಿಗೆಗಳಿಗೆ ಸಾಕ್ಷಿಯಾದರು. ಹಿರಿಯ ಐಪಿಎಸ್ ಅಧಿಕಾರಿಗಳು ಸ್ಥಳದಲ್ಲಿದ್ದೂ, ಒಂದು ಧರ್ಮದ ಮೆರವಣಿಗೆ ತಡೆಯುತ್ತೇವೆ ಎಂದು ರಾತ್ರೋರಾತ್ರಿ ಕರೆ ನೀಡಿ ಬೆಳಗ್ಗೆ ಅಪಾಯಕಾರಿ ರೀತಿಯಲ್ಲಿ ಗುಂಪು ಸೇರಲು ಪೊಲೀಸರು ಅವಕಾಶ ಒದಗಿಸಿದ್ದು, ಈ ರೀತಿ ಕ್ರಿಮಿನಲ್ ಗಳು, ಕೊಲೆ ಆರೋಪ ಹೊತ್ತವರು, ಕೋಮು ಸಂಘರ್ಷಕ್ಕೆ ಕಾರಣರಾದವರು ಒಳಗೊಂಡ ಗುಂಪಿನ ಆಟಾಟೋಪಕ್ಕೆ ಪ್ರತಿಭಟನಾ ಸಭೆ ಎಂದು ಮಾನ್ಯತೆ ಒದಗಿಸಿದ್ದು ಈಗ ಹಲವು ಪ್ರಶ್ನೆಗಳನ್ನು ಹುಟ್ಟು ಹಾಕಿದೆ. ಈ ಪ್ರಶ್ನೆಗಳು ಜಿಲ್ಲೆಯ ಅಲ್ಪಸಂಖ್ಯಾತ ಸಮುದಾಯಗಳದ್ದು, ಜಾತ್ಯಾತೀತ ಮೌಲ್ಯಗಳಿಗೆ ಬದ್ದರಾಗಿರುವ ಜನ ಸಾಮಾನ್ಯರದ್ದೂ ಹೌದು.

ಈದ್ ಮಿಲಾದ್ ಗಿಂತ ನಾಲ್ಕೈದು ದಿನಗಳಿಗೆ ಮುಂಚಿತವಾಗಿಯೆ ಶರಣ್ ಪಂಪ್ ವೆಲ್ "ಈದ್ ಮಿಲಾದ್ ತಡೆಯುತ್ತೇವೆ" ಎಂದು ಭಾಷಣ ಬಿಗಿದಿದ್ದರೂ, ನಾಲ್ಕು ದಿನಗಳ ತರುವಾಯ ಕಾಂಗ್ರೆಸ್ ನ ಮುಸ್ಲಿಂ ಪುರಸಭಾ ಸದಸ್ಯರಿಬ್ಬರು ಅದಕ್ಕೆ ಪ್ರತಿಕ್ರಿಯಿಸಿ, ಅವರಿಬ್ಬರ ಮೇಲೆ ಬಂಟ್ವಾಳ ಪೊಲೀಸರು ಸ್ವಯಂ ಪ್ರೇರಣೆಯ ಮೊಕದ್ದಮೆ ದಾಖಲಿಸುವವರೆಗೂ ಶರಣ್ ಪಂಪ್ ವೆಲ್ ವಿರುದ್ದ ಮೊಕದ್ದಮೆ ದಾಖಲಿಸದೆ ಉಳಿದದ್ದು ಯಾಕೆ? ಮೊಕದ್ದಮೆ ದಾಖಲಿಸಲ್ಪಟ್ಟ ತಕ್ಷಣವೇ ಕಾಂಗ್ರೆಸ್ ಪುರಸಭಾ ಸದಸ್ಯರಾದ ಶೆರೀಫ್ ಹಾಗೂ ಹಸೈನಾರ್ ರನ್ನು ವಶಕ್ಕೆ ಪಡೆದು, ಈದ್ ಮಿಲಾದ್ ಆಚರಣೆ ಮುಗಿಯುವವರೆಗೂ ಪೊಲೀಸ್ ಠಾಣೆಯಲ್ಲಿ ಕುಳ್ಳಿರಿಸಲಾಯಿತು, ಅದೇ ಸಂದರ್ಭ ಬಿ.ಸಿ. ರೋಡ್ ಗೆ ಬಂದು ಈದ್ ಮಿಲಾದ್ ತಡೆಯುತ್ತೇವೆ ಎಂದು ಹೊರಟ ಶರಣ್ ಪಂಪ್ ವೆಲ್ ಹಾಗೂ ಪುನೀತ್ ಅತ್ತಾವರನನ್ನು ಪ್ರಕರಣ ದಾಖಲಾಗಿದ್ದರೂ ಪೊಲೀಸರು ವಶಕ್ಕೆ ಪಡೆಯದಿರಲು ಕಾರಣ ಏನು? ಅವರು ಬಿ.ಸಿ. ರೋಡ್ ನಲ್ಲಿ ಉದ್ರಿಕ್ತ ಗುಂಪಿಗೆ ಬಂದು ಸೇರಲು ಅವಕಾಶ ಒದಗಿಸಿದ್ದು ಯಾಕೆ?

ಪೊಲೀಸ್ ಇಲಾಖೆ ಸಿದ್ದಪಡಿಸಿದ ದಾಖಲೆಗಳ ಪ್ರಕಾರವೇ ಕ್ರಿಮಿನಲ್ ಗಳು,

ಪುಟ 10 ಕ್ಕೆ

ಮೋದಿ ಸರ್ಕಾರದ 'ಒಂದು ರಾಷ್ಟ್ರ ಒಂದು ಚುನಾವಣೆ' ಯೋಚನೆ ದೇಶಕ್ಕೆ ವಿನಾಶಕಾರಿ: ಸಿಪಿಐ(ಎಂ) ಪೊಲಿಟ್‌ಬ್ಯುರೊ

ಸಂಸತ್ತು, ರಾಜ್ಯ ವಿಧಾನಸಭೆಗಳು ಮತ್ತು ಸ್ಥಳೀಯ ಸಂಸ್ಥೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸಬೇಕೆಂಬ ಕೋವಿಂದ್ ಸಮಿತಿಯ ಶಿಫಾರಸುಗಳನ್ನು ಕೇಂದ್ರ ಸಚಿವ ಸಂಪುಟ ಅಂಗೀಕರಿಸಿದೆ.

'ಒಂದು ರಾಷ್ಟ್ರ, ಒಂದು ಚುನಾವಣೆ' ಎಂಬ ಈ ಮಾದರಿಯನ್ನು ಜಾರಿಗೆ ತಂದರೆ ಅದು ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆ ಮತ್ತು ಒಕ್ಕೂಟ ರಚನೆಯನ್ನೇ ಹಾಳು ಮಾಡುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಇದನ್ನು ಬಲವಾಗಿ ವಿರೋಧಿಸಿದೆ.

ಈ ಪ್ರಸ್ತಾವನೆಗಳು ಲೋಕಸಭೆ ಚುನಾವಣೆಯೊಂದಿಗೆ ಹೊಂದಾಣಿಕೆ ಮಾಡಲು ಕೆಲವು ವಿಧಾನ ಸಭೆಗಳ ಕಾರ್ಯಾವಧಿಯನ್ನು ಮೊಟಕುಗೊಳಿಸುತ್ತವೆ. ಇದಲ್ಲದೆ, ಒಂದು ವೇಳೆ ರಾಜ್ಯ ಸರ್ಕಾರ ಪತನವಾದರೆ ಮತ್ತು ವಿಧಾನಸಭೆಯನ್ನು ವಿಸರ್ಜಿಸಬೇಕಾದರೆ, ಮಧ್ಯಂತರ ಚುನಾವಣೆಯು ವಿಧಾನಸಭೆಯ ಉಳಿದ ಅವಧಿಗೆ ಮಾತ್ರ ಇರುತ್ತದೆ. ಇವೆಲ್ಲವೂ ಸಂವಿಧಾನದಲ್ಲಿ ಕಲ್ಪಿಸಿದಂತೆ ಐದು ವರ್ಷಗಳ ಅವಧಿಗೆ ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಜನರ ಹಕ್ಕುಗಳನ್ನು ಉಲ್ಲಂಘಿಸುತ್ತವೆ. ಇದಲ್ಲದೆ, ವಿಧಾನಸಭೆಯ ಉಳಿದ ಅವಧಿಗೆ ಮಾತ್ರ ಮಧ್ಯಂತರ ಚುನಾವಣೆಯನ್ನು ನಡೆಸಬೇಕೆಂಬ ಶಿಫಾರಸು ಈ ಹೊಸ ಯೋಜನೆಯ ಉದ್ದೇಶವನ್ನೇ ವಿಫಲಗೊಳಿಸುತ್ತದೆ. ಏಕೆಂದರೆ ಈ ಕ್ರಮ ಹಲವಾರು ಚುನಾವಣೆಗಳನ್ನು ತಪ್ಪಿಸಲಿಕ್ಕಾಗಿ ಎಂದೇ ಹೇಳಲಾಗಿದೆ. ಮಧ್ಯಂತರ ಚುನಾವಣೆಯ ನಂತರ, ಐದು ವರ್ಷಗಳ ಅವಧಿಯ ಕೊನೆಯಲ್ಲಿ ಮತ್ತೊಂದು ಚುನಾವಣೆಯನ್ನು ಮಾಡಬೇಕಾಗುತ್ತದೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.



ಜಿಲ್ಲಾ ಪಂಚಾಯತ್ ಮತ್ತು ಮುನ್ಸಿಪಲ್ ಸಂಸ್ಥೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸುವ ಕ್ರಮ ಒಕ್ಕೂಟ ತತ್ವದ ಮೇಲಿನ ವಂಚಕ ದಾಳಿ. ಇದು ಅತಿ–ಕೇಂದ್ರೀಕರಣವಾಗಿದೆ ಮತ್ತು ಸ್ಥಳೀಯ ಸಂಸ್ಥೆಗಳು ವಿಕೇಂದ್ರೀಕೃತ ನಿರ್ಧಾರ ತೆಗೆದುಕೊಳ್ಳಲು ಅನುವು ಮಾಡಿಕೊಡಬೇಕು ಎಂಬ ಉದ್ದೇಶಕ್ಕೆ ವಿರುದ್ಧವಾಗಿದೆ. ಪಂಚಾಯತ್ ಮತ್ತು ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ನಡೆಸುವುದು ರಾಜ್ಯ ಸರ್ಕಾರಗಳ ವ್ಯಾಪ್ತಿಗೆ ಒಳಪಟ್ಟಿದ್ದು, ಇದನ್ನು ನಿರಾಕರಿಸುವ ಪ್ರಯತ್ನ ನಡೆಸಲಾಗುತ್ತಿದೆ. ಭಾರತದ ಅಗಾಧ ವೈವಿಧ್ಯತೆ ಮತ್ತು ವಿವಿಧ ರಾಜ್ಯಗಳಲ್ಲಿನ ವಿಭಿನ್ನ ಪರಿಸ್ಥಿತಿಗಳನ್ನು ಗಮನಿಸಿದರೆ ಇದು ಅಸಂಬದ್ಧ ಪ್ರಸ್ತಾವನೆ ಕೂಡ ಆಗಿದೆ.

'ಒಂದು ರಾಷ್ಟ್ರ, ಒಂದು ಚುನಾವಣೆ' ಪರಿಕಲ್ಪನೆಯು ಆರ್‌ಎಸ್‌ಎಸ್–ಬಿಜೆಪಿಯ ಕಲ್ಪನೆಯ ಕೂಸು, ಇದು ಒಬ್ಬ ನಾಯಕನ ಕೈಯಲ್ಲಿ ಚುಕ್ಕಾಣಿ ಕೊಡುವ ಕೇಂದ್ರೀಕೃತ ಏಕಸ್ವರೂಪದ ಪ್ರಭುತ್ವವನ್ನು ರಚಿಸಲು ಬಯಸುತ್ತದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಅದರ ಈ ಉದ್ದೇಶ ಸಾಧನೆಗೆ ಸಂವಿಧಾನವನ್ನು ತಿದ್ದುಪಡಿ ಮಾಡುವ ಯಾವುದೇ ಕ್ರಮವನ್ನು ಸಿಪಿಐ(ಎಂ) ಬಲವಾಗಿ ವಿರೋಧಿಸುತ್ತದೆ ಎನ್ನುತ್ತ ಪ್ರಜಾಪ್ರಭುತ್ವ, ಬಹುತ್ವ ಮತ್ತು ಒಕ್ಕೂಟ ತತ್ವವನ್ನು ಗೌರವಿಸುವ ಪ್ರತಿಯೊಂದು ಪಕ್ಷವೂ ಈ ಹಾನಿಕಾರಕ ನಡೆಯನ್ನು ದೃಢವಾಗಿ ವಿರೋಧಿಸಬೇಕು ಮತ್ತು ಈ ವಿನಾಶಕಾರಿ ಕ್ರಮವನ್ನು ಒಗ್ಗಟ್ಟಿನಿಂದ ತಡೆಯಲು ಮುಂದಾಗಬೇಕು ಎಂದು ಕರೆ ನೀಡಿದೆ.

ಕಾಂ.ಸೀತಾರಾಮ್ ಅವರೊಂದಿಗೆ ಸಂದರ್ಶನ... ಪುಟ 2 ರಿಂದ

ಓದಬೇಕು ಅಂದುಕೊಂಡರೆ... ನಿಜವಾದ ಓದು ಮುಂದುವರಿಯುವುದಿಲ್ಲ.

ರಾಜಕೀಯ ಶಾಲೆಗೆ ಹೋಗುವ ಮುನ್ನ, ಹೋದ ನಂತರ... ತಿಳುವಳಿಕೆ ಮತ್ತು ಅಧ್ಯಯನದ ವೇಗದಲ್ಲಿ ಏನಾದರೂ ವ್ಯತ್ಯಾಸ ಕಂಡಿದೆಯಾ?

ಮೊದಲ ರಾಜಕೀಯ ಶಾಲೆಗೆ 1978 ರಲ್ಲಿ ಹೋಗಿದ್ದೆ ಎಂದು ಅಂದುಕೊಂಡಿದ್ದೇನೆ... ಜಲಂಧರ್ ಪಾರ್ಟಿ ಕಾಂಗ್ರೆಸ್ ನಂತರ ಆ ಶಾಲೆ ನಡೆಯಿತು. ರಾಜಕೀಯ ಶಾಲೆಗಳಿಗೆ ಹೋಗುವುದು ಬಹಳ ಮುಖ್ಯ. ನನ್ನ ವೈಯಕ್ತಿಕ ಅನುಭವ ಏನೆಂದರೆ ಅದರ ಬಳಿ ಹೋಗುವುದರಿಂದ ಓದು ಶ್ರೇಣೀಕೃತವಾಗುತ್ತದೆ. ಸ್ಟಡಿ ಗ್ರೂಪ್‌ಗಳಿಗೆ ಹೋದರೂ ಕೂಡಾ. ಯಾವ ಯಾವ ವಿಷಯಗಳಿಗಾಗಿ ಯಾವ ಪುಸ್ತಕಗಳನ್ನು ಓದಬೇಕು ಎನ್ನುವುದು ಕ್ರಮಬದ್ಧವಾಗುತ್ತದೆ. ಯಾವುದನ್ನು ಆರಿಸಿ ಓದಬೇಕು ಎಂಬ ಆದ್ಯತೆಯ ಕ್ರಮ ತಿಳಿಯುತ್ತದೆ.

ಆಸಕ್ತಿಗಾಗಿ ಓದುವವರು, ಅಗತ್ಯಗಳಿಗಾಗಿ ಓದುವವರು ಇದ್ದಾರೆ. ಅಧ್ಯಯನದಲ್ಲಿ ಇವುಗಳನ್ನು ಹೇಗೆ ಯೋಜಿಸಿಕೊಳ್ಳಬೇಕು?

ಈ ಎರಡರ ನಡುವೆ ಯಾವುದೇ ವೈರುಧ್ಯ ಇದೆ ಎಂದು ನನಗನ್ನಿಸುತ್ತಿಲ್ಲ. ಆಸಕ್ತಿಯುಳ್ಳವರಲ್ಲಿ ಕೂಡಾ ವಿಷಯಗಳು ಮತ್ತು ರಾಜಕೀಯಗಳು ಇರುತ್ತವೆ. ವಿರಾಮ ಸಮಯದಲ್ಲಿ ಪತ್ತೇದಾರಿ ಕಾದಂಬರಿಗಳನ್ನೂ ಓದುತ್ತಿದ್ದೆ.. ಬಂಡವಾಳಶಾಹಿಗಳು, ಶಸ್ತ್ರಾಸ್ತ್ರ ವ್ಯಾಪಾರಿಗಳು ಯುದ್ಧವನ್ನು ಏಕೆ ಬಯಸುತ್ತಾರೆ, ಅವರು ಯುದ್ಧದಿಂದ ಹೇಗೆ ಲಾಭ ಪಡೆಯುತ್ತಾರೆ ಎಂಬುದು ಮೊದಲ ಬಾರಿಗೆ ಪತ್ತೇದಾರಿ ಕಾದಂಬರಿಯ ಮೂಲಕ ತಿಳಿಯಿತು. ಆದ್ದರಿಂದ ಓದುವುದರಿಂದ ನಾವು ಏನನ್ನು ಗ್ರಹಿಸುತ್ತೇವೆ ಎಂಬುದರ ಮೇಲೆ ಇದು ಅವಲಂಬಿಸಿರುತ್ತದೆ. ಅಂದರೆ ನಿಮ್ಮ ಆಸಕ್ತಿಯ ವಿಷಯಗಳನ್ನು ಓದಬಾರದು ಎಂದರ್ಥವಲ್ಲ. ಆದರೆ ಮಾರ್ಕ್ಸ್‌ವಾದಿ ಮೂಲಭೂತವಾದ ಕ್ಲಾಸಿಕ್‌ಗಳನ್ನು ಓದಿದೆ, ಇವುಗಳಿಂದ ನಾವು ಎಲ್ಲವನ್ನೂ ಅರ್ಥಮಾಡಿಕೊಳ್ಳಬಹುದು, ತಿಳುವಳಿಕೆಯನ್ನು ಪಡೆಯುತ್ತೇವೆ ಎಂದು ಭಾವಿಸುವುದು ತಪ್ಪು. ಹಾಗೆಯೇ ಕ್ಲಾಸಿಕ್ ಓದಿ... ಎಲ್ಲವೂ ಅರ್ಥವಾಯಿತು ಎಂದುಕೊಳ್ಳುವುದೂ ಸರಿಯಲ್ಲ.

ಅನೇಕ ಪುಸ್ತಕಗಳನ್ನು ಓದುತ್ತೇವಲ್ಲವೇ! ಅದರಿಂದ ವಿಷಯಗಳನ್ನು ಸೆಳೆಯಲು ನೀವು ಹೇಗೆ ನೆನಪಿಸಿಕೊಳ್ಳುತ್ತೀರಿ? ನೆನಪಿಟ್ಟುಕೊಳ್ಳಲು ನೀವು ಏನು ಮಾಡುತ್ತೀರಿ?

ಯಾಕಾಗಿ ಓದುತ್ತಿದ್ದೇವೆ ಎಂಬ ಅರಿವು ನಮಗಿರಬೇಕು. ನಮ್ಮ ಜೀವನದಲ್ಲಿನ ಅನುಭವಗಳನ್ನು ಮೀರಿ ಇನ್ನೂ ಅನೇಕ ಅನುಭವಗಳಿವೆ. ಅವುಗಳನ್ನು ನಾವು ಅನುಭವಿಸುವ ಅವಕಾಶ ಇಲ್ಲ. ಆ ಅನುಭವಗಳಿಂದ ಮನುಷ್ಯ ಸಂಬಂಧಗಳು, ಅನುಭವಗಳು ಹೇಗಿವೆ ಎಂಬುದನ್ನು ಓದುತ್ತಾ ತಿಳಿಯಬಹುದು. ಅಗತ್ಯವಿದ್ದರೆ ಓದುವಾಗ ಟಿಪ್ಪಣಿಗಳನ್ನು ತೆಗೆದುಕೊಳ್ಳಬೇಕು. ಮನನ ಮಾಡಿಕೊಳ್ಳುವುದನ್ನು, ಬರೆಯುವುದನ್ನು ಮಾಡಬೇಕು. ನನ್ನ ಜೇಬಿನಲ್ಲಿ ಯಾವಾಗಲೂ ಸಣ್ಣ ಕಾಗದದ ತುಂಡುಗಳು ಇರುತ್ತವೆ. ಮುಖ್ಯವಾದ ವಿಷಯಗಳನ್ನು ತಿಳಿದುಕೊಂಡರೆ, ಓದಿದರೆ, ಯಾವ ರೀತಿಯಲ್ಲಿ ಗ್ರಹಿಸಿದರೂ ಅವುಗಳನ್ನು ತಕ್ಷಣವೇ ಬರೆದುಕೊಳ್ಳುತ್ತೇನೆ.

ಆತ್ಮವಿಮರ್ಶೆಯಿಂದ ಹೇಳಬೇಕೆಂದರೆ... ಈ ಕೆಲಸವನ್ನು ನಾನು ಕೂಡಾ ಮಾಡಬೇಕಾದಷ್ಟು ಮಾಡಲಾಗುತ್ತಿಲ್ಲ. ಓದುವುದು, ತಿಳಿದುಕೊಳ್ಳುವುದು ಮತ್ತು ಕಲಿತದ್ದನ್ನು ನಿಮ್ಮ ಗೆಳೆಯರೊಂದಿಗೆ ಹಂಚಿಕೊಳ್ಳಬೇಕು. ಇದು ಕ್ರಮಬದ್ಧವಾಗಿ ನಡೆಯಬೇಕು. ಆಗ ಮಾತ್ರ ಆ ಜ್ಞಾನ ಉಪಯುಕ್ತವಾಗುತ್ತದೆ. ಕೆಲವರು ತುಂಬಾ ಓದುತ್ತಾರೆ. ಚೆನ್ನಾಗಿ ಜ್ಞಾನವನ್ನು ಸಂಪಾದಿಸುತ್ತಾರೆ. ಆದರೆ ಅದು ಅವರಿಗೆ ಮಾತ್ರ ಸೀಮಿತ ಮಾಡಿಕೊಳ್ಳುತ್ತಾರೆ. ಇದರಿಂದ ಚಳವಳಿಗಳಿಗೆ ಪ್ರಯೋಜನವಾಗುತ್ತಿಲ್ಲ. ಇದಕ್ಕಾಗಿಯೇ ಮಾನಸಿಕ ಶಿಸ್ತು ಬೇಕು, ಎಷ್ಟೇ ಕಠಿಣವಾದ ವಿಷಯಗಳಾದರೂ ಸಭೆಗಳು, ತರಬೇತಿ ಶಾಲೆಗಳಿಗೆ ಹೋಗುವಾಗ ತಯ್ಯಾರಿ ಇರಬೇಕು. ತಯ್ಯಾರಿ ಇದ್ದರೆ ವಿಷಯ, ಕ್ರಮ ಮತ್ತು ವಿಧಾನ ಚೆನ್ನಾಗಿರುತ್ತದೆ. ಹೇಳಬೇಕು ಅಂದುಕೊಂಡದ್ದು ಇತರರಿಗೆ ತಲುಪುತ್ತದೆ.

ಅಷ್ಟು ಬಿಡುವಿಲ್ಲದ ವೇಳಾಪಟ್ಟಿಯಲ್ಲಿ ಅಧ್ಯಯನಕ್ಕಾಗಿ ಹೇಗೆ ಸಮಯ ಮಾಡಿಕೊಳ್ಳುತ್ತೀರಿ?

ಇದಕ್ಕೆ ಮಾನಸಿಕ ಶಿಸ್ತು ಬೇಕು. ಹೆಚ್ಚಿನ ಸಮಯವನ್ನು ಪ್ರಯಾಣದಲ್ಲಿ ಕಳೆಯುತ್ತೇನೆ. ಓದುವುದು, ಬರೆಯುವುದು ಕೂಡಾ ಪ್ರಯಾಣ ಮಾಡುವಾಗಲೇ ಮಾಡುತ್ತೇನೆ. ತಂತ್ರಜ್ಞಾನದ ಪ್ರಗತಿಯು ಬರೆದುದನ್ನು ಕಳುಹಿಸಲು ಸಾಧ್ಯವಾಗಿಸಿದೆ. ಪ್ರಾಥಮಿಕವಾಗಿ ಪ್ರತಿದಿನ ಸ್ವಲ್ಪ ಸಮಯವನ್ನು ಅಧ್ಯಯನಕ್ಕೆ ವಿನಿಯೋಗಿಸುವುದು ಅವಶ್ಯಕ. ಕಾಮ್ರೇಡ್ ಇ.ಎಂ.ಎಸ್. ರಿಂದ ಇದನ್ನು ಕಲಿತಿದ್ದೇನೆ. ಅವರು ದಿನವೂ ಬೆಳಗಿನ ಜಾವ ಎರಡು ಮೂರು ಗಂಟೆ ಓದುತ್ತಿದ್ದರು. ಆ ಸಮಯಕ್ಕೆ ತೊಂದರೆಯಾದರೆ, ಆ ದಿನದ ಯಾವುದೋ ಒಂದು ಸಮಯವನ್ನು ಅದಕ್ಕೆ ಹೊಂದಿಸಿಕೊಳ್ಳುತ್ತಿದ್ದರು. ನಾನೂ ಬೆಳಿಗ್ಗೆ ಅದನ್ನು ನಿಯೋಜಿಸುತ್ತೇನೆ. ಅದಕ್ಕೆ ಅಡ್ಡಿ ಉಂಟಾದರೆ, ಸರಿಹೊಂದಿಸಲು ಪ್ರಯತ್ನಿಸುತ್ತೇನೆ.

ಆರಂಭವಾದ ಪುಸ್ತಕ ಹಲವು ಕಾರಣಗಳಿಂದ ಮಧ್ಯದಲ್ಲಿಯೇ ನಿಂತು ಹೋಗುತ್ತದೆ. ಈ ಸಮಸ್ಯೆಯನ್ನು ನೀವು ಹೇಗೆ ನಿವಾರಿಸುತ್ತೀರಿ?

ಓದಲೇಬೇಕಾದ ಯಾವುದೇ ಪುಸ್ತಕವನ್ನಾದರೂ ಅದನ್ನು ಪೂರ್ತಿ ಮುಗಿಸದೇ ಇರುವುದು ವೈಯಕ್ತಿಕ ದೌರ್ಬಲ್ಯ. ಆ ಪುಸ್ತಕವನ್ನು ಪೂರ್ತಿ ಮಾಡಬೇಕೆಂದರೆ ಅದು ಮುಗಿಯುವವರೆಗೂ ನಮ್ಮೊಂದಿಗೆ ಇಟ್ಟುಕೊಳ್ಳಬೇಕು. ಅದನ್ನು ಪೂರ್ಣಗೊಳಿಸಬೇಕು ಎಂಬ ಬಯಕೆ, ಆಸಕ್ತಿ ಇದ್ದರೆ ಅದು ಸಾಧ್ಯವಾಗುತ್ತದೆ. ಭಾರತೀಯ ಲೇಖಕರಲ್ಲಿ ಮಾರ್ಕ್ಸ್‌ವಾದಿ ದಾರ್ಶನಿಕ ಎಂದು ಕರೆಸಿಕೊಳ್ಳುವ ದೇವಿಪ್ರಸಾದ್ ಚಟ್ಟೋಪಾಧ್ಯಾಯ ಅವರ ಅಮುದ್ರಿತ ಕೃತಿಗಳನ್ನು ಇತ್ತೀಚೆಗೆ ಮುದ್ರಿಸಿ ಪ್ರಕಟಿಸಲಾಗಿದೆ. ಅವುಗಳನ್ನು ಓದಲು ಎರಡು ತಿಂಗಳ ಹಿಂದೆ ಪ್ರಾರಂಭಿಸಿದೆ. ಪೂರ್ಣಗೊಳಿಸುವುದಕ್ಕೋಸ್ಕರ ಅವುಗಳನ್ನು ನನ್ನಲ್ಲೇ ಇಟ್ಟುಕೊಂಡಿದ್ದೇನೆ. ಆಸಕ್ತಿದಾಯಕವಾಗಿರುವ ಪುಸ್ತಕವನ್ನು ಓದುವಾಗ, ಆಕಸ್ಮಿಕವಾಗಿ ಬೇರೆ ಕೆಲಸಗಳೇನಾದರೂ ಬಂದರೆ ಸ್ವಲ್ಪ ಕಿರಿಕಿರಿಯನ್ನು ಉಂಟುಮಾಡಬಹುದು. ನಿಭಾಯಿಸಿಕೊಂಡು ತಕ್ಷಣ ಅವಶ್ಯವಾದ ಕೆಲಸಕ್ಕೆ ಇಳಿಯುತ್ತೇನೆ.

ಅಧ್ಯಯನದಲ್ಲಿ ಅಂದಿಗೂ.. ಇಂದಿಗೂ ವ್ಯತ್ಯಾಸ? ಆ ದಿನಗಳೇ ಚೆನ್ನಾಗಿತ್ತು... ಈ ದಿನಗಳಲ್ಲಿ ಓದುವುದಕ್ಕೆ ಸಮಯವಿಲ್ಲ ಅನಿಸುತ್ತಿದೆಯೇ?

ವ್ಯತ್ಯಾಸವಿದೆ ಆದರೆ, ಹಾಗೆ ಅನಿಸುವುದಿಲ್ಲ. ಸಹಜವಾಗಿ ಈಗ ಸಮಯ ಉಳಿಯುತ್ತಿದೆ. ತಂತ್ರಜ್ಞಾನದ ಬೆಳವಣಿಗೆಯಿಂದಾಗಿ ಈಗ ಮಾಹಿತಿಗಳು ತಕ್ಷಣವೇ ತಿಳಿಯುತ್ತದೆ. ಈಗ ಟೆಕ್ನಾಲಜಿ ಮತ್ತು ಟಿವಿ ಚಾನೆಲ್‌ಗಳಿಂದಾಗಿ ಮಾಹಿತಿಗಾಗಿ ಬಹಳ ದಿನ ಕಾಯುವ ಅಗತ್ಯವಿಲ್ಲ. ಮೊದಲಿಗಿಂತ ಹೆಚ್ಚು ಓದುವುದಕ್ಕೆ ಹೆಚ್ಚು ಸಮಯ ಉಳಿದಿದೆ. ಹಿಂದಿನ ದಿನಗಳಲ್ಲಿ ಮಾಹಿತಿ ಸಂಗ್ರಹಿಸಲು ಹೆಚ್ಚು ಸಮಯ ತೆಗೆದುಕೊಳ್ಳುತ್ತಿತ್ತು.

ವಿವಿಧ ವಲಯಗಳು, ಸಾಮಾಜಿಕ ವರ್ಗಗಳಿಗೆ ಸಂಬಂಧಿಸಿ ಬರುತ್ತಿರುವ ಸಮಕಾಲೀನ ಸಾಹಿತ್ಯವನ್ನು ಓದುವುದು ಅಗತ್ಯ ಇದೆಯೇ?

ಖಂಡಿತವಾಗಿಯೂ ಇದೆ. ಆ ರೀತಿ ಬರುತ್ತಿರುವ ಉತ್ತಮ ಸಾಹಿತ್ಯದ ಜೊತೆಗೆ ಅದಕ್ಕೂ ಮೀರಿ ಕೆಲಸಕ್ಕೆ ಬಾರದವು ಕೂಡಾ ಬರುತ್ತಿವೆ. ಅವುಗಳನ್ನು ಪ್ರತ್ಯೇಕಿಸಿ ಮತ್ತು ಸಮಕಾಲೀನ ಸಾಹಿತ್ಯವನ್ನು ಓದಬೇಕು.

ವಿಷಯದ ಅಧ್ಯಯನದಲ್ಲಿ ವಿಶೇಷತೆಗಳಿಗೆ ಸಂಬಂಧಿಸಿ..?

ವಿಶೇಷತೆ (ಸ್ಪೆಷಲೈಜೇಷನ್) ಎಂದರೆ ಉಳಿದವುಗಳ ಅಧ್ಯಯನಗಳನ್ನು ಮಾಡಬಾರದು ಎಂದಲ್ಲ. ಸಾಮಾನ್ಯವಾಗಿ ಎಲ್ಲಾ ವಿಷಯಗಳ ಕುರಿತು ಪ್ರಾಥಮಿಕ ತಿಳುವಳಿಕೆಗಾಗಿ ಓದುವಿಕೆ ಅವಶ್ಯಕವಾಗಿದೆ, ಜೊತೆಗೆ ಕೆಲಸ ಮಾಡುವ ವಿಷಯಗಳ ಮೇಲೆ ವಿಶೇಷತೆ ಮಾಡುವ ಅವಶ್ಯಕತೆ. ಒಂದು ವಿಷಯದಲ್ಲಿ ಪರಿಣತಿ ಪಡೆದು ಉಳಿದದ್ದನ್ನು ಬಿಡುವುದು ಸರಿಯಲ್ಲ. ಇದರಿಂದ ಸಮಗ್ರತೆ ಬರುವುದಿಲ್ಲ. ವಿಶೇಷತೆ ಇಲ್ಲದೆ ಎಲ್ಲ ವಿಷಯವನ್ನು ಓದುವುದರಿಂದಲೂ ಯಾವುದೇ ಪ್ರಯೋಜನವಿಲ್ಲ.

ಇಂದಿಗೂ ನಿಮಗೆ ಇನ್ನೂ ಸ್ಫೂರ್ತಿ ನೀಡುವ ಪುಸ್ತಕದ ಲೇಖಕ?

ಹೇಳಲು ಕಷ್ಟ. ಬಹಳಷ್ಟು ಮಂದಿ ಇದ್ದಾರೆ. ಬಹಳಷ್ಟು ಪುಸ್ತಕಗಳಿವೆ. ಆದಾಗ್ಯೂ, ನನ್ನ ದೃಷ್ಟಿಯಲ್ಲಿ, ಶಾಸ್ತ್ರೀಯ ಮೇರುಕೃತಿ ಮಾರ್ಕ್ಸ್ ಬರೆದ 'Louis Bonaparte Eighteenth Brumer'. ಬೇಸರವನ್ನು ಕೊಲ್ಲಲು ಆಗಾಗ್ಗೆ ಓದುವ ಪುಸ್ತಕ ಇದು.

ಅದರಲ್ಲಿ ಒಂದು ವಾಕ್ಯ.

"Man makes history but not on the Circumstances choice by him!' ("ಮನುಷ್ಯನು ಇತಿಹಾಸವನ್ನು ಸೃಷ್ಟಿಸುತ್ತಾನೆ ಆದರೆ ಅವನಿಂದ ಸಂದರ್ಭಗಳ ಆಯ್ಕೆಯ ಮೇಲೆ ಅಲ್ಲ!)

ಕೃಪೆ: ಪ್ರಜಾಶಕ್ತಿ ಕನ್ನಡಕ್ಕೆ: ಸಿ.ಸಿದ್ದಯ್ಯ

ಕಾಮ್ರೇಡ್ ಸೀತಾರಾಮ್‌ಗೆ ನಮನ

ಪ್ರಕಾಶ್ ಕಾರಟ್

ಕಾಮ್ರೇಡ್ ಸೀತಾರಾಮ್ ಮತ್ತು ಕಾಮ್ರೇಡ್ ಪ್ರಕಾಶ್ ಕಾರತ್ ಅವರ ಸಂಬಂಧ ಅತ್ಯಂತ ದೀರ್ಘಕಾಲಿಕವಾದುದು. ಜೆ.ಎನ್.ಯು.ವಿ.ನಿಂದ ಆರಂಭಿಸಿ ಪಕ್ಷದ ಉನ್ನತ ಸಮಿತಿ ಕೇಂದ್ರ ಸಮಿತಿ, ಪೊಲಿಟ್ ಬ್ಯೂರೋ ಹಂತಗಳಲ್ಲಿ 'ಇಬ್ಬರ ಜೋಡಿ' ಕೆಲಸ ಮಾಡುತ್ತಾ ಬಂದಿದೆ. ನಿಕಟ ನೋಟ, ಅನುಭವಗಳಿರುವ ಕಾರತ್ ರವರು ಸೀತರಾಮ್ ಅವರನ್ನು, ಅವರ ಸಾಮರ್ಥ್ಯ, ಕೊಡುಗೆ ನೆನೆಪಿಸಿಕೊಂಡಿದ್ದಾರೆ.



ಕಾಮ್ರೇಡ್ ಸೀತಾರಾಮ್ ಯೆಚೂರಿ ಬಗ್ಗೆ ಭೂತಕಾಲದಲ್ಲಿ ಬರೆಯುವುದೆಂದರೆ ನನಗೆ ತುಂಬಾ ಕಷ್ಟ ಹಾಗೂ ನೋವಿನ ವಿಚಾರವಾಗಿದೆ. ನಮ್ಮ ಐದು ದಶಕಗಳ ರಾಜಕೀಯ ಜೀವನವು ತುಂಬಾ ನಿಕಟವಾಗಿ ಹಾಗೂ ಪರಸ್ಪರ ಬೆಸೆದುಕೊಂಡಿದ್ದು, ಪಕ್ಷ ಮತ್ತು ಎಡ ಚಳವಳಿಯಲ್ಲಿನ ಹಲವು ಏರಿಳಿತಗಳನ್ನು ನಾವು ಒಟ್ಟಿಗೇ ಹಾದು ಬಂದಿದ್ದೇವೆ. 1974ರಲ್ಲಿ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ(ಜೆಎನ್‌ಯು)ದಿಂದ ಆರಂಭಿಸಿ 50 ವರ್ಷಗಳ ಹಿಂದೆ ನಮ್ಮ ಸಂಗಾತಿತನ ಆರಂಭವಾಗಿ, ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್‌ಎಫ್‌ಐ) ಹಾಗೂ ಆ ನಂತರ ಪಕ್ಷದಲ್ಲಿ ಅದು ಮುಂದುವರಿದಿತ್ತು. ನಾವು ಪಕ್ಷದ ಕೇಂದ್ರದಲ್ಲಿ ಸರಿಸುಮಾರು 37 ವರ್ಷ ಒಟ್ಟಿಗೇ ಕೆಲಸ ಮಾಡಿದ್ದೇವೆ. ನನಗೆ 1985ರಲ್ಲಿ ಪಕ್ಷದ ಕೇಂದ್ರದಲ್ಲಿ ಕಾರ್ಯಭಾರ ವಹಿಸಲಾಯಿತು ಹಾಗೂ ಎರಡು ವರ್ಷದ ನಂತರ ಸೀತಾರಾಮ್ ಕೇಂದ್ರದಲ್ಲಿ ಜವಾಬ್ದಾರಿ ಹೊಂದಿದರು. ಪಕ್ಷದಲ್ಲಿ ನಮ್ಮ ಪಯಣದ ಪಥ ಬಹುತೇಕ ಒಂದೇ ಆಗಿತ್ತು. ನಾವಿಬ್ಬರೂ 1984ರಲ್ಲಿ ಪಕ್ಷದ ಕೇಂದ್ರ ಸಮಿತಿಗೆ ಕಾಯಂ ಆಹ್ವಾನಿತರಾದೆವು ಹಾಗೂ 1985ರಲ್ಲಿ 12ನೇ ಮಹಾಧಿವೇಶನದಲ್ಲಿ ಕೇಂದ್ರ ಸಮಿತಿಗೆ ಮತ್ತು 1988ರಲ್ಲಿ 13ನೇ ಮಹಾಧಿವೇಶನದಲ್ಲಿ ಕೇಂದ್ರ ಕಾರ್ಯದರ್ಶಿ ಮಂಡಳಿಗೆ, ತದನಂತರ 1992ರಲ್ಲಿ ಪಕ್ಷದ 14ನೇ ಕಾಂಗ್ರೆಸ್‌ನಲ್ಲಿ ಪಾಲಿಟ್ ಬ್ಯೂರೋಗೆ ಆಯ್ಕೆಯಾದೆವು.

ಸಿಪಿಐ(ಎಂ), ಎಡ ಮತ್ತು ಪ್ರಜಾಸತ್ತಾತ್ಮಕ ಚಳವಳಿ ಹಾಗೂ ಪ್ರಗತಿಪರ ಆಶಯಗಳಿಗೆ ಸೀತಾರಾಮ್ ಅವರ ಬಹುಮುಖಿ ಹಾಗೂ ವೈವಿಧ್ಯಮಯ ಕೊಡುಗೆಗಳ ಬಗ್ಗೆ ಹೇಳುವುದಾದರೆ, ಅವುಗಳನ್ನು ಸರಿಯಾದ ದೃಷ್ಟಿಕೋನದಲ್ಲಿ ಮಂಡಿಸಲು ಹೆಚ್ಚು ಸಮಯ ಮತ್ತು ಚರ್ಚೆ ಬೇಕಾಗುತ್ತದೆ. ಸೈದ್ಧಾಂತಿಕ, ವಾಸ್ತವಿಕ ಮತ್ತು ಪಕ್ಷದ ರಾಜಕೀಯ ನಿಲುವುಗಳಿಗೆ ಅವರು ಕೊಟ್ಟ ಕೊಡುಗೆಗಳ ಮೇಲೆ ಕೇಂದ್ರೀಕರಿಸಲು ಈ ಸಂದರ್ಭವನ್ನು ಬಳಸಿಕೊಳ್ಳಲು ನಾನು ಬಯಸುತ್ತೇನೆ.

ಜಾತ್ಯತೀತ ಪ್ರತಿಪಕ್ಷಗಳ ನಾಯಕರನ್ನು ತಲುಪುವ ಸೀತಾರಾಮ್‌ರ ಸಾಮರ್ಥ್ಯ ಮತ್ತು ಅವರನ್ನು ಸಂಯುಕ್ತ ವೇದಿಕೆ ಮೇಲೆ ಒಟ್ಟಿಗೆ ತರುವ ಕೌಶಲದ ಬಗ್ಗೆ ಮುಖ್ಯವಾಹಿನಿ ಮಾಧ್ಯಮಗಳಲ್ಲಿ ಬಹಳಷ್ಟನ್ನು ಹೇಳಲಾಗಿದೆ. ಅವರ ಚಟುವಟಿಕೆಗಳ ಸಾರ್ವಜನಿಕ ಮುಖದ ಕುರಿತು ಇದು ಹೆಚ್ಚು ನಿಜವಾದರೂ ಪಕ್ಷ ಮತ್ತು ಮಾರ್ಕ್ಸ್‌ವಾದಕ್ಕೆ ಅವರ ಮಹತ್ವದ ಕೊಡುಗೆಗಳ ಮೇಲೆ ಚರ್ಚಿಸಲು ನಾನು ಬಯಸುತ್ತೇನೆ. ಪಕ್ಷದ ಕೇಂದ್ರ ಮತ್ತು ಪಾಲಿಟ್‌ಬ್ಯೂರೋದಲ್ಲಿ ಅವರ ಕೆಲಸ ಎಷ್ಟು ವಿಶಿಷ್ಟವಾಗಿತ್ತೋ, ಅದುವೇ ಮಾರ್ಕ್ಸ್‌ವಾದ-ಲೆನಿನ್‌ವಾದದ ಆಧಾರದಲ್ಲಿ ಪಕ್ಷದ ಸೈದ್ಧಾಂತಿಕ ನಿಲುಮೆಯನ್ನು ರೂಪಿಸುವಲ್ಲಿನ ಅವರ ಪಾತ್ರವಾಗಿದೆ.

ಸಿಪಿಐ(ಎಂ) ಸ್ಥಾಪನೆಯಾದಾಗಿನಿಂದಲೂ ಮಾರ್ಕ್ಸ್‌ವಾದ-ಲೆನಿನ್‌ವಾದಕ್ಕೆ ಹಾಗೂ ಬಲ ಮತ್ತು ಎಡ ದಿಕ್ಚ್ಯುತಿ ವಿರುದ್ಧದ ಹೋರಾಟದಲ್ಲಿ ಕಟ್ಟಾ ಬದ್ಧತೆಯನ್ನು ಹೊಂದಿದೆ. 1968ರಲ್ಲಿ ನಡೆದ ಬರ್ದ್ವಾನ್ ಪ್ಲೀನಮ್‌ನಲ್ಲಿ ಸೈದ್ಧಾಂತಿಕ ಪ್ರಶ್ನೆಗಳ ಮೇಲೆ ಅಂಗೀಕರಿಸಿದ ವರದಿ ಮತ್ತು ಗೊತ್ತುವಳಿಯು ಭಾರತದ ಕಮ್ಯೂನಿಸ್ಟ್ ಚಳವಳಿಯಲ್ಲಿ ಪ್ರಮುಖ ಮೈಲಿಗಲ್ಲಾಗಿವೆ. ಆ ಕಾಲದಲ್ಲಿ ಅಂತಾರಾಷ್ಟ್ರೀಯ ಕಮ್ಯೂನಿಸ್ಟ್ ಆಂದೋಲನದಲ್ಲಿದ್ದ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು ಹಾಗೂ ಭಿನ್ನಮತಗಳಿಗೆ ಮಾರ್ಕ್ಸ್‌ವಾದ-ಲೆನಿನ್‌ವಾದವನ್ನು ಅನ್ವಯಿಸಿ ಸ್ವತಂತ್ರ ಹಾದಿಯನ್ನು ಅವು ರೂಪಿಸಿದ್ದವು. ಸೀತಾರಾಮ್ ಮುಂದಕ್ಕೆ ಒಯ್ದಿದ್ದು ಆ ಧೋರಣೆಯನ್ನೇ.

1987ರಲ್ಲಿ, ಅಕ್ಟೋಬರ್ ಕ್ರಾಂತಿಯ 70ನೇ ವಾರ್ಷಿಕೋತ್ಸವದ ಸಂದರ್ಭ, ಸೋವಿಯತ್ ಒಕ್ಕೂಟ ಕಮ್ಯೂನಿಸ್ಟ್ ಪಕ್ಷದ (ಸಿಪಿಎಸ್‌ಯು) ಪ್ರಧಾನ ಕಾರ್ಯದರ್ಶಿ ಮಿಖಾಯಿಲ್ ಗೊರ್ಬಚೇವ್ ಮಾಸ್ಕೋದಲ್ಲಿ ಸಭೆಯೊಂದರಲ್ಲಿ ಮಾತನಾಡಿದ್ದರು. ಸಾಮಾಜಿಕ ವೈರುಧ್ಯಗಳು ಮತ್ತು ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದ ಕುರಿತ ಮಾರ್ಕ್ಸ್‌ವಾದಿ ವಿಶ್ಲೇಷಣೆಯಿಂದ ದೂರವಾಗುವ ಹಲವು ಸೂತ್ರಗಳು ಆ ಭಾಷಣದಲ್ಲಿವು. ಗೊರ್ಬಚೆವ್‌ರ ಆ ಸೂತ್ರಗಳನ್ನು ಮೊದಲು ವಿರೋಧಿಸಿದ ಪಕ್ಷವೇ ಸಿಪಿಐ(ಎಂ). 1988ರ ಮೇ ತಿಂಗಳಲ್ಲಿ ನಡೆದ ಕೇಂದ್ರ ಸಮಿತಿ ಸಭೆಯ ಗೊತ್ತುವಳಿ ಗೊರ್ಬಚೆವ್ ಸೂತ್ರಗಳನ್ನು ವಿರೋಧಿಸಿತ್ತು. ಅದಾದ ಮೇಲೆ, 1988ರ ಆಗಸ್ಟ್‌ನಲ್ಲಿ ಕೇಂದ್ರ ಸಮಿತಿ ಸಭೆ ಇನ್ನೊಂದು ನಿರ್ಣಯವನ್ನು ಅಂಗೀಕರಿಸಿತು. 'ಸೋವಿಯತ್ ಒಕ್ಕೂಟದಲ್ಲಿನ ಇತ್ತೀಚಿನ ವಿದ್ಯಮಾನಗಳ ಕುರಿತು' ಎನ್ನುವುದು ಆ ಗೊತ್ತುವಳಿಯ ಶೀರ್ಷಿಕೆಯಾಗಿದೆ. ಸಿಪಿಎಸ್‌ಯುನಲ್ಲಿನ ಆಂತರಿಕ ಬೆಳವಣಿಗೆಗಳು ಮತ್ತು ಪೆರೆಸ್ಟ್ರೋಯ್ಕಾ ಹಾಗೂ ಗ್ಲಾಸ್‌ನಾಸ್ಟ್ ಹೆಸರಿನಲ್ಲಿ ಅದು ಮಾಡುತ್ತಿರುವ ತಪ್ಪುಗಳಿಂದ ಸೋವಿಯತ್ ಯೂನಿಯನ್‌ಗೇ ಅಪಾಯವಿದೆ ಎಂದು ಈ ಗೊತ್ತುವಳಿ ಎಚ್ಚರಿಸಿತ್ತು. 1990ರ ಮೇ ತಿಂಗಳಲ್ಲಿ ಕೇಂದ್ರ ಸಮಿತಿ ಮೂರನೇ ಗೊತ್ತುವಳಿಯನ್ನು ಅಂಗೀಕರಿಸಿತು. ಸಮಾಜವಾದಿ ಸರಕಾರಗಳು ಪತನಗೊಳ್ಳಲು ಕಾರಣವಾದ ಪೂರ್ವ ಯುರೋಪ್ ದೇಶಗಳ ಬಿಕ್ಕಟ್ಟುಗಳನ್ನು ವಿಶ್ಲೇಷಿಸಿದ ಆ ಗೊತ್ತುವಳಿ, ಆ ದೇಶಗಳಲ್ಲಿನ ಸೈದ್ಧಾಂತಿಕ ಸವಕಳಿ ಮತ್ತು ಸಮಾಜವಾದ ಕಟ್ಟುವಲ್ಲಿನ ವಿರೂಪಗಳೇ ಅದಕ್ಕೆ ಕಾರಣ ಎಂದು ಅಭಿಪ್ರಾಯ ಪಟ್ಟಿತ್ತು. ಈ ಗೊತ್ತುವಳಿಯನ್ನು ರೂಪಿಸುವಲ್ಲಿ ಸೀತಾರಾಮ್ ಮಹತ್ವದ ಪಾತ್ರ ವಹಿಸಿದ್ದರು. ನಂತರದ ವರ್ಷಗಳಲ್ಲಿ ಸಮಗ್ರ ಸೈದ್ಧಾಂತಿಕ ದಸ್ತಾವೇಜುಗಳಿಗೆ ಈ ಗೊತ್ತುವಳಿಯೇ ಆಧಾರವಾಯಿತು.

1991ರಲ್ಲಿ ಸೋವಿಯತ್ ಒಕ್ಕೂಟ ಪತನವಾದ ನಂತರ, ಸಮಾಜವಾದಕ್ಕಾದ ಐತಿಹಾಸಿಕ ಹಿನ್ನಡೆಯನ್ನು ಗಮನಕ್ಕೆ ತೆಗೆದುಕೊಂಡು, ಸೋವಿಯತ್ ಒಕ್ಕೂಟೋತ್ತರ ಸೈದ್ಧಾಂತಿಕ ನಿಲವನ್ನು ರೂಪಿಸುವುದು ಪಕ್ಷಕ್ಕೆ ಅಗತ್ಯವಾಯಿತು. 1992ರ ಮದ್ರಾಸ್ ಮಹಾಧಿವೇಶನದಲ್ಲಿ ಅದನ್ನು ಮಾಡಲಾಯಿತು. ಪೂರ್ಣ ಪ್ರಮಾಣದ ಚರ್ಚೆಯ ನಂತರ 'ನಿರ್ದಿಷ್ಟ ಸೈದ್ಧಾಂತಿಕ ವಿಷಯಗಳ ಕುರಿತು' ಎಂಬ ಗೊತ್ತುವಳಿಯನ್ನು ಪಕ್ಷದ ಕಾಂಗ್ರೆಸ್ ಅಂಗೀಕರಿಸಿತು. ಮಹಾಧಿವೇಶನದಲ್ಲಿ ಈ ಗೊತ್ತುವಳಿಯನ್ನು ಮಂಡಿಸಿದ್ದು ಮತ್ತು ತಮ್ಮ ಉತ್ತರದಲ್ಲಿ ಚರ್ಚೆಯನ್ನು ಸ ವ್ ಾ ಪ ನ ಗ ೊ ಳ ಿ ಸಿ ದ ್ ದ ು ಸೀತಾರಾಮ್ ಅವರೇ.

ಅದೇ ಮೊದಲ ಬಾರಿಗೆ ಒಂದು ಸೈದ್ಧಾಂತಿಕ ದಾಖಲೆಯನ್ನು ಸಿದ್ಧಪಡಿಸಲಾಯಿತು ಹಾಗೂ ಪಾಲಿಟ್ ಬ್ಯೂರೋ ಪರವಾಗಿ ಕೇಂದ್ರ ಕಾರ್ಯದರ್ಶಿ ಮಂಡಳಿ ಸದಸ್ಯರೊಬ್ಬರು ಮಂಡಿಸಿದರು. ಸಾಮಾನ್ಯವಾಗಿ ಪಿಬಿ ಪರವಾಗಿ ಕಾಂ.ಎಂ.ಬಸವಪುನ್ನಯ್ಯ ಆ ಕಾರ್ಯಭಾರ ನಿರ್ವಹಿಸುವುದು ವಾಡಿಕೆಯಾಗಿತ್ತು. ಆದರೆ, ಸೆಂಟ್ರಲ್ ಸೆಕ್ರಟಾರಿಯೇಟ್ ಸದಸ್ಯ ಸೀತಾರಾಮ್ ಅದನ್ನು ಮಂಡಿಸಿದ್ದು ಅವರೊಬ್ಬ ಮಾರ್ಕ್ಸ್‌ವಾದಿ ಸಿದ್ಧಾಂತಿ ಎನ್ನುವುದನ್ನು ಪಕ್ಷ ಮಾನ್ಯ ಮಾಡಿದ್ದಕ್ಕೆ ಪುರಾವೆಯಾಗಿತ್ತು. ಅಂದಿನಿಂದಲೂ, ಪಾಲಿಟ್ ಬ್ಯೂರೋದಲ್ಲಿ ಸೈದ್ಧಾಂತಿಕ ವಿಚಾರಗಳ ಮಂಡನೆಯಲ್ಲಿ ಸೀತಾರಾಮ್ ಮುಂಚೂಣಿ ಶಕ್ತಿಯಾಗಿದ್ದರು.

ಈ ಸೈದ್ಧಾಂತಿಕ ಅಸ್ತ್ರದೊಂದಿಗೆ ಸಜ್ಜಾಗಿ, ಕಾರ್ಲ್ ಮಾರ್ಕ್ಸ್‌ರ 175ನೇ ಜನ್ಮ ದಿನೋತ್ಸವದ ಅಂಗವಾಗಿ 1993ರ ಮೇ ತಿಂಗಳಲ್ಲಿ ಕೋಲ್ಕತದಲ್ಲಿ ಕಮ್ಯೂನಿಸ್ಟ್ ಪಕ್ಷಗಳ ಅಂತಾರಾಷ್ಟ್ರೀಯ ವಿಚಾರಗೋಷ್ಠಿಯೊಂದನ್ನು ಸಿಪಿಐ(ಎಂ) ಆಯೋಜಿಸಿತ್ತು. 'ಸಮಕಾಲೀನ ಜಾಗತಿಕ ಪರಿಸ್ಥಿತಿ ಮತ್ತು ಮಾರ್ಕ್ಸ್‌ವಾದದ ಸಿಂಧುತ್ವ' ಎನ್ನುವುದು ಸೆಮಿನಾರ್‌ನ ಥೀಮ್ ಆಗಿತ್ತು. ಸೋವಿಯತ್ ಒಕ್ಕೂಟದ ವಿಘಟನೆ ಮತ್ತು ಪೂರ್ವ ಯುರೋಪ್ ದೇಶಗಳಲ್ಲಿ ಸಮಾಜವಾದಿ ಆಡಳಿತಗಳ ಪತನದಿಂದ ಸಮಾಜವಾದಕ್ಕಾದ ಹಿನ್ನಡೆಗಳ ಹಿನ್ನೆಲೆಯಲ್ಲಿ ಈ ವಿಷಯವನ್ನು ಆಯ್ಕೆ ಮಾಡಲಾಗಿತ್ತು. 21 ಕಮ್ಯೂನಿಸ್ಟ್ ಪಕ್ಷಗಳ ಪ್ರತಿನಿಧಿಗಳು ಸೆಮಿನಾರ್‌ನಲ್ಲಿ ಪಾಲ್ಗೊಂಡು ಪ್ರಬಂಧವನ್ನು ಮಂಡಿಸಿದರು. ಪಕ್ಷದ ಅಂತಾರಾಷ್ಟ್ರೀಯ ವಿಭಾಗದ ಮುಖ್ಯಸ್ಥರಾಗಿ ಸೀತಾರಾಮ್ ಅವರು ಪಕ್ಷದ ಪ್ರಬಂಧವನ್ನು ರಚಿಸಿದರು ಹಾಗೂ ಅವರೇ ವಿಚಾರ ಸಂಕಿರಣದ ಸಂಘಟಕರಾಗಿದ್ದರು.

ನಂತರ, ಸೈದ್ಧಾಂತಿಕ ಪ್ರಶ್ನೆಗಳ ಕುರಿತ ನಮ್ಮ ಅರಿವನ್ನು ಸಮಕಾಲಿಕಗೊಳಿಸಲು (ಅಪ್ಡೇಟ್) ಕೇಂದ್ರ ಸಮಿತಿ ನಿರ್ಧರಿಸಿದಾಗ ಒಂದು ಸಮಗ್ರ ಹಾಗೂ ಅಪ್ಡೇಟೆಡ್ ದಾಖಲೆಯನ್ನು ರೂಪಿಸುವ ಹೊಣೆಗಾರಿಕೆ ಸಹಜವಾಗಿಯೇ ಸೀತಾರಾಮ್ ಹೆಗಲ ಮೇಲೆ ಬಿತ್ತು. 'ಕೆಲವು ಸೈದ್ಧಾಂತಿಕ ಪ್ರಶ್ನೆಗಳ ಮೇಲೆ ನಿರ್ಣಯಗಳು' ಶೀರ್ಷಿಕೆಯ ಈ ಗೊತ್ತುವಳಿಯನ್ನು 2012ರಲ್ಲಿ ಕೋಳಿಕೋಡ್‌ನಲ್ಲಿ ನಡೆದ ಪಕ್ಷದ 20ನೇ ಮಹಾಧಿವೇಶನದಲ್ಲಿ ಸೀತಾರಾಮ್ ಮಂಡಿಸಿದ್ದು ಸಮಗ್ರ ಚರ್ಚೆಯ ನಂತರ ಅದನ್ನು ಅಂಗೀಕರಿಸಲಾಗಿತ್ತು.

ಫ್ಯಾಸಿಸ್ಟ್‌ವಾದಿ ಹಿಂದುತ್ವ ಸಿದ್ಧಾಂತದ ವಿರುದ್ಧದ ಸೈದ್ಧಾಂತಿಕ ಹೋರಾಟದ ಇನ್ನೊಂದು ಪ್ರಮುಖ ಕ್ಷೇತ್ರಕ್ಕೆ ಸೀತಾರಾಮ್ ಮಹತ್ವದ ಕೊಡುಗೆ ನೀಡಿದ್ದಾರೆ. ಒಂದು ಉದಾಹರಣೆಯು ಈ ಹೋರಾಟದಲ್ಲಿ ಸೀತಾರಾಮ್‌ರ ಪ್ರಮುಖ ಪಾತ್ರವನ್ನು ಎತ್ತಿ ತೋರಿಸುತ್ತದೆ. ಆರ್‌ಎಸ್‌ಎಸ್‌ನ ಎರಡನೇ ಪ್ರಮುಖರಾದ (ಸರಸಂಘ ಚಾಲಕ) ಎಂ.ಎಸ್. ಗೋಲ್ವಾಲ್ಕರ್‌ರ ಪುಸ್ತಕವೊಂದರ ಬಗ್ಗೆ 1993ರಲ್ಲಿ ಸೀತಾರಾಮ್ ವಿಮರ್ಶೆ ಬರೆದಿದ್ದರು. ಗೋಲ್ವಾಲ್ಕರ್ ಬರೆದಿದ್ದ 77 ಪುಟಗಳ 'ನಾವು ಅಥವಾ ನಮ್ಮ ರಾಷ್ಟ್ರೀಯತ್ವದ ವ್ಯಾಖ್ಯಾನ' (ವಿ ಆರ್ ಅವರ್ ನೇಶನ್‌ಹುಡ್ ಡಿಫೈನ್ಡ್) ಪುಸ್ತಕ 1939ರಲ್ಲಿ ಪ್ರಕಟವಾಗಿತ್ತು. ಈ ಪುಸ್ತಕ ಹಿಂದೂ ರಾಷ್ಟ್ರದ ಫ್ಯಾಸಿಸ್ಟ್ ಅಂಶವನ್ನು ಅನಾವರಣ ಮಾಡುತ್ತದೆ. ಆ ಕೃತಿಯ ಮೂಲ ಪ್ರತಿ ದೊರೆಯುತ್ತಿರಲಿಲ್ಲ. ಆದರೆ ಸೀತಾರಾಮ್ 1939ರ ಮೂಲ ಆವೃತ್ತಿಯ ಒಂದು ಪ್ರತಿಯನ್ನು ಹೇಗೋ ಪಡೆದರು ಹಾಗೂ ಹಿಂದೂ ರಾಷ್ಟ್ರದ ಪರಿಕಲ್ಪನೆಯನ್ನು ಹೊಕ್ಕ ಫ್ಯಾಸಿಸ್ಟಿಕ್ ಸಂತತಿ ಮತ್ತು ಚಿಂತನೆಯ ಪ್ರಖರವಾದ ವಿಮರ್ಶೆ ಮಾಡಿದರು. ಅದು ಫ್ರಂಟ್‌ಲೈನ್‌ನ 1993 ಮಾರ್ಚ್ 12ರ ಸಂಚಿಕೆಯಲ್ಲಿ ಪ್ರಕಟವಾಯಿತು. ನಂತರ ಫ್ರಂಟ್‌ಲೈನ್ ಪ್ರಕಾಶನದಿಂದ ವಿಸ್ತೃತ ರೂಪದಲ್ಲಿ ಪ್ರಕಟಗೊಂಡಿತು. ಆರ್‌ಎಸ್‌ಎಸ್ ಬಗ್ಗೆ ಅಧಿಕಾರಯುತವಾಗಿ ಮಾತನಾಡಬಲ್ಲ ದಿವಂಗತ ಎ.ಜಿ.ನೂರಾನಿ ಈ ಕಿರುಪುಸ್ತಕದ ಮಹತ್ವವನ್ನು ತಿಳಿದುಕೊಂಡರು. ಕಿರುಪುಸ್ತಕವನ್ನು ತುಂಬಾ ಮೆಚ್ಚಿಕೊಂಡು ಸೀತಾರಾಮ್‌ರನ್ನು ಅಭಿನಂದಿಸಿದರು. ಹಿಂದೂತ್ವ ಸೈದ್ಧಾಂತಿಕ ತಳಹದಿಯನ್ನು ಅರ್ಥ ಮಾಡಿಕೊಳ್ಳುವಲ್ಲಿನ ಈ ದೂರದೃಷ್ಟಿ ಮತ್ತು ಸ್ಪಷ್ಟತೆಯೇ ಜಾತ್ಯತೀತತೆಯನ್ನು ರಕ್ಷಿಸುವಲ್ಲಿ ಹಾಗೂ ಹಿಂದುತ್ವ-ಕೋಮುವಾದಿ ಶಕ್ತಿಗಳನ್ನು ಎದುರಿಸುವಲ್ಲಿನ ಸೀತಾರಾಮ್‌ರ ರಾಜಕೀಯ ಬದ್ಧತೆಗೆ ಪ್ರೇರಣೆಯಾಗಿತ್ತು.

ಯಾವುದೇ ಒಂದು ಕಮ್ಯೂನಿಸ್ಟ್ ಪಕ್ಷಕ್ಕೆ ಕಾರ್ಯಕ್ರಮವು ಮೂಲಭೂತ ದಸ್ತಾವೇಜು ಆಗಿದ್ದು, ಅದು ಕಾರ್ಯತಂತ್ರದ ಹಾದಿಯನ್ನು ರೂಪಿಸುತ್ತದೆ. ಸಿಪಿಐ(ಎಂ) 1964ರಲ್ಲಿ ನಡೆದ 7ನೇ ಮಹಾಧಿವೇಶನದಲ್ಲಿ ತನ್ನ ಕಾರ್ಯಕ್ರಮವನ್ನು ಅಂಗೀಕರಿಸಿತು. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಪ್ರಜಾಸತ್ತಾತ್ಮಕ ಕ್ರಾಂತಿಯ ಕಾರ್ಯತಂತ್ರ ಏನಾಗಿರಬೇಕೆಂಬುದರ ಕುರಿತು ಏಕೀಕೃತ ಕಮ್ಯೂನಿಸ್ಟ್ ಪಕ್ಷದೊಳಗಿನ ಸುದೀರ್ಘ ಹೋರಾಟದ ಫಲವಾಗಿದೆ ಈ ಕಾರ್ಯಕ್ರಮ. ಆದರೆ, ಕಾರ್ಯಕ್ರಮವನ್ನು ಅಪ್ಡೇಡ್ ಮಾಡುವುದು ಅಗತ್ಯವಾದ ಎರಡು ಪ್ರಮುಖ ಅಂತಾರಾಷ್ಟ್ರೀಯ ಮತ್ತು ದೇಶೀಯ ಬೆಳವಣಿಗೆಗಳು ನಡೆದವು. ಸೋವಿಯತ್ ಒಕ್ಕೂಟದ ಅಂತ್ಯ ಹಾಗೂ ಸಾಮ್ರಾಜ್ಯಶಾಹಿಯ ಏಕಸ್ವಾಮ್ಯ ಬಲಗೊಂಡಿದ್ದರಿಂದ ಅಂತಾರಾಷ್ಟ್ರೀಯವ್ವಾಗಿ ವರ್ಗ

ಪುಟ 10 ಕ್ಕೆ

ನಾಗಮಂಗಲ: ಹೊತ್ತಿ ಉರಿದಿದ್ದೇಕೆ?



ಸೆಪ್ಟೆಂಬರ್ 11 ರಂದು ಮಂಡ್ಯ ಜಿಲ್ಲೆಯ ನಾಗಮಂಗಲ ಪಟ್ಟಣ ಹತ್ತಿ ಉರಿಯಿತು. ಗಣೇಶ ವಿಸರ್ಜನೆಯ ಮೆರವಣಿಗೆಯನ್ನು ಗಲಭೆಯಾಗಿ ಪರಿವರ್ತಿಸುವ ಮತ್ತು ಆ ಮೂಲಕ ಮಂಡ್ಯ ಜಿಲ್ಲೆಯಲ್ಲಿ ನೆಲೆ ಕಂಡುಕೊಳ್ಳುವ ಸಂಘಪರಿವಾರದ ಸಂಚಿಗೆ ನಾಗಮಂಗಲ ನಲುಗಿಹೋಯಿತು. ಗಲಭೆ ನಡೆದದ್ದು ಕೇವಲ ಒಂದೇ ದಿನ, ಅದರಲ್ಲೂ ಕೆಲವೇ ಗಂಟೆಗಳೇ ಆದರೂ ಕಂದಾಯ ಇಲಾಖೆಯ ಅಂದಾಜಿನ ಪ್ರಕಾರ ಆದ ನಷ್ಟ ಸುಮಾರು 25 ಕೋಟಿ ರೂಪಾಯಿ ಬೆಲೆಬಾಳುವ ಆಸ್ತಿ ಪಾಸ್ತಿ. ಸಣ್ಣ ಪುಟ್ಟ ಅಂಗಡಿ, ಮೆಕ್ಯಾನಿಕ್ ಶಾಪ್, ಟೈಲರಿಂಗ್ ಅಂಗಡಿ ಇಟ್ಟುಕೊಂಡು ಹೊಟ್ಟೆ ಹೊರೆಯುತ್ತಿದ್ದ ಜನ ಅಕ್ಷರಶಃ ಬೀದಿಗೆ ಬಿದ್ದರು. ಇದೆಲ್ಲದರ ನಡುವೆ ಯಾವುದೇ ಜೀವ ಹಾನಿ ಸಂಭವಿಸಲಿಲ್ಲ ಎಂಬುದು ಸಮಾಧಾನದ ವಿಚಾರ.

ಟಿ.ಎಲ್. ಕೃಷ್ಣೇಗೌಡ

ನಾಗಮಂಗಲ ಪಟ್ಟಣದಿಂದ ಉತ್ತರಕ್ಕೆ ಅಂದರೆ, ಬೆಳ್ಳೂರು ಕಡೆಗೆ ಎರಡು ಕಿಲೋಮೀಟರ್ ದೂರದಲ್ಲಿರುವ ಬದರಿಕೊಪ್ಪಲು ಗ್ರಾಮದ ಯುವಕರು ಎಂದಿನಂತೆ ಈ ವರ್ಷವೂ ಗಣೇಶನನ್ನು ಕೂರಿಸಿದ್ದಾರೆ. ಸೆಪ್ಟೆಂಬರ್ ಹನ್ನೊಂದರಂದು ಗಣೇಶ ಮೂರ್ತಿಯನ್ನು ನಾಗಮಂಗಲ ಪಟ್ಟಣದ ಮಧ್ಯದಲ್ಲಿರುವ ಹಂಪಯ್ಯನ ಕೊಳದಲ್ಲಿ ವಿಸರ್ಜಿಸಲು ಸಂಜೆ ನಾಲ್ಕೈದು ಗಂಟೆಗೆ ಊರಿನಿಂದ ಮೆರವಣಿಗೆ ಹೊರಟು, ನಾಗಮಂಗಲ ಪಟ್ಟಣ ತಲುಪುವಲ್ಲಿ ಸಂಜೆ ಆರೂವರೆ ಏಳು ಗಂಟೆಯಾಗಿದೆ. ಮೆರವಣಿಗೆ ನಡೆಸಲು ಯಾವುದೇ ಪರವಾನಗಿಯನ್ನು ಪಡೆಯದ ಗಣೇಶನ ಭಕ್ತರು ಮೆರವಣಿಗೆಯನ್ನು ಸಾಮಾನ್ಯವಾಗಿ ಹೋಗುವ ದಾರಿಯ ಕಡೆ ತಿರುಗಿಸದೆ, ಮೈಸೂರು ರಸ್ತೆಯಲ್ಲಿ ತೆಗೆದುಕೊಂಡು ಹೋಗಿ ಸುತ್ತು ಹೊಡೆದುಕೊಂಡು ತಿರುಗಿ ಬರಲು ಪ್ರಯತ್ನಿಸಿದ್ದಾರೆ. ಆಗ ಮಧ್ಯಪ್ರವೇಶಿಸಿದ ಪೊಲೀಸರು ಮಂಡ್ಯ ವೃತ್ತದ ಬಳಿ ಮೆರವಣಿಗೆಯನ್ನು ತಡೆದಿದ್ದಾರೆ. ಪೊಲೀಸರೊಂದಿಗೆ ವಾಗ್ವಾದ ನಡೆಸಿ ಮೆರವಣಿಗೆಯನ್ನು ಮೈಸೂರು ರಸ್ತೆಗೆ ಕೊಂಡೊಯ್ಯುವಲ್ಲಿ ಯಶಸ್ವಿಯಾಗಿದ್ದಾರೆ.

ಪಟ್ಟಣದ ಮಂಡ್ಯ ವೃತ್ತದಿಂದ ಮೈಸೂರು ರಸ್ತೆಯಲ್ಲಿ ಕೇವಲ ನೂರು ಮೀಟರ್ ಅಂತರದಲ್ಲಿ ಒಂದು ಮಸೀದಿ ಇದೆ. ಆ ಮಸೀದಿಯ ಮುಂದೆ ಮೆರವಣಿಗೆ ಹೋದ ತಕ್ಷಣವೇ ಅಪಾರ ಪ್ರಮಾಣದ ಪಟಾಕಿ ಸಿಡಿಸಿದ ಭಕ್ತರು 'ಜೈ ಶ್ರೀರಾಮ್' 'ಜೈ ಹನುಮಾನ್' ಘೋಷಣೆಗಳನ್ನು ಮೊಳಗಿಸಿ, ಮಸೀದಿ ಎದುರಿನ ಸ್ಥಳದಲ್ಲಿ ಹದಿನೈದು ಇಪ್ಪತ್ತು ನಿಮಿಷ ಮೆರವಣಿಗೆಯನ್ನು ನಿಲ್ಲಿಸಿದ್ದಾರೆ. ಮಸೀದಿಯಲ್ಲಿ ನಮಾಜು ಮಾಡುತ್ತಿದ್ದ ಕೆಲವರು ಹೊರಗಡೆ ಬಂದು ಗಲಾಟೆ ಮಾಡುವುದನ್ನು ಆಕ್ಷೇಪಿಸಿದಾಗ ಮಾತಿಗೆ ಮಾತು ಬೆಳೆದು ಕೈ ಕೈ ಮಿಲಾಯಿಸುವ ಹಂತಕ್ಕೆ ಹೋಗಿದೆ. ಆ ಸಂದರ್ಭದಲ್ಲೇ ಕಲ್ಲು ತೂರಾಟ ಆರಂಭವಾಗಿ ಪರಿಸ್ಥಿತಿ ನಿಯಂತ್ರಣ ಮೀರುವ ಹಂತಕ್ಕೆ ಹೋಗಿದೆ.

ಮೊದಲು ಯಾರು ಕಲ್ಲು ಬೀಸಾಡಿದರು ಎಂಬುದಕ್ಕೆ ನಿಖರವಾದ ಮಾಹಿತಿ ಇಲ್ಲವಾದರೂ ಎರಡೂ ಕಡೆಯಿಂದ ಕಲ್ಲಿನ ವಿನಿಮಯ ನಡೆದಿದೆ. ಬೆರಳೆಣಿಕೆಯಷ್ಟಿದ್ದ ಪೊಲೀಸರು ಪೆಟ್ಟು ತಿಂದು ಅಲ್ಲಿಂದ ಮೆರವಣಿಗೆಯನ್ನು ತೆರವುಗೊಳಿಸುವಲ್ಲಿ ಯಶಸ್ವಿಯಾಗಿದ್ದಾರೆ. ಆಗಲೂ ಗಣಪತಿ ಮೂರ್ತಿಯನ್ನು ವಿಸರ್ಜಿಸಿ ತೆರಳಿದ್ದರೆ ಒಂದು ಹಂತಕ್ಕೆ ಸಮಸ್ಯೆ ಮುಗಿದು ಹೋಗುತ್ತಿತ್ತು. ಆದರೆ ಗಣಪತಿ ಭಕ್ತರು ಗಣೇಶನ ಮೂರ್ತಿಯನ್ನು ಪೊಲೀಸ್ ಠಾಣೆಯ ಮುಂದೆ ತಂದು ನಿಲ್ಲಿಸಿ ಪೊಲೀಸರ ವಿರುದ್ಧ ಘೋಷಣೆ ಕೂಗುತ್ತಾ ಪ್ರತಿಭಟನೆ ಆರಂಭಿಸಿದ್ದಾರೆ. ಸುತ್ತಮುತ್ತಲಿನ ಹಳ್ಳಿಗಳಿಂದ ಜನರನ್ನು ಕರೆಸಿಕೊಂಡು ತಮ್ಮ ಬಲ ಹೆಚ್ಚಿಸಿಕೊಂಡಿದ್ದಾರೆ.

ಹೀಗೆ ಬಲ ಹೆಚ್ಚಾದ ಮೇಲೆ ಅಲ್ಪಸಂಖ್ಯಾತರ ವ್ಯಾಪಾರಿ ಸ್ಥಳಗಳ ಮೇಲೆ ದಾಳಿ ಆರಂಭಿಸಿದ್ದಾರೆ. ಪೊಲೀಸ್ ಠಾಣೆಯಿಂದ ಕೇವಲ ಇಪ್ಪತ್ತೈದು ಮೀಟರ್ ಅಂತರದಲ್ಲಿರುವ ಮುಸ್ಲಿಂ ಸಮುದಾಯದ ವ್ಯಕ್ತಿಗೆ ಸೇರಿದ ಸ್ಟೇಷನರಿ ಅಂಗಡಿಗೆ ಬೆಂಕಿ ಹಾಕಿದ್ದಾರೆ. ನಂತರ ಪೊಲೀಸ್ ಠಾಣೆಯ ಸುತ್ತಮುತ್ತಲಿನ ಬೀದಿಗಳಲ್ಲಿರುವ ಮುಸಲ್ಮಾನರ ಅಂಗಡಿಗಳನ್ನು ಗುರಿಯಾಗಿಸಿಕೊಂಡು ಬೆಂಕಿ ಹಚ್ಚಿದ್ದಾರೆ.

ಸಂಘ ಪರಿವಾರದ ಸಂಚು, ಪೊಲೀಸ್–ಗುಪ್ತಚರ ವೈಫಲ್ಯ, ಜೆಡಿಎಸ್ ಹೊಣೆಗೇಡಿತನ ನಾಗಮಂಗಲ ಗಲಭೆಯ ತ್ರಿವಳಿ ಕಾರಣಗಳು!

ಮುಸ್ಲಿಂ ಅಲ್ಪಸಂಖ್ಯಾತರ ಅಂಗಡಿಗಳೇ ಗುರಿ:

ಬೆಂಕಿ ಹಚ್ಚುವಾಗಲೂ ಬಹಳ ಯೋಜಿತವಾಗಿ ಅಲ್ಪಸಂಖ್ಯಾತರಿಗೆ ಸೇರಿದ ಅಂಗಡಿಗಳನ್ನೇ ಗುರುತಿಸಿ ಹಚ್ಚಿದ್ದಾರೆ. ಪೊಲೀಸ್ ಠಾಣೆಯ ಹಿಂದಿನ ರಸ್ತೆಯಲ್ಲಿ ಗಣೇಶ್ ಜ್ಯೂಯಲರಿ ಅಂಗಡಿಯ ಅಕ್ಕಪಕ್ಕದ ಎರಡೂ ಮುಸಲ್ಮಾನರ ಅಂಗಡಿಗಳು ಸುಟ್ಟು ಹೋಗಿವೆ. ಆದರೆ ಮಧ್ಯದಲ್ಲಿರುವ ಗಣೇಶ ಜ್ಯೂಯಲರಿಗೆ ಸಣ್ಣ ಹಾನಿಯೂ ಸಂಭವಿಸಲಿಲ್ಲ. ಅದೇ ರೀತಿ ಮೂರ್ನಾಲ್ಕು ಸುಟ್ಟು ಹೋಗಿರುವ ಅಂಗಡಿಗಳ ಪಕ್ಕದಲ್ಲಿರುವ ಹಿಂದೂ ಸಮೂದಾಯಕ್ಕೆ ಸೇರಿದ ಅಂಗಡಿಗಳಿಗೆ ಯಾವುದೇ ಹಾನಿಯಾಗಿಲ್ಲ.

ಆದರೆ ಮುಸಲ್ಮಾನರು ಹೆಚ್ಚಿರುವ ತಹಶಿಲ್ದಾರ್ ಕಛೇರಿ ಹಿಂದುಗಡೆ ಮತ್ತು ಅಕ್ಕಪಕ್ಕದಲ್ಲಿ ಹಿಂದೂಗಳಿಗೆ ಸೇರಿದ ಅಂಗಡಿಗಳಿಗೆ ಬೆಂಕಿ ಹಾಕಲಾಗಿದೆ. ಮುಸಲ್ಮಾನರ ಕಟ್ಟಡದಲ್ಲಿದ್ದ ಹಿಂದೂಗಳ ಬಟ್ಟೆ ಅಂಗಡಿಯೊಂದಕ್ಕೆ ಬೆಂಕಿ ಇಟ್ಟು ಸಂಪೂರ್ಣವಾಗಿ ಸುಟ್ಟು ಹಾಕಲಾಗಿದೆ. ಹೀಗೆ ಎರಡೂ ಕಡೆಯವರು ಅನ್ಯಧರ್ಮೀಯರನ್ನು ಗುರಿಯಾಗಿಸಿಕೊಂಡು ದಾಳಿ ಮಾಡಿದ್ದಾರೆ. ಮುಸಲ್ಮಾನರಿಗೆ ಸೇರಿದ ಆಸ್ತಿ ಪಾಸ್ತಿ ಹೆಚ್ಚಾಗಿ ನಾಶವಾಗಿದೆ.

ಸಂಘ ಪರಿವಾರದ ಸಂಚು:

ಮೆರವಣಿಗೆ, ಗಲಾಟೆ ನಂತರದಲ್ಲಿ ಬೆಂಕಿ ಹಚ್ಚಿರುವ ವಿಧಾನವನ್ನು ಗಮನಿಸಿದರೆ ಇದರಲ್ಲಿ ಸಂಘಪರಿವಾರದ ಸಂಚು ನಿಚ್ಚಳವಾಗಿದೆ. ಇದುವರೆಗೂ ಕೇವಲ ಗಣೇಶನಿಗೆ ಮಾತ್ರ ಸೀಮಿತವಾಗಿದ್ದ ಮೆರವಣಿಗೆಯ ಘೋಷಣೆಗಳಲ್ಲಿ ಈಗ ಜೈ ಶ್ರೀರಾಮ್ ಮತ್ತು ಜೈ ಹನುಮಾನ್ ಕಾಣಿಸಿಕೊಂಡಿವೆ. ಮೆರವಣಿಗೆಯಲ್ಲಿ ಭಾಗವಹಿಸಿದ್ದ ಎಲ್ಲರಿಗೂ ಕೇಸರಿ ಶಾಲು ಮತ್ತು ತಲೆಗೆ ಕೇಸರಿ ಪಟ್ಟಿ ಕಟ್ಟಲಾಗಿದೆ. ಅಲ್ಲೋ ಇಲ್ಲೋ ಒಂದೆರಡು ಕಾರ್ಯಕರ್ತರನ್ನು ಹೊಂದಿದ್ದ ಸಂಘಪರಿವಾರ ಗಣೇಶನ ಮೂರ್ತಿ ಸ್ಥಾಪನೆ, ಕಾರ್ಯಕ್ರಮ ಎಲ್ಲಕ್ಕೂ ಹಣಕಾಸು ಮತ್ತು ಯೋಜನೆಯನ್ನು ಒದಗಿಸಿ ಗಣೇಶನ ಭಕ್ತರನ್ನು ಸಂಘದ ಕಾರ್ಯಕರ್ತರನ್ನಾಗಿಸುವ ಯೋಜನೆಯನ್ನು ಯೋಜನಾಬದ್ಧವಾಗಿ ಜಾರಿ ಮಾಡುತ್ತಿದೆ.

ಗುಪ್ತಚರ ಮತ್ತು ಪೊಲೀಸ್ ಇಲಾಖೆಯ ವೈಫಲ್ಯ:

ನಾಗಮಂಗಲ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಣ್ಣ ಪ್ರಮಾಣದಲ್ಲಾದರೂ ಸಂಘಪರಿವಾರ ಕ್ರಿಯಾಶೀಲವಾಗಿದೆ. ಅವರು ಗಣೇಶನನ್ನೂ ಒಳಗೊಂಡಂತೆ ಎಲ್ಲಾ ಧಾರ್ಮಿಕ ಕಾರ್ಯಕ್ರಮಗಳನ್ನು ತಮ್ಮ ಯೋಜನೆ ಜಾರಿಗೊಳಿಸಲು ಬಳಸುತ್ತಾರೆ. ಈ ಹಿಂದೆಯೂ, ಕಳೆದ ವರ್ಷವೂ ಗಣೇಶನ ಮೆರವಣಿಗೆ ಸಂದರ್ಭದಲ್ಲಿ ಸಣ್ಣ ಪುಟ್ಟ ಗಲಾಟೆಗಳು ಆಗಿವೆ. ಹೀಗಿದ್ದಾಗ್ಯೂ ಮಾಹಿತಿ ಕಲೆ ಹಾಕುವಲ್ಲಿ ಮತ್ತು ಅಗತ್ಯ ಕ್ರಮ ಕೈಗೊಳ್ಳುವಲ್ಲಿ ಗುಪ್ತಚರ ಮತ್ತು ಪೊಲೀಸ್ ಇಲಾಖೆ ಸಂಪೂರ್ಣವಾಗಿ ವಿಫಲವಾಗಿವೆ. ಮೆರವಣಿಗೆಗೆ ಅನುಮತಿಯನ್ನೂ ಪಡೆಯದೆ ಕೇವಲ ನೂರೈವತ್ತರಷ್ಟಿದ್ದ ಮೆರವಣಿಗೆಕಾರರನ್ನು ಮೈಸೂರು ರಸ್ತೆಯ ಮಸೀದಿಯ ಮುಂದೆ ಹೋಗಲು ಬಿಟ್ಟಿದ್ದಾರೆ. ಮಾತ್ರವಲ್ಲ ಗಲಭೆ ಆರಂಭವಾಗಿ ಗಂಟೆಗಳೇ ಕಳೆದರೂ ಕೇವಲ ಹತ್ತನ್ನೆರಡು ಪೊಲೀಸರು ಮಾತ್ರವೇ ಸ್ಥಳದಲ್ಲಿ ಇದ್ದರು. ಅವರೂ ಮೂಕ ಪ್ರೇಕ್ಷಕರಾಗಿದ್ದರು. ಮಂಡ್ಯದಿಂದ ಪೊಲೀಸ್ ವರಿಷ್ಠಾಧಿಕಾರಿಗಳು ಸ್ಥಳಕ್ಕೆ ಬಂದ ಮೇಲಷ್ಟೇ ಒಂದಷ್ಟು ನಿಯಂತ್ರಣ ಸಾಧ್ಯವಾಗಿರುವುದು. ಪೊಲೀಸ್ ಇಲಾಖೆ ಸಾಕಷ್ಟು ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದ್ದರೆ ಈ ಘಟನೆಗಳನ್ನು ತಡೆಯುವುದು ಸಾಧ್ಯವಿತ್ತು ಎಂದು ಮೇಲ್ನೋಟಕ್ಕೆ ಕಾಣಿಸುತ್ತದೆ.

ಜೆಡಿಎಸ್ ಪಕ್ಷದ ಹೊಣೆಗೇಡಿತನ:

ಪೊಲೀಸರು ಮತ್ತು ಸಾರ್ವಜನಿಕರು ಹೇಳುವಂತೆ ಜೆಡಿಎಸ್ ಪಕ್ಷ ಬಿಜೆಪಿ ಜೊತೆ ಕೈಜೋಡಿಸುವ ಮುನ್ನ ಇಂತಹ ಗಲಭೆಯೊಂದನ್ನು ನಡೆಸುವ ಶಕ್ತಿ ಸಂಘಪರಿವಾರಕ್ಕೆ ನಾಗಮಂಗಲದಲ್ಲಿ ಇರಲಿಲ್ಲ. ಸಿಪಿಐ(ಎಂ) ಪಕ್ಷ ಈಗಾಗಲೇ ಹೇಳಿರುವಂತೆ ಸಂಘಪರಿವಾರದ ಮೆದುಳು ಮತ್ತು ಜೆಡಿಎಸ್ ಪಕ್ಷದ ಕೈಕಾಲುಗಳು ಸೇರಿಕೊಂಡು ಅವರಿಗೆ ಆನೆ ಬಲ ಬಂದಿದೆ. ಮೊನ್ನೆಯ ಗಲಾಟೆಯ ಸಂದರ್ಭದಲ್ಲಿ ಕೂಡಾ ಸ್ವಲ್ಪವೇ ಸಮಯದಲ್ಲಿ ಒಂದು ಸಾವಿರದಷ್ಟು ಜನರನ್ನು ಕಲೆ ಹಾಕುವ ಶಕ್ತಿ ಸಂಘಪರಿವಾರಕ್ಕೆ ಬಂದಿರುವುದೇ ಜೆಡಿಎಸ್ ಪಕ್ಷದ ಕಾರಣಕ್ಕೆ. ಸಂಘಪರಿವಾರ ನಿಧಾನವಾಗಿ ಜೆಡಿಎಸ್ ಪಕ್ಷದ ಯುವ ಕಾರ್ಯಕರ್ತರ ತಲೆಗಳಿಗೆ ತನ್ನ ಕೋಮುವಾದಿ ವಿಚಾರಗಳನ್ನು ತುರುಕುವಲ್ಲಿ ಯಶಸ್ವಿಯಾಗುತ್ತಿದೆ. ಜೆಡಿಎಸ್ ಬಿಜೆಪಿ ಸಹವಾಸ ಬಿಟ್ಟರೂ ಕಾರ್ಯಕರ್ತರು ಸಂಘದ ಕಾಲಾಳುಗಳಾಗಿ ಬಿಜೆಪಿ ಜೊತೆಯಲ್ಲೇ ಉಳಿದುಬಿಡುವ ಅಪಾಯವಿದೆ.

ಗಲಭೆಯ ನಂತರ ನಾಗಮಂಗಲಕ್ಕೆ ಬೇಟಿ ನೀಡಿದ ಕುಮಾರಸ್ವಾಮಿ ಸಂಘಪರಿವಾರದ ಭಾಷೆಯಲ್ಲೇ ಮಾತನಾಡಿದ್ದಾರೆ. ಚನ್ನಪಟ್ಟಣ ಚುನಾವಣೆಯಲ್ಲಿ ಲಾಭ ಮಾಡಿಕೊಳ್ಳಲು ಕಾಂಗ್ರೆಸ್ ಗಲಭೆ ಮಾಡಿಸಿದೆ ಎಂಬಂತಹ ಹೇಳಿಯನ್ನು ಕುಮಾರಸ್ವಾಮಿ ನೀಡಿದ್ದಾರೆ. ಇಂತಹ ಹೊಣೆಗೇಡಿ ಹೇಳಿಕೆ ಮತ್ತು ಅವಕಾಶವಾದಿ ರಾಜಕೀಯ ನಿಲುವುಗಳಿಂದಾಗಿ ಮಂಡ್ಯ ಜಿಲ್ಲೆಯ ಒಕ್ಕಲಿಗರ ನಡುವೆ ಸಂಘಪರಿವಾರ ಬೇರುಬಿಡಲು ಜೆಡಿಎಸ್ ಕಾರಣವಾಗುತ್ತಿದೆ. ಕುಮಾರಸ್ವಾಮಿ ಮತ್ತು ಜೆಡಿಎಸ್ ಪಕ್ಷ ಇದನ್ನು ಆದಷ್ಟು ಬೇಗ ಅರಿತು ಕೋಮುವಾದಿ ಶಕ್ತಿಗಳ ಜೊತೆಗಿನ ತನ್ನ ವ್ಯವಹಾರ ಕಳಚಿಕೊಳ್ಳದಿದ್ದರೆ ಮುಂದಿನ ಎಲ್ಲಾ ಅನಾಹುತಗಳಿಗೆ ಹೊಣೆಯಾಗಬೇಕಾಗುತ್ತದೆ.

ಮೌನಕ್ಕೆ ಜಾರಿದ ಮಠ;
ಕೋಮುವಾದಿಗಳಿಗೆ ಪರೋಕ್ಷ ಬೆಂಬಲವೆ?

ಒಕ್ಕಲಿಗರ ಮಹಾಸಂಸ್ಥಾನ ಮಠ ಆದಿ

ಪುಟ 10 ಕ್ಕೆ





ಸಿಪಿಐ(ಎಂ) ಮಂಡ್ಯ ಜಿಲ್ಲಾ ನಿಯೋಗದ ಭೇಟಿ

ಪ್ರಚೋದನಾಕಾರಿ ವರ್ತನೆ, ಆಡಳಿತದ ವೈಫಲ್ಯ ಗಲಭೆಗೆ ಕಾರಣ

ನಾಗಮಂಗಲಕ್ಕೆ ಸಿಪಿಐ(ಎಂ) ಮಂಡ್ಯ ಜಿಲ್ಲಾ ನಿಯೋಗದ ಭೇಟಿ, ಅಭಿಪ್ರಾಯ

ವರದಿ: ಸಿ.ಕುಮಾರಿ

ಯುವಜನರ ಮೆದುಳಿಗೆ ವಿಷ ಮೆತ್ತುವ ಕೋಮು ವಿಷಜಂತುಗಳು ಜನರ ನಡುವೆ ಸೌಹಾರ್ದತೆಯನ್ನು ಕದಡಲು ಸದಾ ಪ್ರಯತ್ನಿಸುತ್ತಿವೆ. ಅದರ ಭಾಗವಾಗಿಯೇ ಈಚೆಗೆ ನಾಗಮಂಗಲದಲ್ಲಿ ಗಣಪತಿಯ ನೆಪದಲ್ಲಿ ತಮ್ಮ ಹಳೇ ಚಾಳಿಯನ್ನು ಶುರುಮಾಡಿವೆ.

ಗಲಭೆ ಪೀಡಿತ ನಾಗಮಂಗಲಕ್ಕೆ ಸೆಪ್ಟೆಂಬರ್ 17, 2024 ರಂದು ಸಿಪಿಐ(ಎಂ) ನಿಯೋಗ ಭೇಟಿನೀಡಿತು. ಜಿಲ್ಲಾ ಕಾರ್ಯದರ್ಶಿ ಟಿ.ಎಲ್. ಕೃಷ್ಣೇಗೌಡ, ರಾಜ್ಯ ಸಮಿತಿ ಸದಸ್ಯರಾದ ಎಂ.ಪುಟ್ಟಮಾದು, ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಸಿ.ಕುಮಾರಿ, ಜಿಲ್ಲಾ ಸಮಿತಿ ಸದಸ್ಯರಾದ ಬಿ.ಹನುಮೇಶ್ ಮತ್ತು ಎನ್.ಸುರೇಂದ್ರ ರವರು ಅಲ್ಲಿಗೆ ತೆರಳಿದಾಗ ನಮ್ಮೊಟ್ಟಿಗೆ ಜೊತೆಯಾದವರು ನಾಗಮಂಗಲದ ಬೀಡಿ ಕಾರ್ಮಿಕ ಸಂಘದ ನಫೀಸಾ ಫಿರೋಜ್ ದಂಪತಿಗಳು ಹಾಗೂ ಗ್ರಾಮ ಪಂಚಾಯತ್ ನೌಕರರ ಸಂಘದ ಮುಖಂಡರಾದ ರಮೇಶರವರು. ಬದರಿಕೊಪ್ಪಲು ಗ್ರಾಮದ ಯುವಜನರಿಗೆ ಕೇಸರಿ ಅಮಲು ಏರಿಸಿದ್ದು ಆರ್.ಎಸ್.ಎಸ್, ಶ್ರೀರಾಮಸೇನೆಯ ಕೇಸರಿ ಪಡೆ. ಯಾವತ್ತು ಮಸೀದಿ ರಸ್ತೆಗೆ ಬರದ ಯುವಕರನ್ನು ಪೊಲೀಸ್ ಪರ್ಮಿಷನ್ ಇಲ್ಲದಿದ್ದರೂ ಮಸೀದಿ ಮುಂದೆ ಹೋಗಿ ಜೈಶ್ರೀರಾಮ್ ಘೋಷಣೆ ಮೊಳಗಿಸಿ, ಕುಣಿದು ಕುಪ್ಪಳಿಸುವಂತೆ ಪ್ರಚೋದಿಸಿ, ಅವರ ಹೆಗಲಿಗೆ ಕೇಸರಿ ಟವಲ್ ಹಾಕಿಸಿದವರು ಎಲ್ಲಿ ಅವಿತಿರುವರೊ ಗೊತ್ತಿಲ್ಲ. ಆದರೆ ಭಾರಿ ಅನಾಹುತಕ್ಕೆ ಕಾರಣವಾಗುತ್ತೇವೆಂಬ ಪರಿವೆ ಮರೆತದ್ದು ನಿಜಕ್ಕೂ ದುರಂತವೇ ಸರಿ.

ನಮ್ಮ ನಿಯೋಗ ನಾಗಮಂಗಲ ತಲುಪುತಿದ್ದಂತೆ ಸದಾ ಗಿಜುಗುಡುತ್ತಿದ್ದ ಮಂಡ್ಯ ಸರ್ಕಲ್ ತುಂಬಾ ಸೈಲೆಂಟ್ ಆಗಿತ್ತು. ಮೈಸೂರು ರಸ್ತೆಯಲ್ಲಿರುವ ಯಾ ಅಲ್ಲ ಮಸೀದಿಯ ಮುಂದೆ ಚಲಿಸಿ, ನಂತರ ಪಕ್ಕದ ರಸ್ತೆಗೆ ತಿರುಗಿದಾಗ ಅಲ್ಲಿ ಒಂದು ಅಂಗಡಿ ಸುಟ್ಟು ಕರಕಲಾಗಿತ್ತು. ಆದರೆ, ಪಕ್ಕದ ಅಂಗಡಿಗೆ ಒಂಚೂರೂ ತೊಂದರೆ ಆಗಿರಲ್ಲಿಲ್ಲ. ನಾವು ಅಲ್ಲಿಂದ ಮುಂದೆ ಹೋದೆವು. ನಮಗೆ ನಿಜಕ್ಕೂ ಆತಂಕ ಅಗಿದ್ದು ಪೊಲೀಸ್ ಠಾಣೆ ಎದರೇ ದೊಡ್ಡ ಪಾತ್ರೆ ಅಂಗಡಿ ಸುಟ್ಟು ಕರಕಲು ಮಾಡಿರುವುದು. ಇದಂತೂ ಕಾನೂನು ಸುವ್ಯವಸ್ಥೆಯನ್ನೇ ಅಣಿಕಿಸುತ್ತಿತ್ತು. ಅದನ್ನು ಕಂಡಾಗ ಸರಕಾರದ ಆಡಳಿತ ಇಷ್ಟೊಂದು ಅಸಹಾಯಕ ಸ್ಥಿತಿ ತಲುಪಿತಾ ಎಂದೆನಿಸದೆ ಇರದು. ಇಡೀ ಪ್ರಕರಣದಲ್ಲಿ ಪೊಲೀಸ್ ಇಲಾಖೆಯ ವೈಫಲ್ಯವು ದುತ್ತೆಂದು ತೋರುತ್ತಿತ್ತು.

ಅಲ್ಲಿಂದ ಮುಂದೆ ಪುರಾತನವಾದ ಲಕ್ಷ್ಮಿನರಸಿಂಹಸ್ವಾಮಿ ದೇವಸ್ಥಾನ ಬೀದಿಗೆ ತೆರಳಿದೆವು. ಅಲ್ಲಿಂದ ಕಲ್ಯಾಣಿ ರಸ್ತೆಯಲ್ಲಿ ಬಹಳ ವ್ಯವಸ್ಥಿತವಾಗಿ ಗುರುತು ಮಾಡಿ ಅಗಂಡಿಗಳಿಗೆ ಬೆಂಕಿ ಹಚ್ಚಿರುವುದು ಕಣ್ಣಿಗೆ ರಾಚುತ್ತಿತ್ತು. ಮುಸ್ಲಿಂ ಟೈಲರ್ ಅಂಗಡಿಗೆ ಬೆಂಕಿ ಹಚ್ಚಲಾಗಿತ್ತು, ಅದರ ಪಕ್ಕದಲ್ಲೇ ಗಣೇಶ ಜ್ಯೂಯಲರಿಗೆ ಯಾವ ತೊಂದರೆಯೂ ಆಗಿಲ್ಲ! ಆದರೆ ಅದರ ಪಕ್ಕದ ಇನ್ನೆರಡು ಮುಸ್ಲಿಂ ಅಂಗಡಿಗೆ ಬೆಂಕಿ ಹಾಕಲಾಗಿತ್ತು. ಅಲ್ಲಿಂದ ಮುಂದೆ ಹೊರಟಾಗ ಚಪ್ಪಲಿ ಅಂಗಡಿ ಕರಕಲು. ಪಕ್ಕದಲ್ಲೆ ಫ್ಯಾನ್ಸಿ ಸ್ಟೋರ್ ಗೆ ಯಾವುದೇ ಹಾನಿ ಇಲ್ಲ.

ಹೀಗೆ ಮುಂದೆ ಸಾಗಿ ಮುಖ್ಯ ರಸ್ತೆಗೆ ಬಂದು ಎಡಗಡೆ ತಿರುಗಿದರೆ ಬಹು ದೊಡ್ಡದಾದ ಬಟ್ಟೆ ಅಂಗಡಿ ಸುಟ್ಟು ಕರಕಲಾಗಿತ್ತು. ಇದು ಸೇರು



ಅಂಗಡಿ. ಆದರೆ ಬಿಲ್ಡಿಂಗ್ ಮಾಲೀಕ ಮುಸ್ಲಿಂ. ಸೇಡಿಗೆ, ಪ್ರತಿಸೇಡು ಅನ್ನುವಂತಿದೆ ಈ ಕೃತ್ಯ.

ನಫೀಸಾರವರ ಮನೆಯ ಬೀದಿಯಿಂದ ಹೊರಟಾಗ, ಆ ಬೀದಿ ಉದ್ದಕ್ಕೂ 130 ವರ್ಷದ ಹಳೆಯದಾದ ದೊಡ್ಡ ಜಾಮೀಯಾ ಮಸೀದಿ ಇದೆ. ಅದರ ಪಕ್ಕದಲ್ಲೆ ಆಂಜನೆಯ ದೇವಸ್ಥಾನ, ಅದರ ಎದುರಿಗೆ ಕನ್ನಿಕಾ ಪರಮೇಶ್ವರಿ ದೇವಸ್ಥಾನ, ನಫೀಸಾ ಫಿರೋಜ್ ಮನೆ ಮುಂದೆಯೇ ಬಸವೇಶ್ವರ ದೇವಸ್ಥಾನ. ಹೀಗೆ ಆ ಬೀದಿಯಲ್ಲಿ ಸೌಹಾರ್ದತೆ ಎದ್ದು ಕಾಣುತ್ತಿತ್ತು, ವಿಶೇಷ ಅಂದ್ರೆ ಬಸವೇಶ್ವರ ದೇವಸ್ಥಾನಕ್ಕೆ ತುಂಬಾ ಕಿರಿದಾದ ಜಾಗ ಇದ್ದುದ್ದರಿಂದ ಮುಸ್ಲಿಂರಿಗೆ ಸೇರಿದ 4 ಅಡಿ ಜಾಗವನ್ನೇ ಬಿಟ್ಟುಕೊಟ್ಟು ದೇವಸ್ಥಾನ ನಿರ್ಮಾಣವಾಗಿದೆ. 'ಆ ದೇವಸ್ಥಾನಗಳಲ್ಲಿ, ಪೂಜೆಯಾದರೆ ನಮಗೆ ಪ್ರಸಾದ ನೀಡುತ್ತಾರೆ. ನಾವು ನಮ್ಮ ಹಬ್ಬದ ತಿಂಡಿ ಅವರಿಗೆ ನೀಡುತ್ತೇವೆ. ನಮ್ಮಲ್ಲಿಲ್ಲ ಹಿಂದೂ ಮುಸ್ಲಿಂ ಎಂಬ ಭೇಧಭಾವ, ನಾವೆಲ್ಲರೂ ಒಂದೆ ಎಂಬ ಭಾವದಲ್ಲಿ ಒಗ್ಗಟ್ಟಾಗಿ ಜೀವಿಸುತ್ತಿದ್ದೇವೆ. ಈ ಮೊದಲು ದೊಡ್ಡ ಗಣಪ ದೇವಸ್ಥಾನದಲ್ಲಿ ಎಲ್ಲರೂ ಸೇರಿ ಆಚರಿಸುತ್ತಿದ್ದೆವು, ಮೊನ್ನೆ ನಡೆದ ಘಟನೆಯ ಸಂದರ್ಭದಲ್ಲಿ ಜೋರು ಶಬ್ಧ ಕೇಳಿಬಂತು. ನಾವೆಲ್ಲರೂ ಇಲ್ಲೆ ಒಟ್ಟಿಗೆ ನಿಂತು ನೋಡುತ್ತಿದ್ದೆವು. ಹೀಗಿರುವಾಗ ಕಿಡಿಗೇಡಿಗಳು ಸಾಮರಸ್ಯದ ಜನರ ಬದುಕಿಗೆ ಕೊಳ್ಳಿ ಇಡಲು ಹೊರಟಿದ್ದಾರೆ. ದಿನ ಬೆಳಗಾದರೆ ಹಳ್ಳಿಯ ಜನರೊಟ್ಟಿಗೆ ನಮ್ಮ ವ್ಯಾಪಾರ ವ್ಯವಹಾರ. ಜೆಡಿಎಸ್ ಪಕ್ಷವು ಬಿಜೆಪಿ ಜೊತೆ ಕೈಜೋಡಿಸಿದ ಮೇಲೆ ನಾಗಮಂಗಲಕ್ಕೆ ಈ ದುರ್ಗತಿ ಬಂದಿದೆ. ನಿರುದ್ಯೋಗ ಸಮಸ್ಯೆ ಗಗನ ಮುಟ್ಟಿದೆ, ದುಡಿಮೆಗಾಗಿ ಇಲ್ಲಿಂದ ವಲಸೆ ಹೋಗುವುದು ವಿಪರೀತವಾಗಿದೆ. ಜನರ ಜೀವನ ಮಟ್ಟ ಕುಸಿದಿದೆ. ಅನಾರೋಗ್ಯ ಹೆಚ್ಚುತ್ತಿದೆ. ಬದುಕು ಇಷ್ಟು ದುಬಾರಿ ಆಗಿರುವ ಈ ಕಾಲಘಟ್ಟದಲ್ಲಿ ಜನರ ತಲಾದಾಯ ಹೆಚ್ಚಾಗುವ ನಿಟ್ಟಿನಲ್ಲಿ, ಜನರಿಗೆ ನೆಮ್ಮದಿ ಬದುಕು ನೀಡುವ ಬದಲು, ಜನರ ಐಕ್ಯತೆಯನ್ನು ಛಿದ್ರ ಮಾಡುತ್ತಿರುವ ಕೋಮು ರಾಜಕಾರಣವನ್ನು ಜಿಲ್ಲೆಯ ಪ್ರಜ್ಞಾವಂತ ನಾಗರೀಕರು ಹಿಮ್ಮೆಟ್ಟಿಸಬೇಕಿದೆ' ಎಂಬ ಅಭಿಪ್ರಾಯ ವ್ಯಕ್ತವಾಯಿತು.

ಒಟ್ಟಾರೆ ಈ ಘಟನೆಯನ್ನು ಗಮನಿಸಿದಾಗ ಗೊತ್ತಾಗಿದ್ದು ಹಿಂದೂಗಳು ಹೆಚ್ಚು ವಾಸ ಮಾಡುವ ಕಡೆ ಮುಸ್ಲಿಂ ಅಂಗಡಿಗಳನ್ನು, ಮುಸ್ಲಿಂ ವಾಸವಿರುವ ಕಡೆ ಹಿಂದೂಗಳ ಅಂಗಡಿಯನ್ನು ಹಾಗೂ ಇಬ್ಬರು ಸಮವಾಗಿ ವಾಸಮಾಡುವ ಕಡೆ ಸೌಹಾರ್ದತೆ ನೆಲೆಸಿರುವುದನ್ನು ಕಾಣಬಹುದು. ಅಂತಿಮವಾಗಿ, ಸೌಹಾರ್ದವಾಗಿ ಬದುಕುವುದೊಂದೇ ಪರಿಹಾರ ಎನ್ನುವುದು ಸ್ಪಷ್ಟವಾಗಿದೆ.

ಬಹುಮುಖ್ಯ ಕಾರಣ, ನಾಗಮಂಗಲ ಘಟನೆಗೆ ಪೊಲೀಸ್ ಗುಪ್ತಚರದ ವೈಫಲ್ಯ, ಮುನ್ನೆಚ್ಚರಿಕೆ ವಹಿಸದೆ ಇರುವುದು, ಪೊಲೀಸ್ ಭದ್ರತೆ ಅಷ್ಟಾಗಿ ಇಲ್ಲದೆ ಇದ್ದುದ್ದು ಇಷ್ಟು ದೊಡ್ಡ ಅನಾಹುತಕ್ಕೆ ಕಾರಣವಾಗಿದೆ. ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳು ಇದರ ಹೊಣೆಗಾರಿಕೆ ಹೊರಬೇಕಿದೆ.

ಜಿಲ್ಲೆಯ ಸಂಸದರಾದ ಸಚಿವ ಹೆಚ್.ಡಿ. ಕುಮಾರಸ್ವಾಮಿಯವರು ಎರಡು ಕಡೆಯವರಿಗೆ ಸಣ್ಣ ಪ್ರಮಾಣದ ಪರಿಹಾರ ನೀಡಿದ್ದಾರೆ. ಸಚಿವರು ಮುಖ್ಯಮಂತ್ರಿಗಳ ಜೊತೆ ಮಾತನಾಡಿ ಪರಿಹಾರ ನೀಡುತ್ತೇವೆಂದು ಜನರಿಗೆ ತಿಳಿಸಿದ್ದಾರೆ.

ಪೊಲೀಸ್ ಠಾಣೆಗೆ ನಾವು ಭೇಟಿ ನೀಡಿದಾಗ ಠಾಣೆಯಲ್ಲಿ ಎ.ಎಸ್.ಪಿ.ಯವರಾದ ತಿಮ್ಮಯ್ಯರವರು ಹಾಗೂ ಗಂಗಾಧರ ಸ್ವಾಮಿ ಇಬ್ಬರೂ ಇದ್ದರು. ಇದೂವರೆಗೆ 24 ಎಫ್.ಐ.ಆರ್. ದಾಖಲಾಗಿವೆ, ಎರಡು ಗುಂಪಿನ 50 ಜನರನ್ನು ಬಂಧಿಸಲಾಗಿದೆ ಎಂದು ಅವರು ತಿಳಿಸಿದರು. ಜಿಲ್ಲಾ ಉಸ್ತುವಾರಿ ಸಚಿವರಾದ ಎನ್.ಚಲುವರಾಯಸ್ವಾಮಿ ಹಾಗೂ ಜಿಲ್ಲಾಧಿಕಾರಿ ಡಾ.ಕುಮಾರ್ ಮತ್ತು ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಯವರ ನೇತೃತ್ವದಲ್ಲಿ ಶಾಂತಿಸಭೆ ನಡೆದಿದೆ. ಸದ್ಯ ವಾತಾವರಣ ತಿಳಿಯಾಗಿದೆ ಎಂದು ಅವರು ತಿಳಿಸಿದರು. ಕೆಲವರು ಪ್ರಚೋದನಾಕಾರಿಯಾಗಿ ನಡೆದುಕೊಂಡಿದ್ದರ ಪರಿಣಾಮ ಇಷ್ಟೆಲ್ಲಾ ಅನಾಹುತಕ್ಕೆ ಕಾರಣ ಎನ್ನುವುದು ಸ್ಪಷ್ಟವಾಗಿದೆ. ನಂತರದಲ್ಲಿ ಮಂಡ್ಯ ಸರ್ಕಲ್ ನ ಆಚೆ ಒಂದು ಗುಂಪು, ಈಚೆ ಒಂದು ಗುಂಪು ಹೀಗೆ ಎರಡು ಗುಂಪುಗಳಿಂದಲೂ ತಪ್ಪು ನಡೆದು ಹೋಗಿದೆ. ಸೌಹಾರ್ದತೆಯೆ ಉಸಿರು, ಜನರ ಜೀವಾಳವೇ ಐಕ್ಯತೆ, ಸುಲಭಕ್ಕೆ ಬಿಡೆವು, ಸೌಹಾರ್ದತೆಯಿಂದ ಇರುವ ಜನರ ಬಾಳನ್ನು ಹಾಳು ಮಾಡಲು ಬಿಡೆವು ಎನ್ನುವ ಅಭಿಪ್ರಾಯ ನೀಡಿದರು ಅನೇಕರು. ಈ ಹಿಂದೆ 1982 ಮತ್ತು 1992, 2005 ರಲ್ಲಿ ಗಲಾಟೆ ನಡೆದಿತ್ತು. ಅದಾದ ಬಳಿಕ ನಾವು ಅಣ್ಣ ತಮ್ಮಂದಿರ ಹಾಗೆ ಸೌಹಾರ್ದವಾಗಿದ್ದೇವೆ ಎಂದು ತಿಳಿಸಿದರು.

–ಸಿಪಿಐ(ಎಂ) ನಿಯೋಗ ಭೇಟಿಯಾದಾಗ, ನಾಗಮಂಗಲದಲ್ಲಿ ಸಿಕ್ಕ ಜನರ ಅಭಿಪ್ರಾಯ.

ಸಂಘಪರಿವಾರದ ರಾಜಕೀಯ ದಾಳ, ಕಾಂಗ್ರೆಸ್ ಪಕ್ಷದ ಮುಂದಾಳುಗಳು ಮೌನ.... ಪುಟ 5 ರಿಂದ

ಮತೀಯ ಗೂಂಡಾಗಳು, ಧರ್ಮ ದ್ವೇಷದ ಕೊಲೆ, ಸುಲಿಗೆ, ದೊಂಬಿ ಪ್ರಕರಣದ ಅಪಾಯಕಾರಿ ಆರೋಪಿಗಳು ಈದ್ ಮಿಲಾದ್ ಮೆರವಣಿಗೆ ತಡೆಯಲು ಅನುಮತಿ ಇಲ್ಲದೆ ಬಿ.ಸಿ. ರೋಡ್ ಜಂಕ್ಷನ್‌ನಲ್ಲಿ ಗುಂಪು ಸೇರಲು ಅವಕಾಶ ಒದಗಿಸಿದ್ದು ಹೇಗೆ? ಈ ಅಪಾಯಕಾರಿ ಗುಂಪು ಸೇರುವಿಕೆಯನ್ನು "ಪ್ರತಿಭಟನಾ ಸಭೆ" ಎಂದು ಮಾನ್ಯತೆ ನೀಡಿ ಗಂಟೆಗಳ ಕಾಲ ಹೆದ್ದಾರಿ ಬಂದ್ ಮಾಡಿ ಪ್ರತಿಭಟನೆ ನಡೆಸಲು ಅನುಮತಿ ನೀಡಿದ್ದು ಹೇಗೆ? ಶರಣ್ ಪಂಪ್ ವೆಲ್, ಪುನೀತ್ ಅತ್ತಾವರರನ್ನು ದಾಖಲಾದ ಪ್ರಕರಣ ಅಥವಾ ಮುಂಜಾಗರೂಕತೆಯ ಭಾಗವಾಗಿ ವಶಕ್ಕೆ ಪಡೆದು ಬಿ.ಸಿ. ರೋಡ್ ಪ್ರವೇಶಿಸದಂತೆ ನಿರ್ಬಂಧ ವಿಧಿಸಲು ಪೊಲೀಸ್ ಇಲಾಖೆಗೆ ಅಸಾಧ್ಯವಾಗಲು ಕಾರಣ ಏನು? ಹಸೈನಾರ್, ಶರೀಫ್‌ಗೆ ಒಂದು ನ್ಯಾಯ, ಶರಣ್ ಪಂಪ್ ವೆಲ್, ಪುನೀತ್ ಅತ್ತಾವರನಿಗೆ ಇನ್ನೊಂದು ನ್ಯಾಯ ಅಂತಾದದ್ದು ಯಾಕೆ? ಧರ್ಮಗಳ ಕಾರಣಕ್ಕೆ ತಾನೆ? ಇದೆಲ್ಲವೂ ಸ್ಥಳದಲ್ಲಿ ಮೊಕ್ಕಾಂ ಹೂಡಿದ್ದ ಪಶ್ಚಿಮ ವಲಯ ಐಜಿಪಿ ಅಮಿತ್ ಸಿಂಗ್ ಹಾಗೂ ಜಿಲ್ಲಾ ಎಸ್.ಪಿ ಅವರ ನಿರ್ಧಾರ ಆಗಿತ್ತೆ?

ಬಿ.ಸಿ. ರೋಡ್ ನಲ್ಲಿ ಅಕ್ರಮ ಕೂಟ ಸೇರಿಕೊಂಡು ಕೊಲೆ, ಕೊಲೆಯತ್ನ, ದೊಂಬಿ ಮುಂತಾದ ಗಂಭೀರ ಪ್ರಕರಣ ಆರೋಪಿಗಳು, ಪೊಲೀಸ್ ದಾಖಲೆಗಳ ಪ್ರಕಾರವೇ ಅಪಾಯಕಾರಿ ಕ್ರಿಮಿನಲ್ ಗಳು ಪ್ರತಿಭಟನೆ ಹೆಸರಿನಲ್ಲಿ ಮುಸ್ಲಿಂ ಸಮುದಾಯವನ್ನು ಹೀನಾಯವಾಗಿ ನಿಂದಿಸುತ್ತಿದ್ದರೂ ಪೊಲೀಸರು ಮಧ್ಯ ಪ್ರವೇಶಿಸದೆ ಮೌನ ಪ್ರೇಕ್ಷಕರಾದದ್ದು ಬಹು ದೊಡ್ಡ ಲೋಪ ಅಲ್ಲವೆ? ಈ ರೀತಿಯ ಮತೀಯ ದ್ವೇಷದ ಭಾಷಣ, ಹೇಳಿಕೆಗಳ ಮೇಲೆ ಪೊಲೀಸರು ಸುಮೊಟೊ ಮೊಕದ್ದಮೆ ದಾಖಲಿಸದೆ ಇರಲು, ಮೊಕದ್ದಮೆ ದಾಖಲಿಸಲು ಮುಸ್ಲಿಂ ಸಮುದಾಯದ ಪ್ರತಿನಿಧಿಗಳು ಠಾಣೆಗೆ ಬಂದು ದೂರು ನೀಡುವವರೆಗೆ ಕಾದದ್ದಕ್ಕೆ ಕಾರಣ ಏನು? ಮತೀಯ ಸಾಮರಸ್ಯಕ್ಕೆ ಧಕ್ಕೆ ತರುವ ಉದ್ದೇಶದಿಂದ ಅನುಮತಿ ಪಡೆಯದೆ ಅಕ್ರಮ ಕೂಟ ಸೇರಿದ ಬಜರಂಗ ದಳದ ಗುಂಪಿನ ಮೇಲೆ FIR ದಾಖಲು ಮಾಡದಿರುವುದು ಯಾಕೆ? ಪೊಲೀಸ್ ಇಲಾಖೆಯ ನಿರಾಸಕ್ತಿಯ ನಡುವೆಯೂ ಶರಣ್ ಪಂಪ್ ವೆಲ್ ಹಾಗೂ ಸಹಚರರ ಮೇಲೆ ಎರಡು ಎಫ್‌ಐಆರ್ ದಾಖಲಾಗಿವೆ. ಆದರೂ ಪೊಲೀಸ್ ಇಲಾಖೆ ಅವರ ಬಂಧನಕ್ಕೆ ಮುಂದಾಗುತ್ತಿಲ್ಲ. ಇದರ ಉದ್ದೇಶ ಏನು? ಈ ಹಿಂದಿನ ಪ್ರಕರಣಗಳಂತೆ ಉಚ್ಚ ನ್ಯಾಯಾಲಯಕ್ಕೆ ಹೋಗಿ ಪ್ರಕರಣಕ್ಕೆ ತಡೆ ತರಲು ಶರಣ್ ಪಂಪ್ ವೆಲ್ ಕೋಮುವಾದಿ ಕೂಟಕ್ಕೆ ಅನುಕೂಲ ಮಾಡಿಕೊಡುವ ಇರಾದೆ ಪೊಲೀಸ್ ಇಲಾಖೆ ಹೊಂದಿದೆಯೆ?

ಗಣೇಶೋತ್ಸವ, ಈದ್ ಮಿಲಾದ್ ಹಿನ್ನಲೆಯಲ್ಲಿ ಅನಾಹುತಕಾರಿ ವಿದ್ಯಾಮಾನಗಳು ಘಟಿಸುತ್ತಿದ್ದರೂ, ಸಂಘಪರಿವಾರ ರಾಜಕೀಯ ದಾಳಗಳನ್ನು ಉರುಳಿಸುತ್ತಿದ್ದರೂ, ಆಳುವ ಕಾಂಗ್ರೆಸ್ ಪಕ್ಷದ ಮುಂದಾಳುಗಳು ಮೌನಕ್ಕೆ ಶರಣಾಗಿದ್ದಾರೆ. ಇದು ಹಿಂದೂ, ಮುಸ್ಲಿಂ ಸಮುದಾಯಗಳಿಗಷ್ಟೆ ಸಂಬಂಧಿಸಿದ್ದು ಎಂಬಂತೆ ತೀರಾ ಸರಳವಾಗಿ ನೋಡುತ್ತಿದ್ದಾರೆ. ಬೋಳಂತೂರಿನಲ್ಲಿ "ಗಣೇಶೋತ್ಸವ ಮೆರವಣಿಗೆಗೆ ಮುಸ್ಲಿಮರು ಸಿಹಿ ತಿಂಡಿ ವಿತರಿಸಬಾರದು" ಎಂದು ಸಂಘಪರಿವಾರದ ಸೂಚನೆಯಂತೆ ಮಸೀದಿಗೆ ಪತ್ರ ರವಾನೆಯಾದಾಗಲೆ ಕಾಂಗ್ರೆಸ್ ಪಕ್ಷ ಎಚ್ಚೆತ್ತುಕೊಳ್ಳಬೇಕಿತ್ತು. ಸ್ಥಳೀಯವಾಗಿ ಪ್ರಭಾವಿಗಳಾಗಿರುವ ತನ್ನ "ಹಿಂದು" ಮುಖಂಡರಿಂದ ಈ ಪ್ರಕರಣಕ್ಕೆ ಬೇರೆಯೇ ತಿರುವು ಒದಗಿಸಬಹುದಿತ್ತು. ಆದರೆ, ಕಾಂಗ್ರೆಸ್ ಪಕ್ಷ ಮೌನ ವಹಿಸಿತು.

ಜಿಲ್ಲೆಯಲ್ಲಿ ಈದ್ ಮಿಲಾದ್ ಮೆರವಣಿಗೆಗೆ ತಡೆಯುವ ಬೆದರಿಕೆ ಬಜರಂಗ ದಳದಿಂದ ಹೊರಟಾಗಲು ಕಾಂಗ್ರೆಸ್ ನ ಬಹುಸಂಖ್ಯಾತ ನಾಯಕತ್ವ ಪ್ರತಿಕ್ರಿಯಿಸಲಿಲ್ಲ. ಇದರಿಂದಾಗಿ ಮುಸ್ಲಿಂ ಸಮುದಾಯದೊಳಗಡೆಯ ಅತಿರೇಕಿ ಶಕ್ತಿಗಳು, ಸಮಾಜದೊಳಗಡೆಯ ವಾಟ್ಸಪ್ ಗುಂಪುಗಳಲ್ಲಿ ಎಬ್ಬಿಸಿದ ಗದ್ದಲದಿಂದ ಒತ್ತಡಕ್ಕೊಳಗಾದ ಕಾಂಗ್ರೆಸ್ ಪಕ್ಷದ ಬಂಟ್ವಾಳ ಪುರಸಭೆಯ ಇಬ್ಬರು ಮುಸ್ಲಿಂ ಸಮುದಾಯದ ಸದಸ್ಯರು, ಪ್ರತಿ ಸವಾಲಿನ ಧಾಟಿಯಲ್ಲಿ ಪ್ರತಿಕ್ರಿಯಿಸುವಂತಾಯಿತು. ಈದ್ ಮಿಲಾದ್ ದಿನ ಸಂಘ ಪರಿವಾರ ಬಿ.ಸಿ. ರೋಡ್ ಜಂಕ್ಷನ್ ನಲ್ಲಿ ಮಿಲಾದ್ ರ್‍ಯಾಲಿ ತಡೆದೇ ತೀರುತ್ತೇವೆ ಎಂದು ಗುಂಪು ಸೇರಿದಾಗಲೂ ಕಾಂಗ್ರೆಸ್ ಪಕ್ಷದ ಬಹುಸಂಖ್ಯಾತ ಸಮುದಾಯದ ನಾಯಕರದ್ದು ದಿವ್ಯ ಮೌನ.

ಹತ್ತಿರದ ಹಲವು ಗ್ರಾಮಗಳಲ್ಲಿ ಸಾಮಾನ್ಯ ಹಿಂದೂ ಯುವಕರು ಈದ್ ಮಿಲಾದ್ ಮೆರವಣಿಗೆಗೆ ಸಿಹಿ ಹಂಚಿಕೆ ಮಾಡಿ ಮೌನ ಪ್ರತಿರೋಧ ಒಡ್ಡಿದಷ್ಟನ್ನೂ ಕಾಂಗ್ರೆಸ್ ಪಕ್ಷದ ಬಹುಸಂಖ್ಯಾತ ವಿಭಾಗದ ಮುಖಂಡರು ಬಿ.ಸಿ. ರೋಡ್ ನಲ್ಲಿ ಮಾಡಲಿಲ್ಲ. ಅಷ್ಟು ಮಾಡಿದ್ದರೂ ಹಿಂದೂ ವರ್ಸಸ್ ಮುಸ್ಲಿಂ ಎನ್ನುವ ಸಂಘದ ಅಜೆಂಡಾ ಯಶಸ್ವಿಯಾಗುವುದು ಅಂಶಿಕವಾಗಿಯಾದರೂ ವಿಫಲ ಆಗುತ್ತಿತ್ತು. ಇಷ್ಟನ್ನೂ ಮಾಡಲು ತಯ್ಯಾರಾಗದ, ಸಂಘಪರಿವಾರವನ್ನು ಮುಸ್ಲಿಮರಾಗಿಯೆ ಎದುರಿಸಲು ತನ್ನ ಮುಸ್ಲಿಂ ಕಾರ್ಯಕರ್ತರನ್ನು ಬಿಟ್ಟುಕೊಟ್ಟ ಆಡಳಿತ ಪಕ್ಷ ಕಾಂಗ್ರೆಸ್ ಹಾಗೂ ಅದರ ಬಹುಸಂಖ್ಯಾತ ನಾಯಕತ್ವ, ಇನ್ನು ಪೊಲೀಸರು ಮಾಡಿದ ತಾರತಮ್ಯ, ತಪ್ಪುಗಳನ್ನು ಪ್ರಶ್ನಿಸುವುದು, ಶರಣ್ ಪಂಪ್ ವೆಲ್ ಪರಿವಾರದ ವಿರುದ್ದ ಸರಿಯಾದ ಕಾನೂನು ಕ್ರಮ ಜರುಗುವಂತೆ ನೋಡಿಕೊಳ್ಳುವುದು ಕನಸಿನ ಮಾತಷ್ಟೆ.

ಕಾಮ್ರೇಡ್ ಸೀತಾರಾಮ್‌ಗೆ ನಮನ.... ಪುಟ 7 ರಿಂದ

ಶಕ್ತಿಗಳ ಸಂಬಂಧದಲ್ಲಿನ ಬದಲಾವಣೆ ಮೊದಲ ಬೆಳವಣಿಗೆಯಾಗಿತ್ತು. ನವ–ಉದಾರವಾದದ ಆರಂಭದೊಂದಿಗೆ ಭಾರತದಲ್ಲಿ ಬಂಡವಾಳಶಾಹಿ ಅಭಿವೃದ್ಧಿ ಪಥದಲ್ಲಿನ ಬದಲಾವಣೆ ಎರಡನೇ ಬೆಳವಣಿಗೆಯಾಗಿತ್ತು.

ಒಂದು ಕರಡು ಅಪ್ಡೇಟೆಡ್ ಕಾರ್ಯಕ್ರಮವನ್ನು ರೂಪಿಸುವುದಕ್ಕಾಗಿ ಪಕ್ಷ ಒಂದು ಕಾರ್ಯಕ್ರಮ ಆಯೋಗವನ್ನು ರಚಿಸಿತು. ಹರಿಕಿಷನ್ ಸಿಂಗ್ ಸುರ್ಜಿತ್ ಸಂಚಾಲಕರಾಗಿದ್ದ ಆಯೋಗದಲ್ಲಿ ಸೀತಾರಾಮ್ ಒಬ್ಬ ಸದಸ್ಯರಾಗಿದ್ದರು. ಅಂತಾರಾಷ್ಟ್ರೀಯ ಹಣಕಾಸು ಬಂಡವಾಳ ಮತ್ತು ನವ–ಉದಾರವಾದಿ ಬಂಡವಾಳಶಾಹಿಯ ಕಾರ್ಯವೈಖರಿಯ ಗ್ರಹಿಕೆಯಿದ್ದ ಸೀತಾರಾಮ್, ಅಭಿವೃದ್ಧಿಯ ಬಂಡವಾಳಶಾಹಿ ಪಥ ಕುರಿತ ವಿಭಾಗವನ್ನು ಅಪ್ಡೇಟ್ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಪಾಲಿಟ್ ಬ್ಯೂರೋ ಹಾಗೂ ನಂತರ ಕೇಂದ್ರ ಸಮಿತಿಯಲ್ಲಿ ನಡೆದ ಚರ್ಚೆಗಳು ಈ ಚರ್ಚೆಗಳಲ್ಲಿ ಸೀತಾರಾಮ್ ಸಕ್ರಿಯ ಪಾತ್ರ ವಹಿಸಿದ್ದನ್ನು ಕಂಡವು. ಒಂದು ಹಂತದಲ್ಲಿ, 1964ರ ಕಾರ್ಯಕ್ರಮದಲ್ಲಿದ್ದ ಭಾರತೀಯ ಪ್ರಭುತ್ವದ ಲಕ್ಷಣ ಕುರಿತ ಸೂತ್ರವನ್ನು ಅಪ್ಡೇಟೆಡ್ ಆವೃತ್ತಿಯಲ್ಲಿ ಉಳಿಸಿಕೊಳ್ಳಲು ಸೀತಾರಾಮ್ ಮತ್ತು ನಾನು ಕಠಿಣ ಪ್ರಯತ್ನ ನಡೆಸಬೇಕಾಯಿತು.

ಭಾರತೀಯ ರಾಜಕಾರಣದಲ್ಲಿ ಬಲಪಂಥೀಯಪರ ಸ್ಥಿತ್ಯಂತರ ಮತ್ತು ಗುಣಾತ್ಮಕ ಬದಲಾವಣೆಯು 2014ರ ಚುನಾವಣೆಯಲ್ಲಿ ಬಿಜೆಪಿ ಗೆಲುವು ಸಾಧಿಸಿ ಮೋದಿ ಸರಕಾರ ರಚನೆಯಾದಾಗ, ಹೊಸ ರಾಜಕೀಯ ಸವಾಲುಗಳು ಮತ್ತು ಭಾರತೀಯ ಸಂವಿಧಾನದ ಜಾತ್ಯತೀತ–ಪ್ರಜಾಸತ್ತಾತ್ಮಕ ತತ್ವಗಳಿಗೆ ಉಂಟಾದ ಗಂಭೀರ ಅಪಾಯವನ್ನು ಎದುರಿಸಲು ರಾಜಕೀಯ–ಕಾರ್ಯತಂತ್ರವನ್ನು ರೂಪಿಸುವಲ್ಲಿ ಸೀತಾರಾಮ್ ಮುಂಚೂಣಿ ಪಾತ್ರ ನಿರ್ವಹಿಸಿದರು.

2024ರ ಲೋಕಸಭೆ ಚುನಾವಣೆ, ಬಿಜೆಪಿಯ ಗೆಲವಿನ ಸಂಖ್ಯೆ ಬಹುಮತಕ್ಕಿಂತ ಕಡಿಮೆಗೆ ಸೀಮಿತಗೊಳಿಸಿದ ನಂತರ, ಈ ಯಶಸ್ಸಿನ ಮೇಲೆ, ಹಾಗೂ ಸರ್ವಾಧಿಕಾರಿ–ಹಿಂದುತ್ವ ಶಕ್ತಿಗಳ ಮುಂದುವರಿದ ಅಪಾಯದ ವಿರುದ್ಧ ಹೋರಾಟವನ್ನು ಮುಂದುವರಿಸಿಕೊಂಡು ಹೋಗಲು ಅಗತ್ಯವಾದ ರಾಜಕೀಯ ಕಾರ್ಯತಂತ್ರದ ಧೋರಣೆ ರೂಪಿಸುವಲ್ಲಿ ಸೀತಾರಾಮ್ ಯೆಚೂರಿ ನಿರತರಾದರು.

ಮುಂದಿನ ವರ್ಷದ ಏಪ್ರಿಲ್‌ನಲ್ಲಿ ನಡೆಸಲು ಉದ್ದೇಶಿಸಿರುವ ಪಕ್ಷದ 24ನೇ ಮಹಾಧಿವೇಶನಕ್ಕೆ ಪೂರ್ವಭಾವಿಯಾಗಿ ಸಮ್ಮೇಳನಗಳ ವೇಳಾಪಟ್ಟಿ ಮತ್ತು ದಸ್ತಾವೇಜುಗಳನ್ನು ಸಿದ್ಧಪಡಿಸುವುದು ಅವರ ಉಪಕ್ರಮದ ಮೇರೆಗೆ ಪಾಲಿಟ್ ಬ್ಯೂರೋ ಕೈಗೊಂಡ ಕೊನೆಯ ನಿರ್ಧಾರವಾಗಿದೆ.

ಮಹಾಧಿವೇಶನದ ಸಿದ್ಧತೆಗಳಿಗೆ ತಮ್ಮ ಅನಾರೋಗ್ಯದಿಂದ ತೊಂದರೆಯಾಗಬಹುದೇನೋ ಎಂದು ಆಸ್ಪತ್ರೆಯಲ್ಲಿದ್ದಾಗ ಸೀತಾರಾಮ್ ಪದೇ ಪದೇ ನನ್ನ ಬಳಿ ಕಳವಳ ವ್ಯಕ್ತಪಡಿಸುತ್ತಿದ್ದರು. ಎಲ್ಲವೂ ಸುಗಮವಾಗಿ ನಡೆಯುತ್ತದೆ ಹಾಗೂ ಕೆಲವೇ ದಿನಗಳಲ್ಲಿ ನೀವು ಆಸ್ಪತ್ರೆಯಿಂದ ಹೊರ ಬರುತ್ತೀರಿ ಎಂದು ನಾನು ಅವರಿಗೆ ಭರವಸೆ ನೀಡುತ್ತಿದ್ದೆ. ದುರದೃಷ್ಟವಶಾತ್, ಅದು ಸಾಧ್ಯವಾಗಲಿಲ್ಲ.

ಸೀತಾರಾಮ್ ಯೆಚೂರಿಯವರ ವಿಶಾಲ ಕೊಡುಗೆಗಳ ಬಗ್ಗೆ ವಸ್ತುನಿಷ್ಠ ವಿಶ್ಲೇಷಣೆ ನಡೆಸಲು ನನಗೆ ಈ ಹಂತದಲ್ಲಿ ಕಷ್ಟವಾಗುತ್ತದೆ. ನಮಗೆ, ಅಂದರೆ ಯಾವ ಪಕ್ಷಕ್ಕಾಗಿ ತಮ್ಮ ಜೀವಮಾನವನ್ನು ಅವರು ಸಮರ್ಪಿಸಿದ್ದರೋ ಆ ಪಕ್ಷದ ಅವರ ಸಂಗಾತಿಗಳಿಗೆ ಮಾರ್ಕ್ಸ್‌ವಾದ–ಲೆನಿನ್‌ವಾದಕ್ಕೆ ಅವರ ಆಳವಾದ ಬದ್ಧತೆ ಮತ್ತು 'ವಾಸ್ತವ ಪರಿಸ್ಥಿತಿಯ ವಾಸ್ತವ ವಿಶ್ಲೇಷಣೆ' (ಕಾಂಕ್ರೀಟ್ ಅನಾಲಿಸಿಸ್ ಆಫ್ ಕಾಂಕ್ರೀಟ್ ಸಿಚುಯೇಶನ್– ಇದು ಕಾಮ್ರೇಡ್ ಸೀತಾರಾಮ್ ಬಳಸುತ್ತಿದ್ದ ಅಚ್ಚುಮೆಚ್ಚಿನ ಲೆನಿನ್‌ವಾದಿ ಪದಪುಂಜವಾಗಿತ್ತು) ನಡೆಸುವ ಅವರ ಸಾಮರ್ಥ್ಯ, ಜಾತ್ಯತೀತತೆ ಮತ್ತು ಜನತಂತ್ರ ರಕ್ಷಣೆಯಲ್ಲಿ ಅವರ ಮಹತ್ವದ ಪಾತ್ರ; ಮತ್ತು ಶೋಷಣೆ–ಮುಕ್ತ ಸಮಾಜವಾದಿ ಸಮಾಜ ರಚನೆ ಕುರಿತ ಅವರ ವಿಶಾಲ ದೃಷ್ಟಿಕೋನ– ಇವೆಲ್ಲವೂ ನಮಗೆ ಮತ್ತು ಕಮ್ಯೂನಿಸ್ಟರು ಮತ್ತು ಪ್ರಗತಿಪರರ ಮುಂದಿನ ತಲೆಮಾರಿನವರಿಗೆ ಸ್ಫೂರ್ತಿಯಾಗಿರುತ್ತವೆ.

ಅನು: ವಿಶ್ವ

ನಾಗಮಂಗಲ....... ಪುಟ 8 ರಿಂದ

ಚುಂಚನಗಿರಿಯ ಬೇರು ನಾಗಮಂಗಲ ತಾಲ್ಲೂಕು. ನಾಗಮಂಗಲದ ಬೆಳ್ಳೂರಿನಿಂದ ಆರಂಭವಾದ ಮಠ ಇಂದು ಬೃಹದಾಕಾರವಾಗಿ ಬೆಳೆದಿದೆ. ಪಾದಯಾತ್ರೆ ಮಾಡಿ ಮನೆಮನೆಗೆ ತೆರಳಿ ದವಸ ಧಾನ್ಯ ಸಂಗ್ರಹಿಸುತ್ತಿದ್ದ ಮಠದ ಸ್ವಾಮಿಗಳು ಈಗ ಐಷಾರಾಮಿ ಆಮದು ಕಾರುಗಳು ಮತ್ತು ಹೆಲಿಕಾಪ್ಟರ್‌ಗಳಲ್ಲಿ ಓಡಾಡುತ್ತಾ ಮಠದ ಭಕ್ತರಿಗೆ ಆಶೀರ್ವಾದ ಮಾಡುತ್ತಿದ್ದಾರೆ.

ಇಂತಹ ಮಠದ ಕಾಲ ಕೆಳಗೆ ಕೋಮು ಗಲಭೆ ನಡೆದು ಕೋಟ್ಯಂತರ ರೂಪಾಯಿಯ ಆಸ್ತಿ ಪಾಸ್ತಿ ನಷ್ಟವಾಗಿ ಜನತೆ ಆತಂಕದಲ್ಲಿ ಜೀವನ ನಡೆಸುತ್ತಿದ್ದಾರೆ. ಮಠದ ಭಕ್ತರು ಸಂಘಪರಿವಾರದ ಕಾಲಾಳುಗಳಾಗುತ್ತಿದ್ದಾರೆ. ಹಾಗೆಯೇ ಕೆಲವು ಭಕ್ತರು ಕೋಮು ಗಲಭೆಯಿಂದ ತೊಂದರೆಗೊಳಗಾಗಿದ್ದಾರೆ. ಗಲಭೆ ನಡೆದು ವಾರಗಳು ಉರುಳಿದರೂ ಇದುವರೆಗೆ ಮಠದ ಕಡೆಯಿಂದ ಗಲಭೆಯನ್ನು ಖಂಡಿಸಿಯಾಗಲೀ ಅಥವಾ ಶಾಂತಿ ಕಾಪಾಡಿಕೊಳ್ಳಲು ಮನವಿ ಮಾಡಿಯಾಗಲೀ ಒಂದೂ ಹೇಳಿಕೆ ಹೊರಡಲಿಲ್ಲ. ಭಕ್ತರು ಬೀದಿಯಲ್ಲಿ ಬಡಿದಾಡಿಕೊಂಡಿರುವಾಗ ಸ್ವಾಮಿಗಳು ನೆಮ್ಮದಿಯಿಂದ ಪ್ರಾರ್ಥನೆ ಸಲ್ಲಿಸುತ್ತಿದ್ದಾರೆ. ಈ ನಡವಳಿಕೆ ಕೋಮುವಾದಿಗಳ ಆಟಾಟೋಪಕ್ಕೆ ತಡೆ ಹಾಕುವುದಿಲ್ಲ. ಮಠ ಮೌನ ಮುರಿದು ಸೌಹಾರ್ದ ಪರಂಪರೆಯ ಉಳಿವಿಗೆ ಮಾತನಾಡಬೇಕಿದೆ.

ಸೌಹಾರ್ದ ಮತ್ತು ಸಹಬಾಳ್ವೆಯ ತವರು ನಾಗಮಂಗಲ!

ಇಡೀ ಜಿಲ್ಲೆಯಲ್ಲಿ ಮುಸ್ಲಿಂ ಧಾರ್ಮಿಕ ಅಲ್ಪಸಂಖ್ಯಾತರು ಗಣನೀಯ ಸಂಖ್ಯೆಯಲ್ಲಿ ಇರುವ ತಾಲ್ಲೂಕು ನಾಗಮಂಗಲ. ನಾಗಮಂಗಲ ಪಟ್ಟಣದಲ್ಲಿ ಶೇ.30ರಷ್ಟು ಮುಸ್ಲಿಂ ಅಲ್ಪಸಂಖ್ಯಾತರಿದ್ದಾರೆ. ಒಂದೇ ಆವರಣದಲ್ಲಿ ನಾಗಮಂಗಲದ ದೊಡ್ಡ ಮಸೀದಿ ಮತ್ತು ಹುಲ್ಲಸಳೆ ಆಂಜನೇಯಸ್ವಾಮಿ ದೇವಸ್ಥಾನವಿದೆ. ಈ ಮಸೀದಿ ಮತ್ತು ದೇವಸ್ಥಾನದ ಎದುರಿಗೆ ಕನ್ನಿಕಾ ಪರಮೇಶ್ವರಿ ದೇವಾಲಯವಿದೆ. ಆ ದೇವಾಲಯದಿಂದ ಐವತ್ತು ಮೀಟರ್ ಅಂತರದಲ್ಲಿ ಬಸವೇಶ್ವರ ದೇವಸ್ಥಾನವಿದೆ. ಆ ಬೀದಿಯಲ್ಲಿ ಐದಾರು ಮುಸ್ಲಿಂ ಕುಟುಂಬಗಳು, ಉಳಿದಂತೆ ಬೇರೆಬೇರೆ ಜಾತಿಯ ಹಿಂದೂಗಳಿದ್ದಾರೆ.

ಶತಮಾನಗಳಿಂದ ಹೀಗೆ ಒಬ್ಬರೊಳಗೊಬ್ಬರು ಬೆರೆತು ಬದುಕು ಸಾಗಿಸುತ್ತಿದ್ದಾರೆ. ಗಣೇಶನ ಮೆರವಣಿಗೆಯನ್ನು ಮುಸಲ್ಮಾನರೆಲ್ಲಾ ನೋಡಿ ಖುಷಿ ಪಡುತ್ತಿದ್ದವು, ನಮಗೂ ಪ್ರಸಾದ ಕೊಡುತ್ತಿದ್ದರು ಎಂದು ನೆನಪಿಸಿಕೊಳ್ಳುತ್ತಾರೆ ನಾಗಮಂಗಲದ ಫೈರೋಜ್. ಅದೇ ರೀತಿ ನಾವು ವ್ಯಾಪಾರಕ್ಕೆ ಹಳ್ಳಿಗಳಿಗೆ ಹೋಗುತ್ತೇವೆ, ನಮ್ಮ ಮಹಿಳೆಯರು ಸ್ವಸಹಾಯ ಸಂಘಗಳಲ್ಲಿ ಸಾಲ ಮಾಡಿಕೊಂಡು ಕಷ್ಟ ಪಡುತ್ತಿದ್ದಾರೆ. ಹತ್ತಾರು ವರ್ಷಗಳಿಂದ ನಾವು ಜೊತೆಯಾಗಿ ಬದುಕುತ್ತಿದ್ದೇವೆ, ಈಗ ಈ ಆರೆಸ್ಸೆಸ್ ಬಜರಂಗದಳ ನಮ್ಮ ನಡುವೆ ದ್ವೇಷ ಹರಡುತ್ತಿದೆ ಎಂದು ಬೇಸರ ಮಾಡಿಕೊಳ್ಳುತ್ತಾರೆ ರೆಹಮಾನ್. ಎರಡೂ ಕಡೆಯಿಂದ ಹದಿನೈದು ಇಪ್ಪತ್ತು ಜನರು ಇಂತಹ ಗಲಭೆ ನಡೆಸುತ್ತಿದ್ದಾರೆ. ಹಿಂದೂಗಳೆಲ್ಲ ಕೋಮುವಾದಿಗಳಲ್ಲ ಎನ್ನುತ್ತಾರೆ ಕಾರ್ಮಿಕ ಮುಖಂಡ ರಮೇಶ್. ಒಟ್ಟಾರೆಯಾಗಿ ನೆಮ್ಮದಿ ಮತ್ತು ಸೌಹಾರ್ದವಾಗಿದ್ದ ನಾಗಮಂಗಲಕ್ಕೆ ಸಂಘಪರಿವಾರದ ಕ್ರಿಮಿಗಳು ಕೀಡೆ ಹಾಕುತ್ತಿದ್ದಾರೆ.





ಅವರೊಂದು ಹೊಳೆಯುವ ತಾರೆ

ತಮ್ಮ ಜೀವನದುದ್ದಕ್ಕೂ ಮತ್ತು ಮರಣದ ಸಮಯದಲ್ಲಿಯೂ, ಸೀತಾರಾಮ್ ಯೆಚೂರಿ ವೈಜ್ಞಾನಿಕ ಮನೋಭಾವವನ್ನು ಪ್ರತಿಪಾದಿಸಿದರು ಹಾಗೂ ಶೋಧನೆ ಮತ್ತು ಸುಧಾರಣೆಯ ಮನೋಭಾವವನ್ನು ಎತ್ತಿ ಹಿಡಿದರು. ಅವರೊಂದು ಹೊಳೆಯುವ ತಾರೆ, ವಿಜ್ಞಾನ ಸಂಸ್ಥೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾರೆ.

ಪಿಣರಾಯಿ ವಿಜಯನ್

ಕಾಮ್ರೇಡ್ ಸೀತಾರಾಮ್ ಯೆಚೂರಿಯವರ ನಿಧನವು ಒಟ್ಟಾರೆಯಾಗಿ ಭಾರತೀಯ ಪ್ರಜಾಪ್ರಭುತ್ವ ಮತ್ತು ಜಾತ್ಯತೀತ ರಾಜಕೀಯ ವ್ಯವಸ್ಥೆಗೆ ಮತ್ತು ನಿರ್ಧಿಷ್ಟವಾಗಿ ಕಾರ್ಮಿಕ ವರ್ಗದ ಕ್ರಾಂತಿಕಾರಿ ಚಳುವಳಿಗೆ ದೊಡ್ಡ ಹೊಡೆತವಾಗಿದೆ. ಅವರು ಅತ್ಯುತ್ಕೃಷ್ಟ ಮಾರ್ಕ್ಸ್‌ವಾದಿ ಚಿಂತಕರಾಗಿದ್ದರು. ಕಳೆದ ಒಂಬತ್ತು ವರ್ಷಗಳಿಂದ ಸಿಪಿಐ(ಎಂ)ನ ಪ್ರಧಾನ ಕಾರ್ಯದರ್ಶಿಯಾಗಿ ಪಕ್ಷವನ್ನು ಮುನ್ನಡೆಸುತ್ತಿದ್ದರು ಮತ್ತು ಅದರ ಕೆಲವು ಅತ್ಯಂತ ಕಷ್ಟಕರ ಸಮಯದಲ್ಲಿ ಅದನ್ನು ಮುಂದೊಯ್ದರು.

ಸೀತಾರಾಮ್ ಯೆಚೂರಿ ಅವರು ರಾಷ್ಟ್ರೀಯ ತುರ್ತು ಪರಿಸ್ಥಿತಿಯನ್ನು ವಿರೋಧಿಸುವ ವಿದ್ಯಾರ್ಥಿ ನಾಯಕರಾಗಿ ಬೆಳಕಿಗೆ ಬಂದರು. ಜವಾಹರಲಾಲ್ ನೆಹರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಸಂಘದ ಅಧ್ಯಕ್ಷರಾಗಿ, ತುರ್ತು ಪರಿಸ್ಥಿತಿಯ ಹಿನ್ನೆಲೆಯಲ್ಲಿ ದೌರ್ಜನ್ಯಗಳು ನಡೆದಾಗ, ಅವರು ವಿದ್ಯಾರ್ಥಿಗಳನ್ನು ಮುನ್ನಡೆಸಿಕೊಂಡು, ಪ್ರಧಾನಿ ಇಂದಿರಾ ಗಾಂಧಿಯವರ ಅಧಿಕೃತ ನಿವಾಸಕ್ಕೆ ಮೆರವಣಿಗೆ ಒಯ್ದರು. ಜೆಎನ್‌ಯು ಕುಲಪತಿ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಅಲ್ಲಿ ಒತ್ತಾಯಿಸಿದರು. ಸೀತಾರಾಮ್ ಅಷ್ಟು ಧೈರ್ಯವಂತರಾಗಿದ್ದರು. ಇಲ್ಲಿಯವರೆಗೆ, ಸತತ ಮೂರು ಅವಧಿಗೆ ಜೆಎನ್‌ಯುಎಸ್‌ಯು ಅಧ್ಯಕ್ಷರಾಗಿ ಆಯ್ಕೆಯಾದ ಏಕೈಕ ವ್ಯಕ್ತಿ. ಜೆಎನ್‌ಯು ಕ್ಯಾಂಪಸ್‌ನಲ್ಲಿ ಜೆಎನ್‌ಯು ಸಮುದಾಯದಿಂದ ಬೀಳ್ಕೊಡುಗೆಯನ್ನು ಪಡೆದ ಏಕೈಕ ರಾಜಕೀಯ ನಾಯಕ ಅವರು ಎಂಬುದು ಅವರು ಅಲ್ಲಿಯ ಒಬ್ಬ ಹಳೆಯ ವಿದ್ಯಾರ್ಥಿಯಾಗಿ ಎಷ್ಟು ಗೌರವಾನ್ವಿತರಾಗಿದ್ದರು ಮತ್ತು ಅದು ಜೆಎನ್‌ಯು ಅವರಿಗೆ ಎಷ್ಟು ಪ್ರಿಯವಾಗಿತ್ತು ಎಂಬುದನ್ನು ಮನಗಾಣಿಸುತ್ತದೆ.

33ನೇ ವಯಸ್ಸಿನಲ್ಲಿ, ಸೀತಾರಾಮ್ ಅವರು ಕೇಂದ್ರ ಸಮಿತಿಯ ಸದಸ್ಯರಾಗಿ ಆಯ್ಕೆಯಾದರು ಮತ್ತು ಕೇವಲ 40 ವರ್ಷ ವಯಸ್ಸಿನಲ್ಲೇ ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರಾದರು. ಬದಲಾಗುತ್ತಿರುವ ಅಂತರಾಷ್ಟ್ರೀಯ ಮತ್ತು ರಾಷ್ಟ್ರೀಯ ಸನ್ನಿವೇಶಗಳಲ್ಲಿ ಸಿಪಿಐ(ಎಂ)ನ ರಾಜಕೀಯ, ಕಾರ್ಯತಂತ್ರ ಮತ್ತು ಕಾರ್ಯವ್ಯೂಹದ ದಾರಿಯನ್ನು ರೂಪಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು. ಕಳೆದ ಮೂರು ದಶಕಗಳನ್ನೂ ಮೀರಿದ ಅವಧಿಯಲ್ಲಿ, ನಮ್ಮ ನಿಲುವುಗಳು ಒಂದು ಕಮ್ಯುನಿಸ್ಟ್ ಪಕ್ಷಕ್ಕೆ ಅತ್ಯಂತ ಸೂಕ್ತ ಮತ್ತು ಪರಿಣಾಮಕಾರಿ ಎಂದು ಸಾಬೀತಾಗಿದೆ. ವಿಭಿನ್ನ ರಂಗಗಳಲ್ಲಿ ನಮ್ಮ ಕೆಲಸವು ಉತ್ತಮಗೊಂಡಿದೆ ಮತ್ತು ನಾವು ಹೊಸ ವಿಭಾಗಗಳನ್ನು ಪ್ರವೇಶಿಸಲು ಸಾಧ್ಯವಾಯಿತು ಎಂಬ ಸಂಗತಿ ಇದಕ್ಕೆ ಸಾಕ್ಷಿಯಾಗಿದೆ.

ಸೀತಾರಾಮ್ ಯೆಚೂರಿ ಅವರು ಅಸಾಧಾರಣ ಅಧ್ಯಯನಶೀಲರಾಗಿದ್ದರು ಮತ್ತು ಬಹು ಭಾಷೆಗಳಲ್ಲಿ ಸುಲಭವಾಗಿ ವ್ಯವಹರಿಸಬಲ್ಲವರಾಗಿದ್ದರು. ಅವರು ಭಾರತೀಯ ಇತಿಹಾಸ, ಸಮಾಜ, ಸಂಸ್ಕೃತಿ ಮತ್ತು ರಾಜಕೀಯ ಮತ್ತು ಪ್ರಸ್ತುತ ವ್ಯವಹಾರಗಳು ಮತ್ತು ಅಂತರರಾಷ್ಟ್ರೀಯ ಸಂಬಂಧಗಳ ಬಗ್ಗೆ ಉತ್ತಮ ಜ್ಞಾನವನ್ನು ಹೊಂದಿದ್ದರು. ಅವರ ಭಾಷಣ ಕೌಶಲ್ಯ ಅನುಕರಣೀಯವಾಗಿದ್ದು, ಅವರ ಉಪನ್ಯಾಸಗಳು ಮತ್ತು ಭಾಷಣಗಳು ಯಾವಾಗಲೂ ಹೆಚ್ಚಿನ ಪ್ರೇಕ್ಷಕರನ್ನು ಆಕರ್ಷಿಸುತ್ತಿದ್ದವು. ಮಾರ್ಕ್ಸ್‌ವಾದ, ಲೆನಿನ್‌ವಾದ ಮತ್ತು ಗತಿತಾರ್ಕಿಕ ಭೌತವಾದದ ತತ್ವಗಳನ್ನು ಅತ್ಯಂತ ಸಾಮಾನ್ಯರೂ ಅರ್ಥಮಾಡಿಕೊಳ್ಳುವ ರೀತಿಯಲ್ಲಿ ವಿವರಿಸುವ ಸಹಜ ಸಾಮರ್ಥ್ಯವನ್ನು ಅವರು ಹೊಂದಿದ್ದರು. ಅವರ ಪಕ್ಷದ ತರಗತಿಗಳನ್ನು ವಿಶೇಷವಾಗಿ ವಿದ್ಯಾರ್ಥಿಗಳು ಮತ್ತು ಯುವಕರು ಅರಸಿ ಹೋಗುತ್ತಿದ್ದರು. ಮುಂದೆ ಜನಸಾಮಾನ್ಯರಿಗೆ ಶಿಕ್ಷಣ ನೀಡುವ ಈ ಆಸಕ್ತಿಯನ್ನು ಮುಂದೊಯ್ದು ಅವರು 'ಲೆಫ್ಟ್‌ವರ್ಡ್ ಬುಕ್ಸ್'ನ ಸಂಸ್ಥಾಪಕ ನಿರ್ದೇಶಕರಾದರು.


ಕಾಮ್ರೇಡ್ ಸೀತಾರಾಂ ನಿಜವಾಗಿಯೂ ಒಬ್ಬ ಜನತೆಯ ಸಂಸದನಾಗಿದ್ದರು. ಅವರು ರಾಜ್ಯಸಭಾ ಸದಸ್ಯರಾಗಿದ್ದ ಎರಡು ಅವಧಿಗಳಲ್ಲಿ ಅವರು ಯಾವಾಗಲೂ ದೇಶದ ಸಾಮಾನ್ಯ ಮತ್ತು ಬಡ ಜನರ ಮೇಲೆ ಪರಿಣಾಮ ಬೀರುವ ಸಮಸ್ಯೆಗಳನ್ನು ಸಂಸತ್ತು ಮೊದಲು ಮತ್ತು ಅತ್ಯಂತ ಮುಖ್ಯವಾಗಿ ಪರಿಶೀಲಿಸುವಂತೆ ಮಾಡಿದ್ದರು. ವಾಸ್ತವವಾಗಿ, ಅಂಚಿನಲ್ಲಿರುವ ಮತ್ತು ದೀನದಲಿತರ ಬಗ್ಗೆ ಅವರ ಕಾಳಜಿಯು ಯುಪಿಎ–1 ರ ಅವಧಿಯಲ್ಲಿ ಅವರು ರೂಪಿಸಲು ಸಹಾಯ ಮಾಡಿದ ಸಾಮಾನ್ಯ ಕನಿಷ್ಠ ಕಾರ್ಯಕ್ರಮ(ಸಿಎಂಪಿ)ದಲ್ಲಿ ಬಹುಚೆನ್ನಾಗಿ ಬಿಂಬಿತವಾಗುತ್ತದೆ. ಸಂಸತ್ತಿನ ಮೇಲ್ಮನೆಯಲ್ಲಿ ಅವರ ಮಧ್ಯಪ್ರವೇಶಗಳನ್ನು ಎಲ್ಲರೂ ಆಸಕ್ತಿಯಿಂದ ಗಮನಿಸುತ್ತಿದ್ದರು ಮತ್ತು ಆಗಾಗ್ಗೆ ಸದನದ ಅಧ್ಯಕ್ಷರಿಂದ ಮೆಚ್ಚುಗೆ ಪಡೆಯುತ್ತಿದ್ದವು.

ಪ್ರಜಾಪ್ರಭುತ್ವ, ಒಕ್ಕೂಟತತ್ವ, ಸಮಾಜವಾದ, ಜಾತ್ಯತೀತತೆ ಮತ್ತು ರಾಷ್ಟ್ರದ ಸಾರ್ವಭೌಮತ್ವದ ಉನ್ನತ ಮೌಲ್ಯಗಳನ್ನು ರಕ್ಷಿಸುವಲ್ಲಿ ಸೀತಾರಾಮ್ ಅವರು ಕೋಟೆಯಾಗಿ ನಿಂತರು. ಅವರು ಸಂಸತ್ತಿನಲ್ಲಿ ಮುಂದಿಟ್ಟ ಸೃಜನಾತ್ಮಕ ವಿಚಾರಗಳು ಅಧಿಕಾರದ ಚುಕ್ಕಾಣಿ ಹಿಡಿದವರ ನಡುವೆ ರಾಷ್ಟ್ರಕ್ಕೆ ಸಂಬಂಧಿಸಿದ ಅನೇಕ ವಿಷಯಗಳಲ್ಲಿ ಒಮ್ಮತವನ್ನು ವಿಕಸನಗೊಳಿಸಲು ಕಾರಣವಾದವು. ಅವರು ಉದಾರೀಕರಣ–ಖಾಸಗೀಕರಣ–ಜಾಗತೀಕರಣ (ಎಲ್‌ಪಿಜಿ) ನೀತಿಗಳ ವಿರುದ್ಧ ಹೋರಾಡಿದರು ಮತ್ತು ಸಾರ್ವಜನಿಕ ವಲಯವನ್ನು ಅಖಂಡವಾಗಿ ಸಂರಕ್ಷಿಸಲು ದೃಢವಾಗಿ ನಿಂತರು. ಕಳೆದ ನಾಲ್ಕೈದು ದಶಕಗಳಲ್ಲಿ ದೆಹಲಿ ಕಂಡ ಪ್ರತಿ ಹೋರಾಟದ ಮೊದಲ ಸಾಲಿನಲ್ಲಿ ಅವರು ಪೊಲೀಸರ ಕ್ರೂರ ದಾಳಿಯನ್ನು ಎದುರಿಸಿ ನಿಂತವರು. ಎಲ್ಲರಿಗೂ ತಿಳಿದಿರುವಂತೆ, ರೈತರ ಹೋರಾಟದಿಂದ ಹಿಡಿದು ಸಿಎಎ ಹೋರಾಟಗಳವರೆಗೆ ಜನರ ಇತ್ತೀಚಿನ ಎಲ್ಲಾ ಹೋರಾಟಗಳ ಅಗ್ರ ಸಾಲಿನಲ್ಲಿ ಅವರು ಇದ್ದರು. ಅವರ ನಿಲುವುಗಳ ಸ್ಪಷ್ಟತೆ ಎದ್ದು ಕಾಣುವಂತಿತ್ತು. ಅವರು 2ಜಿ ಹಗರಣಗಳಿಂದ ಅಣು ಸ್ಥಾವರಗಳವರೆಗೆ ವ್ಯಾಪಕವಾದ ವಿಷಯಗಳ ಬಗ್ಗೆ ಮಾತನಾಡಿದರು. ಯುಪಿಎ–1 ಆಡಳಿತಾವಧಿಯಲ್ಲಿ ಆರ್‌ಟಿಐ, ಶಿಕ್ಷಣ ಹಕ್ಕು, ಆಹಾರ ಭದ್ರತಾ ಯೋಜನೆ ಇತ್ಯಾದಿಗಳಿಗೆ ಸಂಬಂಧಿಸಿದ ನೀತಿಗಳನ್ನು ರೂಪಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು.

ರಾಷ್ಟ್ರಪತಿಗಳ ಭಾಷಣದ ಮೇಲಿನ ನಿರ್ಣಯಕ್ಕೆ ವಿರೋಧ ಪಕ್ಷಗಳು ಮಂಡಿಸಿದ ತಿದ್ದುಪಡಿಗಳನ್ನು ಅಂಗೀಕರಿಸಿರುವುದು ಬಹಳ ವಿರಳ. ಆದರೆ ಸೀತಾರಾಮ್ ಅವರ ಚತುರ ಮಧ್ಯಪ್ರವೇಶದಿಂದಾಗಿ ಎರಡು ವಿರೋಧ ತಿದ್ದುಪಡಿಗಳನ್ನು ಆಳುವ ಪಕ್ಷಗಳು ಅಂಗೀಕರಿಸಿದವು.

ಸಂಸತ್ತಿನಲ್ಲಿ ಪ್ರತಿಪಕ್ಷಗಳ ಕಡೆಯ ಅನುಭವಿ ನಾಯಕರಾಗಿ, ಹಲವಾರು ಸಂದರ್ಭಗಳಲ್ಲಿ ಕಾಮ್ರೇಡ್ ಸೀತಾರಾಮ್‌ರವರಿಗೆ ಎಲ್ಲರ ಒಳಿತಿಗಾಗಿ ವಿವಿಧ ರಾಜಕೀಯ ಪಕ್ಷಗಳ ನಾಯಕರನ್ನು ಒಟ್ಟಿಗೆ ತರಲು ಸಾಧ್ಯವಾಯಿತು. ಹಲವಾರು ವಿಷಯಗಳಲ್ಲಿ ರಾಜಕೀಯ ಒಮ್ಮತವನ್ನು ತರಲು ಸಾಧ್ಯವಾಗಿ ಅವರು ನಿಜವಾದ ಮುತ್ಸದ್ದಿಯಾಗಿ ಎದ್ದು ಕಾಣುತ್ತಾರೆ. ಅವರಿಗೆ ರಾಷ್ಟ್ರೀಯ ಹಿತಾಸಕ್ತಿ ಎಂದರೆ, ರಾಷ್ಟ್ರದ ಜನರ ಹಿತಾಸಕ್ತಿ ಮತ್ತು ಅವರ ಹಿತಾಸಕ್ತಿಗಳನ್ನು ರಕ್ಷಿಸಲು ಅವರು ಸಾಧ್ಯವಿರುವ ಎಲ್ಲಾ ಮಾರ್ಗಗಳನ್ನು ಅನ್ವೇಷಿಸುತ್ತಿದ್ದರು.

ಭಾರತೀಯ ಪ್ರಜಾಪ್ರಭುತ್ವವನ್ನು ಉಳಿಸಿಕೊಳ್ಳಲು, ಅದರ ಜಾತ್ಯತೀತ–ಒಕ್ಕೂಟ ಚಾರಿತ್ರ್ಯವನ್ನು ಪಾತ್ರವನ್ನು ರಕ್ಷಿಸಬೇಕು ಮತ್ತು ಅದರ ವ್ಯವಹಾರಗಳನ್ನು ನಿರ್ವಹಿಸುವಲ್ಲಿ ದೇಶದ ಎಲ್ಲಾ ಜನವಿಭಾಗಗಳು ಸಮಾನ ಅವಕಾಶ ಹೊಂದಿರಬೇಕು ಎಂದು ಸೀತಾರಾಮ್‌ರವರಿಗೆ ಖಾತ್ರಿಯಾಗಿತ್ತು. ನಮ್ಮ ಪ್ರಜಾಪ್ರಭುತ್ವವು ಪಾರದರ್ಶಕವಾಗಿರದ ಹೊರತು, ಅದು ಎಂದಿಗೂ ಹಿಂದುಳಿದವರ ಮತ್ತು ಬಡವರ ಪರವಾಗಿ ಕೆಲಸ ಮಾಡುವುದಿಲ್ಲ ಎಂದೂ ಅವರು ಖಚಿತವಾಗಿ ನಂಬಿದ್ದರು. 370ನೇ ವಿಧಿ ರದ್ದತಿ, ಸಿಎಎ, ಚುನಾವಣಾ ಬಾಂಡ್‌ಗಳು ಇತ್ಯಾದಿ ವಿಷಯಗಳ ಕುರಿತು ಸಿಪಿಐ(ಎಂ) ನಿಲುವುಗಳು ಮತ್ತು ಅವನ್ನು ಮುಂದೊಯ್ಯುವಲ್ಲಿ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ, ಸುಪ್ರೀಂ ಕೋರ್ಟ್‌ನ ಮಟ್ಟದಲ್ಲಿಯೂ ಸಹ ಅವರು ನಡೆಸಿದ



ಹೋರಾಟಗಳು, ಅದನ್ನು ಎತ್ತಿ ತೋರಿವೆ. ಭಾರತದ ಒಕ್ಕೂಟ ರಚನೆಯನ್ನು ರಕ್ಷಿಸಲು, ರಾಜ್ಯಗಳ ಅಧಿಕಾರ ಮತ್ತು ಹಣಕಾಸಿನ ಮೇಲೆ ಅತಿಕ್ರಮಣ ಮಾಡಿದ ಹಿನ್ನೆಲೆಯಲ್ಲಿ ಕೇರಳ ಇತ್ತೀಚೆಗೆ ಜಂತರ್ ಮಂತರ್‌ನಲ್ಲಿ ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟನೆಯನ್ನು ಆಯೋಜಿಸಿದಾಗ, ವಿವಿಧ ರಾಷ್ಟ್ರೀಯ ಮಟ್ಟದ ರಾಜಕೀಯ ನಾಯಕರ ಭಾಗವಹಿಸುವಿಕೆಯನ್ನು ಖಾತ್ರಿಪಡಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು.

ನವ–ಉದಾರವಾದದ ಈ ಯುಗದಲ್ಲಿ, ಕಾರ್ಮಿಕರು ಮತ್ತು ರೈತರಿಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಸಂಬಂಧಪಟ್ಟಂತೆ ಸೀತಾರಾಮ್ ಅವರ ವಿಶ್ಲೇಷಣೆ ಕರಾರುವಕ್ಕಾಗಿರುತ್ತಿತ್ತು. ಇತ್ತೀಚಿನ ವರ್ಷಗಳಲ್ಲಿ, ರೈತರ–ಕಾರ್ಮಿಕರ ದುರವಸ್ಥೆಯನ್ನು ಮುಖ್ಯವಾಹಿನಿಗೆ ತರುವಲ್ಲಿ ಅವರ ಮಧ್ಯಪ್ರವೇಶಗಳು ಐತಿಹಾಸಿಕವಾಗಿವೆ. ಚುನಾವಣೆಗಳಲ್ಲಿ ನಮ್ಮ ಪ್ರದರ್ಶನಗಳಲ್ಲಿ ಹಿನ್ನಡೆಯ ಹೊರತಾಗಿಯೂ, ಬುಡಮಟ್ಟದಲ್ಲಿನ ನಮ್ಮ ಹೋರಾಟಗಳು ವಿಸ್ತಾರವಾಗಿ, ವ್ಯಾಪಕವಾಗಿ ಹರಡಿವೆ. ಇದು ಸ್ವತಂತ್ರ ಭಾರತದಲ್ಲಿ ಮೊತ್ತ ಮೊದಲ ಬಾರಿ ಆಳುವ ವರ್ಗಗಳು ತಮ್ಮ ಒಂದು ಅಚ್ಚುಮೆಚ್ಚಿನ ಶಾಸನವನ್ನು, ಅಂದರೆ ಕೃಷಿ ಕಾಯ್ದೆಗಳನ್ನು, ಹಿಂದಕ್ಕೆ ಪಡೆಯುವಂತೆ ಮಾಡಿದೆ.

ಪ್ರತಿಗಾಮಿ ಶಕ್ತಿಗಳು ಇತಿಹಾಸವನ್ನು ತಿರುಚಿ ಹಳಿ ತಪ್ಪಿಸಲು ಯತ್ನಿಸುತ್ತಿರುವ ಸಂದರ್ಭದಲ್ಲಿ ಸೀತಾರಾಮ್ ಯೆಚೂರಿಯವರು ಮಧ್ಯಪ್ರವೇಶಿಸಿ ಮುಂದಿಟ್ಟ ವಾದಗಳು ಅದನ್ನು ಮತ್ತೆ ಹಳಿಯ ಮೇಲೆ ತಂದಿದೆ. ಅವರು ಪಕ್ಷದ ಇತಿಹಾಸದ ಬಗ್ಗೆಯೂ, ವಿಶೇಷವಾಗಿ ನಿರ್ಣಾಯಕ ಘಟ್ಟಗಳಲ್ಲಿ ಅನುಭವಿ ಹಿರಿಯರು ನಿರ್ವಹಿಸಿದ ಪಾತ್ರಗಳ ಬಗ್ಗೆ ಸಂಪೂರ್ಣ ಜ್ಞಾನವನ್ನು ಹೊಂದಿದ್ದರು, ಪ್ರಚೋದನಕಾರಿ ಸಂದರ್ಭಗಳನ್ನು ಎದುರಿಸುವ ಮತ್ತು ನಗುವಿನ ಸ್ಪರ್ಶದೊಂದಿಗೆ ಸಮಸ್ಯೆಗಳನ್ನು ಪರಿಹರಿಸುವ ವಿಶೇಷ ಚಾಣಾಕ್ಷತೆ ಅವರಲ್ಲಿತ್ತು.

ಕೇರಳದಲ್ಲಿ ಸಿಪಿಐ(ಎಂ)ಗೆ ಸಂಬಂಧಿಸಿದಂತೆ, ರಾಜಕೀಯ ಮತ್ತು ಸಂಘಟನಾ ವಿಷಯಗಳಲ್ಲಿ ನಮಗೆ ಸಹಾಯ ಮಾಡಲು ಸೀತಾರಾಮ್ ಯೆಚೂರಿ ಯಾವಾಗಲೂ ಇರುತ್ತಿದ್ದರು. ಅವರ ಸೈದ್ಧಾಂತಿಕ ಸ್ಪಷ್ಟತೆ ಮತ್ತು ಸಂಘಟನಾ ಬದ್ಧತೆ ನಿಜಕ್ಕೂ ಮಾರ್ಗದರ್ಶಿ ದೀಪಗಳಾಗಿದ್ದವು. ಕೇರಳದಲ್ಲಿ ನಮ್ಮ ಎಲ್‌ಡಿಎಫ್ ಸರ್ಕಾರಕ್ಕೆ, ಕಳೆದ ಎಂಟು ವರ್ಷಗಳಲ್ಲಿ ಅವರ ಮಾರ್ಗದರ್ಶನ ಮತ್ತು ಬೆಂಬಲವನ್ನು ನಾವು ಯಾವಾಗಲೂ ನೆಚ್ಚಿಕೊಂಡಿದ್ದೆವು. ಅವರಿಲ್ಲದೆ, ಅದೀಗ ತಪ್ಪಿಹೋದಂತಾಗಿದೆ.

ಸಿಪಿಐ(ಎಂ)ನ ಕೇಂದ್ರ ಸಮಿತಿ ಮತ್ತು ಪೊಲಿಟ್ ಬ್ಯೂರೊದಲ್ಲಿ ಕಾಮ್ರೇಡ್ ಸೀತಾರಾಂ ಅವರೊಂದಿಗೆ ಕೆಲಸ ಮಾಡಲು ಸಾಧ್ಯವಾಗಿದ್ದು ನನ್ನ ವೈಯಕ್ತಿಕ ಸುಯೋಗ ಎಂದು ಭಾವಿಸುತ್ತೇನೆ. ಅವರ ಸಹೋದ್ಯೋಗಿ ಮತ್ತು ಒಡನಾಡಿಯಾಗಿ, ಅವರಿಂದ ಕಲಿಯಲು ಮತ್ತು ಅರ್ಥಮಾಡಿಕೊಳ್ಳಲು ಯಾವಾಗಲೂ ಬಹಳಷ್ಟು ಇರುತ್ತಿತ್ತು. ತೀವ್ರ ವೈಯಕ್ತಿಕ ನಷ್ಟಗಳು ಮತ್ತು ಅನಾರೋಗ್ಯದ ನಡುವೆಯೂ, ಅವರು ಯಾವಾಗಲೂ ಪಕ್ಷ ಮತ್ತು ಸಮಾಜವು ತನ್ನ ಮೇಲೆ ವಹಿಸಿದ ಜವಾಬ್ದಾರಿಗಳಿಗೆ ಬದ್ಧರಾಗಿಯೇ ಇದ್ದರು. ಅವರ ನಿರ್ಗಮನವು ಕೇವಲ ನೋವಿನ ವೈಯಕ್ತಿಕ ನಷ್ಟ ಮಾತ್ರವೇ ಅಲ್ಲ, ಭಾರತೀಯ ಮತ್ತು ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಗಳಿಗೂ ದೊಡ್ಡ ನಷ್ಟವಾಗಿದೆ.

ತಮ್ಮ ಜೀವನದುದ್ದಕ್ಕೂ ಮತ್ತು ಮರಣದ ಸಮಯದಲ್ಲಿಯೂ, ಸೀತಾರಾಮ್ ಯೆಚೂರಿ ವೈಜ್ಞಾನಿಕ ಮನೋಭಾವವನ್ನು ಪ್ರತಿಪಾದಿಸಿದರು ಹಾಗೂ ಶೋಧನೆ ಮತ್ತು ಸುಧಾರಣೆಯ ಮನೋಭಾವವನ್ನು ಎತ್ತಿ ಹಿಡಿದರು. ಅವರೊಂದು ಹೊಳೆಯುವ ತಾರೆ, ವಿಜ್ಞಾನದಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾರೆ. ಕೆಂಪು ವಂದನೆ, ಆತ್ಮೀಯ ಸಂಗಾತಿ!

ಅನು: ವೇದರಾಜ್ ಎನ್.ಕೆ.

ದುಡಿಯುವ ವರ್ಗದ ಹಿರಿಯ ನಾಯಕ ಎಂ.ಎಂ.ಲಾರೆನ್ಸ್ ನಿಧನ

ಪಕ್ಷದ ಹಿರಿಯ ನಾಯಕ ಮತ್ತು ಕೇಂದ್ರ ಸಮಿತಿಯ ಮಾಜಿ ಸದಸ್ಯ ಕಾಮ್ರೇಡ್ ಎಂ.ಎಂ.ಲಾರೆನ್ಸ್ ಸಪ್ಟಂಬರ್ 21ರಂದು ನಿಧನರಾಗಿದ್ದಾರೆ. ಅವರಿಗೆ 95 ವರ್ಷವಾಗಿತ್ತು. ಅವರ ನಿಧನಕ್ಕೆ ಸಿಪಿಐ(ಎಂ) ಪೊಲಿಟ್ ಬ್ಯೂರೋ ತೀವ್ರ ಸಂತಾಪ ವ್ಯಕ್ತಪಡಿಸಿದೆ.

ಕಾಮ್ರೇಡ್ ಲಾರೆನ್ಸ್ ಹಲವಾರು ಸ್ಥಾನಗಳಲ್ಲಿ ಪಕ್ಷಕ್ಕೆ ಗೌರವಾರ್ಹ ಸೇವೆ ಸಲ್ಲಿಸಿದರು. ಅವರು ದೀರ್ಘಕಾಲದ ವರೆಗೆ ಕೇರಳದ ಎರ್ನಾಕುಲಂ ಜಿಲ್ಲಾ ಸಮಿತಿಯ ಕಾರ್ಯದರ್ಶಿ, ಕೇರಳ ರಾಜ್ಯ ಸಮಿತಿ ಮತ್ತು ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾಗಿದ್ದರು. ಅವರು ಪ್ರಸಿದ್ಧ ಕಾರ್ಮಿಕ ಮುಖಂಡರಾಗಿದ್ದರು. ಕೇರಳದ ಎಲ್.ಡಿ.ಎಫ್.ನ ಸಂಚಾಲಕರಾಗಿಯೂ ಸೇವೆ ಸಲ್ಲಿಸಿದರು.

ಪೊಲಿಟ್‌ಬ್ಯುರೊ ಅವರ ಕುಟುಂಬದ ಎಲ್ಲ ಸದಸ್ಯರಿಗೆ ತನ್ನ ಹೃತ್ಪೂರ್ವಕ ಸಂತಾಪವನ್ನು ತಿಳಿಸಿದೆ.



ಕಲ್ಯಾಣ ಕಾಣದ ಈ ಕರ್ನಾಟಕ...... ಪುಟ 3 ರಿಂದ

ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವಲ್ಲಿ ಕೃಷಿ ಮತ್ತು ಕೈಗಾರಿಕೆಗಳನ್ನು ಬೆಳೆಸುವ, ಶೈಕ್ಷಣಿಕವಾಗಿ ಸಾಧನೆಯನ್ನು ಮಾಡುವ ಪ್ರಧಾನ ಉದ್ದೇಶ ಇಲ್ಲ. ಕೇವಲ ಯೋಜನೆಗಳಿಂದಲೇ ಅಭಿವೃದ್ಧಿಯನ್ನು ಸಾಧಿಸುತ್ತೇವೆ ಎಂದು ಜನರಲ್ಲಿ ಭ್ರಮೆ ಹುಟ್ಟಿಸುತ್ತಿರುವುದು ಅದರ ವರ್ಗ ಹಿತಾಸಕ್ತಿಗೆ ಅನುಗುಣವಾಗಿಯೇ ಇದೆ. ಇಲ್ಲಿಯ ಭೂ ಸಂಬಂಧಗಳನ್ನು ಬದಲಾಯಿಸಿ ಪ್ರಜಾಪ್ರಭುತ್ವೀಕರಣಕ್ಕೆ ಅನುವು ಮಾಡಿಕೊಡುವುದಕ್ಕೆ ಕಾಂಗ್ರೆಸ್, ಬಿಜೆಪಿ, ಜೆಡಿಎಸ್‌ನ ಯಾವ ಸರ್ಕಾರಗಳಿಗೂ ಈ ಪಕ್ಷಗಳಿಗೂ ಬೇಕಾಗಿಲ್ಲ. ವಾಸ್ತವದಲ್ಲಿ, ಕಾಮಗಾರಿಗಳಿಗೆ ಒತ್ತು ಕೊಟ್ಟು ಅದಕ್ಕೆ ಅತ್ಯಧಿಕ ಹಣದ ಸಂಪನ್ಮೂಲವನ್ನು ಒದಗಿಸುವುದು ಪ್ರಧಾನವಾಗಿ ಇಲ್ಲಿ ಜನಪ್ರತಿನಿಧಿಗಳಿಗೆ ಅಧಿಕಾರದ ಸುತ್ತಲಿರುವ ರಾಜಕಾರಣಿಗಳು ಮತ್ತು ಅಧಿಕಾರಶಾಹಿಗೆ ವ್ಯಾಪಕ ಭ್ರಷ್ಟಾಚಾರವನ್ನು ನಡೆಸಲು ಅನುವು ಮಾಡಿ ಕೊಟ್ಟಿರುವುದೇ ಆಗಿದೆ. ಹೀಗಾಗಿ ಪ್ರಾದೇಶಿಕ ಅಸಮಾನತೆಯನ್ನು ತೊಲಗಿಸಿ ಅಭಿವೃದ್ಧಿಯನ್ನು ಸಾಧಿಸುವ ಹೆಸರಿನಲ್ಲಿ ಕೆಲವೇ ಕೆಲವು ಸ್ಥಾಪಿತ ಹಿತಾಸಕ್ತಿಗಳುಳ್ಳ ಜನರ ಅಭಿವೃದ್ಧಿ ಆಗುತ್ತಿರುವುದು ಎದ್ದು ಕಾಣುವ ಅಂಶ. ಈ ಜಾಡಿನಿಂದ ಕಾಂಗ್ರೆಸ್ಸಿನ ಸಿದ್ದರಾಮಯ್ಯನವರ ಸರ್ಕಾರ ಹೊರಗೆ ಬಂದಿಲ್ಲ ಬದಲಾಗಿ ಅದನ್ನೇ ಮುಂದುವರಿಸಿದೆ ಎನ್ನುವುದು ವಿಷಾದನೀಯ.ಇದರ ಜೊತೆಯಲ್ಲಿ ಈ ಸಚಿವ ಸಂಪುಟವು ಕೇವಲ ಗುಲ್ಬರ್ಗ, ಬೀದರ್ ಜಿಲ್ಲೆಗಳಿಗೆ ಹೆಚ್ಚಿನ ಒತ್ತು ನೀಡಿ ಈ ವ್ಯಾಪ್ತಿಯಲ್ಲಿ ಬರುವ ಇತರ ಜಿಲ್ಲೆಗಳನ್ನ ನಿರ್ಲಕ್ಷಿಸಿದೆ ಎನ್ನುವ ಟೀಕೆಯು ಗಂಭೀರವಾಗಿದೆ. ಮುಖ್ಯವಾಗಿ, ಬಳ್ಳಾರಿ–ವಿಜಯನಗರ ಜಿಲ್ಲೆಗಳಿಗೆ ಈ ಹಿಂದೆ ಸರ್ಕಾರಗಳು ಕೊಟ್ಟ ಯಾವ ಭರವಸೆಯನ್ನು ಈಡೇರಿಸಿಲ್ಲ. ಈಗಿನ ಸಚಿವ ಸಂಪುಟ ಈ ಜಿಲ್ಲೆಗಳ ಅಭಿವೃದ್ಧಿಯ ಪ್ರಶ್ನೆಗಳನ್ನೇ ಪರಿಗಣಿಸಿಯೇ ಇಲ್ಲ ಎನ್ನುವುದನ್ನು ಗಂಭೀರವಾಗಿ ನೋಡಬೇಕಾಗಿದೆ.

ನಿಜಕ್ಕೂ ಕಾಂಗ್ರೆಸ್ ಸರ್ಕಾರಕ್ಕೆ ಪ್ರಾದೇಶಿಕ ಅಸಮಾನತೆಯನ್ನು ತೊಲಗಿಸಿ ನಿಜಕ್ಕೂ ಅಭಿವೃದ್ಧಿಯನ್ನು ಸಾಧಿಸುವ ಪ್ರಾಮಾಣಿಕತೆ ಇದ್ದರೆ ಈಗಿನ ತನ್ನ ಈ ಅಭಿವೃದ್ಧಿ ದೃಷ್ಟಿಕೋನ ಮತ್ತು ಅದಕ್ಕೆ ಸಂಬಂಧಿಸಿದ ಯೋಜನೆಗಳನ್ನು ಪುನರ್ ರೂಪಿಸುವ ರಾಜಕೀಯ ಇಚ್ಛಾಶಕ್ತಿಯ ಕೊರತೆ ಈ ಸರ್ಕಾರಕ್ಕೆ ಕಾಂಗ್ರೆಸ್ ಪಕ್ಷಕ್ಕೆ ಇದೆಯೇ ಎನ್ನುವುದು ಒಂದು ಸವಾಲಿನ ಪ್ರಶ್ನೆ. ●

ತಿರುಪತಿಯ ಲಡ್ಡಿನಲ್ಲಿ ಕಲಬೆರೆಕೆಗಳು.... ಪುಟ 3 ರಿಂದ

ಮನಸ್ಥಿತಿಯಲ್ಲಿ ಇಲ್ಲ ಎಂದು ಕಾಣುತ್ತದೆ. ವೇದ ಘೋಷಗಳ ನಡುವಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದ್ದ ನಟ ಪವನ್ ಕಲ್ಯಾಣ್ ಈ ಕಲಬೆರೆಕೆಗೆ ಒಂದು ವಾರ ಪ್ರಾಯಶ್ಚಿತ್ತ ಮಾಡಿಕೊಳ್ಳುವುದಾಗಿ ಪ್ರಕಟಿಸಿದ್ದಾರೆ. ನಡೆದಿರಬಹುದಾದ ಕ್ರಿಮಿನಲ್ ಕೃತ್ಯವನ್ನು ಬಳಸಿ ಭಾವನಾತ್ಮಕವಾಗಿ ಬಳಸಿಕೊಳ್ಳಲು ಸಕ್ರಿಯವಾಗಿದ್ದಾರೆ. ಅದಕ್ಕೆ ಧಾರ್ಮಿಕತೆಯನ್ನು, ಅನ್ಯ ಧರ್ಮೀಯರ ಕುತಂತ್ರ ಎನ್ನುವುದನ್ನು ಬಿಂಬಿಸಿ ಅದರ ದುರ್ಬಳಕೆಗೆ ನಾಯ್ಡು, ಕಲ್ಯಾಣ ಬಳಗ, ಬಿಜೆಪಿ ನಾಯಕರು ಇಳಿಯುತ್ತಿದ್ದಾರೆ. ಕೇಂದ್ರ ಸಚಿವ ಪ್ರಹ್ಲಾದ ಜೋಷಿ ಒಳಗೊಂಡು ಸಂಘಪರಿವಾರ, ಸುಗುಣೇಂದ್ರ ತೀರ್ಥರಂತಹ ಮಠಾಧೀಶರು ದೇವಸ್ಥಾನ ಗಳನ್ನು ಸರ್ಕಾರದ ಸುಪರ್ದಿನಿಂದ 'ಹಿಂದುಗಳ' ಕೇಗೆ ಅಂದರೆ ಶಾಸಗಿಯವರಿಗೆ ಕೊಟ್ಟು ಬಿಡಿ 'ಎಂಬ ಧಾರ್ಮಿಕ ಉದ್ಯಮದ ಅಜೆಂಡಾವನ್ನು ಮುಂದೆ ಒತ್ತಿದ್ದಾರೆ.

ಈ ಆರೋಪವನ್ನು ಜಗನ್ ಮೋಹನ ರೆಡ್ಡಿ, ಆ ಪಕ್ಷದ ನಾಯಕರು ಅಲ್ಲಗೆಳೆದಿದ್ದಾರೆ.

ವೈಎಸ್‌ಆರ್ ಕಾಂಗ್ರೆಸ್ ನ ನಾಯಕರು ಪ್ರಯೋಗಾಲಯದ ವರದಿಯ ಸತ್ಯಾಸತ್ಯತೆಯನ್ನೇ ಪ್ರಶ್ನಿಸಿದ್ದಾರೆ! ಅದು ಬಿಜೆಪಿ ಎನ್.ಡಿ.ಎ. ಸರ್ಕಾರದ ಅಡಿಯಲ್ಲಿರುವ ಕೇಂದ್ರದ ಪ್ರಯೋಗಾಲಯದ ವರದಿ, ಅದರಲ್ಲಿ ದುರುದ್ದೇಶವೇ ಇದೆ ಎಂದು ಆರೋಪಿಸಿದ್ದಾರೆ.

ವಿಷಯ ಇಲ್ಲಿ ತುಪ್ಪದ ಪೂರೈಕೆಯಲ್ಲಿ ಕಲಬೆರೆಕೆಯ ಆರೋಪ ಬಂದಿದೆ. ಹಿಂದೆ ನಂದಿನಿ ತುಪ್ಪ ದುಬಾರಿ ಎಂದು ತಮಿಳುನಾಡಿನ ಉದ್ಯಮಿಯ ತುಪ್ಪ ಕಡಿಮೆ ಬೆಲೆಗೆ ಸಿಗುತ್ತದೆ ಎಂದು ಅಲ್ಲಿಂದ ತೆಗೆದು ಕೊಳ್ಳಲಾಗಿತ್ತು. ಚಂದ್ರಬಾಬು ನಾಯ್ಡು ಸರ್ಕಾರ ಮತ್ತೇ ನಂದಿನಿ ತುಪ್ಪವನ್ನೇ ಬಳಸಲು ಸೂಚಿಸಿದೆ. ಮೇಲಾಗಿ ಇದರ ಎಲ್ಲಾ ವ್ಯವಹಾರಗಳು ನಡೆಯುವುದು ದೇವಸ್ಥಾನದ ಮಂಡಳಿಯ ಆಡಳಿತದಲ್ಲಿ.

ಈಗ ತನಿಖೆಗೆ ಒಳಪಡಿಸಬೇಕಾದ್ದು ಉದ್ಯಮಿಯನ್ನು. ಹಾಗೇ ಈ ಕಂಟ್ರಾಕ್ಟ್ ವ್ಯವಹಾರದಲ್ಲಿ ಏನಾದರೂ ಭ್ರಷ್ಟಾಚಾರ ನಡೆದಿದೆಯೇ ಎಂದು ತನಿಖೆ ನಡೆಸಿ ತಪ್ಪಿಸ್ಥರ ಮೇಲೆ ಕ್ರಮ ಜರುಗಿಸಬೇಕು. ಇದೇ ಮುಖ್ಯ. ಅದರ ಬದಲು ರಾಜಕೀಯ ರಾಡಿ ಎಬ್ಬಿಸುವುದಾಗಲೀ, ಅದನ್ನೇ ನೆಪವಾಗಿರಿಸಿ ಧಾರ್ಮಿಕ ಭಾವನೆಗಳನ್ನು ಎತ್ತಿ ಕಟ್ಟುವುದಾಗಲೀ ಕೂಡದು. ಜನರಿಗೆ ಸತ್ಯ ತಿಳಿಯಬೇಕು. ಶುದ್ಧ ವಸ್ತುಗಳನ್ನು ಬಳಸಿಕೊಂಡು ಪ್ರಸಾದ ಪೂರೈಕೆ ಆಗಬೇಕು.

ಒಂದು ಅಂಶವನ್ನು ಗಮನಿಸಬೇಕಾದ್ದು, ತೆಲುಗು ಭಾಷಿಕ ರಾಜ್ಯಗಳಾದ ಪ್ರಾದೇಶಿಕ ಪಕ್ಷಗಳ ಪ್ರಾಬಲ್ಯ ಇರುವ ಆಂಧ್ರ ಮತ್ತು ತೆಲಂಗಾಣಗಳನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಬಿಜೆಪಿ ಉತ್ಸುಕವಾಗಿದೆ. ಅದರಲ್ಲೂ ನೆಲಮೂಲದಲ್ಲಿ ಆರ್.ಎಸ್.ಎಸ್. ಇಡಿಯಾಗಿ ತನ್ನ ಪರಿವಾರವನ್ನು ಯುದ್ಧೋಪಾಧಿಯಲ್ಲಿ ಕಾರ್ಯಾಚರಣೆಗೆ ಇಳಿಸಿದೆ. ಅದರ ಅಪಾಯದ ನೆರಳು ಎದ್ದು ತೋರಿಸುತ್ತಿದೆ. ಈ ಬಾರಿ ಆಂದ್ರ ವಿಧಾನಸಭೆಯಲ್ಲಿ ಸ್ಪರ್ದಿಸಿದ್ದ 10 ರಲ್ಲಿ 8 ಶಾಸಕರನ್ನು ಹೊಂದಿರುವ ಬಿಜೆಪಿ ಪಕ್ಷ ತನ್ನ ಉತ್ತಮ ಹಾಜರಿಯನ್ನು ತೋರಿಸಿದೆ. ಅದನ್ನು ಮತ್ತಷ್ಟು ವಿಸ್ತರಿಸಲು ಅತಿ ಧಾರ್ಮಿಕತೆ ಬೆಳವಣಿಗೆ ಮತ್ತು ಮತೀಯ ವಿಭಜನೆಯನ್ನು ಆಧರಿಸಿದೆ.

ತಿರುಪತಿ ಲಡ್ಡು ಪ್ರಕರಣದಲ್ಲಿ ಪ್ರತಿಕ್ರಿಯಿಸುವಾಗ
ಇವೆಲ್ಲ ಸಂಗತಿಗಳನ್ನು ಜನತೆ
ಗಮನದಲ್ಲಿರಿಸಬೇಕು. ●

ಹೈದರಾಬಾದ್ ವಿಮೋಚನೆ: ನಿಜವಾಗಿ ನಡೆದಿದ್ದೇನು.... ಪುಟ 4 ರಿಂದ

ಪ್ರದೇಶವನ್ನು ಹೊರತುಪಡಿಸಿ, ತೆಲಂಗಾಣದಲ್ಲಿ ಅಂತಹ ಯಾವುದೇ ಕೋಮು ಘರ್ಷಣೆಗಳು ನಡೆಯಲಿಲ್ಲ.

ನಿಜಾಂ ಜೊತೆ 'ಯಥಾಸ್ಥಿತಿ ಒಪ್ಪಂದ'ಕ್ಕೆ ಪಟೇಲರ ಸಹಿ

ಆಗಸ್ಟ್ 15, 1947 ರಂದು ಭಾರತ ದೇಶಕ್ಕೆ ಸ್ವಾತಂತ್ರ್ಯ ಬಂತು. ಒಂದು ಕಡೆ ಭಾರತ ದೇಶ ಮತ್ತೊಂದು ಕಡೆ ಪಾಕಿಸ್ತಾನ ಸ್ವತಂತ್ರ ದೇಶಗಳಾಗಿ ಹೊರಹೊಮ್ಮಿದವು. ಡಿಸೆಂಬರ್ 29 ರಂದು ಗೃಹ ಸಚಿವ ಸರ್ದಾರ್ ಪಟೇಲ್ ಅವರು ನಿಜಾಮ್ ರಾಜ ಮೀರ್ ಉಸ್ಮಾನ್ ಅಲಿ ಖಾನ್ ಜೊತೆ 'ಯಥಾಸ್ಥಿತಿ ಒಪ್ಪಂದ'ಕ್ಕೆ ಸಹಿ ಹಾಕಿದರು. ಇದರ ಪ್ರಕಾರ, ಭಾರತ ದೇಶ ಮತ್ತು ಹೈದರಾಬಾದ್ ಸಂಸ್ಥಾನವು ಸ್ವತಂತ್ರ ಮಿತ್ರರಾಷ್ಟ್ರಗಳಾಗಿ ಕಾರ್ಯನಿರ್ವಹಿಸುತ್ತವೆ. ಅಕ್ಟೋಬರ್ 1946 ರಲ್ಲಿ ಪ್ರಾರಂಭವಾದ ಸಶಸ್ತ್ರ ರೈತ ಹೋರಾಟವು ಸೆಪ್ಟೆಂಬರ್ 1948 ರ ಹೊತ್ತಿಗೆ ತೀವ್ರಗೊಂಡಿತು. ಇದು ಗೋಲ್ಕೊಂಡ ಕೋಟೆಯನ್ನು ನಡುಗಿಸಿತು. ನಿಜಾಮನ ಸಿಂಹಾಸನ ಕುಸಿಯುವ ಹಂತದಲ್ಲಿತ್ತು. ಇನ್ನು ವಿಳಂಬವಾದರೆ ನಿಜಾಮನ ರಾಜಪ್ರಭುತ್ವ ನಾಶವಾಗಿ ತೆಲಂಗಾಣ ಕಮ್ಯುನಿಸ್ಟರ ವಶವಾಗುತ್ತದೆ ಎಂಬುದನ್ನು ಗಮನಿಸಿದ ನೆಹರೂ ಸರಕಾರ, ಸೆಪ್ಟೆಂಬರ್ 13ರಂದು ಭಾರತ ಸರ್ಕಾರದ ಸೈನಿಕರನ್ನು ಕಳುಹಿಸಿತು. 17 ರಂದು ಹೈದರಾಬಾದ್ ಸಂಸ್ಥಾನವನ್ನು ಭಾರತೀಯ ಒಕ್ಕೂಟದಲ್ಲಿ ವಿಲೀನಗೊಳಿಸುವುದಾಗಿ ನಿಜಾಮ್ ಘೋಷಿಸಿದರು.

ಪಟೇಲ್ ಮತ್ತು ನಿಜಾಮ್ ಪರಸ್ಪರ ಶುಭಾಶಯಗಳ ವಿನಿಮಯ

ಒಂದು ಕಡೆ ತೆಲಂಗಾಣ ರೈತರು ನರಹಂತಕ ನಿಜಾಮ್ ರಾಜನ ವಿರುದ್ಧ ಸಶಸ್ತ್ರ ಹೋರಾಟ ನಡೆಸುತ್ತಿದ್ದರೆ, ಭಾರತದ ಗೃಹ ಸಚಿವ ಸರ್ದಾರ್ ಪಟೇಲ್ ಮತ್ತು ನಿಜಾಮ್ ರಾಜ ಪರಸ್ಪರ ಶುಭಾಶಯಗಳ ವಿನಿಮಯ ಮಾಡಿಕೊಂಡರು. ನಿಜಾಮರ ರಾಜಪ್ರಭುತ್ವವನ್ನು ತಿರಸ್ಕರಿಸುತ್ತಿದ್ದ ತೆಲಂಗಾಣ ಜನತೆಯ ವಿರುದ್ಧ ಆ ನಿಜಾಮ್ ರಾಜನನ್ನು ಜೈಲಿಗಟ್ಟುವ ಬದಲು 'ರಾಜ್ ಪ್ರಮುಖ್' ಎಂಬ ಬಿರುದನ್ನು ನೆಹರೂ–ಪಟೇಲ್ ಸರ್ಕಾರವು ನೀಡಿತು. ಕ್ರೂರಿಯಾದ ರಜಾಕಾರ್ ನಾಯಕ ಖಾಸಿಂ ರಜ್ವಿಯನ್ನು ಗೃಹ ಸಚಿವ ಸರ್ದಾರ್ ಪಟೇಲ್ ಸಕಲ ಮರ್ಯಾದೆಯಿಂದ ವಿಶೇಷ ವಿಮಾನದಲ್ಲಿ ಪಾಕಿಸ್ತಾನಕ್ಕೆ ಕಳುಹಿಸಿದರು. ಗಲ್ಲಿಗೇರಿಸಬೇಕಾದ ರಾಜನಿಗೇ ಅಧಿಕಾರ ಕೊಟ್ಟು ಗೌರವಿಸುವುದರ ಜೊತೆಗೆ, ಖಾಸಿಂ ರಜ್ವಿ ಪ್ರಾಣವನ್ನೂ ಕಾಪಾಡಿದರು. ಅದು ಅಲ್ಲಿಗೇ ನಿಲ್ಲಲಿಲ್ಲ. ಮೀರ್ ಉಸ್ಮಾನ್ ಅಲಿಖಾನ್‌ಗೆ ನಷ್ಟ ಪರಿಹಾರ, ರಾಜಮನೆತನದ ಭತ್ಯೆಗಳ ಹೆಸರಿನಲ್ಲಿ ವರ್ಷಕ್ಕೆ ಒಂದು ಕೋಟಿ ರೂಪಾಯಿಗಳನ್ನು ಕೊಡುವ ಒಪ್ಪಂದವಾಯಿತು.

ಭಾರತೀಯ ಸೈನಿಕರಿಂದ 2,500 ರೈತರು ಬಲಿಯಾದರು

ಗೃಹ ಸಚಿವರು ಹೈದರಾಬಾದ್ ಸಂಸ್ಥಾನಕ್ಕೆ ಕಳುಹಿಸಿದ್ದ ಭಾರತ ಸರ್ಕಾರದ ಸೈನಿಕರು, ವಿಲೀನದ ನಂತರ ರೈತರ ಹೋರಾಟವನ್ನು ಹತ್ತಿಕ್ಕಲು ಮುಂದಾದರು. ಹೋರಾಟದ ಸಮಯದಲ್ಲಿ ರೈತರು ಗಳಿಸಿದ್ದ ಎಲ್ಲವನ್ನೂ ನಿಷ್ಕ್ರಿಯಗೊಳಿಸಲು ಸೈನಿಕರು ಮುಂದಾದರು. ಭೂಮಿಗಾಗಿ ಮತ್ತು ಕಷ್ಟಪಟ್ಟು ಗಳಿಸಿದ ಹಕ್ಕುಗಳ ರಕ್ಷಣೆಗಾಗಿ 1951ರ ವರೆಗೂ ಸಶಸ್ತ್ರ ಹೋರಾಟ ಮುಂದುವರಿಯಿತು. ನಿಜಾಮರ ಆಳ್ವಿಕೆಯಲ್ಲಿ 1,500 ರೈತರು ಸಶಸ್ತ್ರ ಹೋರಾಟದಲ್ಲಿ ಪ್ರಾಣ ಕಳೆದುಕೊಂಡರೆ, ಭಾರತೀಯ ಸೈನಿಕರ ಕೈಯಲ್ಲಿ 2,500 ರೈತರು ಬಲಿಯಾದರು.

ಇತಿಹಾಸವನ್ನು ತಿರುಚುವ ಬಿಜೆಪಿ–ಆರ್‌ಎಸ್‌ಎಸ್

ಈ ಇತಿಹಾಸವನ್ನು ಬಿಜೆಪಿ–ಆರ್‌ಎಸ್‌ಎಸ್ ನಾಯಕರು ತಿರುಚುತ್ತಿದ್ದಾರೆ. ಕಾಂಗ್ರೆಸ್ ನಾಯಕರಾಗಿದ್ದ ಸರ್ದಾರ್ ಪಟೇಲ್ ಅವರನ್ನು ಹಿಂದೂಗಳ ಪ್ರತಿನಿಧಿ ಎಂದು ಬಿಂಬಿಸುತ್ತಿದ್ದಾರೆ. ನಿಜಾಮ್ ರಾಜನ ವಿರುದ್ಧ ಯುದ್ಧ ಮಾಡಿ ರಾಜ್ಯವನ್ನು ವಶಪಡಿಸಿಕೊಂಡರು ಎಂದು ನಂಬಿಸತೊಡಗಿದ್ದಾರೆ. ಮತ್ತೊಂದೆಡೆ, ಅಂದಿನ ನೆಹರೂ ಸರ್ಕಾರವೇ ನಿಜಾಮ್ ರಾಜನ ಮೇಲೆ ಯುದ್ಧ ಮಾಡಿ ಹೈದಾರಾಬಾದ್ ರಾಜ್ಯವನ್ನು ಭಾರತ ದೇಶದಲ್ಲಿ ವಿಲೀನ ಮಾಡಿದಂತೆ ಕಾಂಗ್ರೆಸ್ ನಾಯಕರು ಹೇಳಿಕೊಳ್ಳುತ್ತಾರೆ. ಜಮ್ಮು ಕಾಶ್ಮೀರವನ್ನು ಭಾರತದಲ್ಲಿ ವಿಲೀನಗೊಳಿಸಿದ ನೆಹರೂ–ಪಟೇಲ್ ಸರ್ಕಾರವೇ ನಿಜಾಮ್ ರಾಜನೊಂದಿಗೆ ಯಥಾಸ್ಥಿತಿ ಒಪ್ಪಂದ ಮಾಡಿಕೊಂಡ ವಿಷಯವನ್ನು ಬಿಜೆಪಿ ಮತ್ತು ಕಾಂಗ್ರೆಸ್ ಎರಡೂ ಮರೆಮಾಚುತ್ತಿವೆ.

ತೆಲಂಗಾಣದ ಸಶಸ್ತ್ರ ರೈತ ಹೋರಾಟವಿಲ್ಲದಿದ್ದರೆ, ವಿಲೀನವಾಗಲೀ ಅಥವಾ ಸೆಪ್ಟೆಂಬರ್ 17ರ ವಿಶೇಷತೆಯಾಗಲೀ ಇರುತ್ತಿರಲಿಲ್ಲ. ಇದು ಕಮ್ಯುನಿಸ್ಟರ ನಾಯಕತ್ವದಲ್ಲಿ ನಡೆದ ರೈತರ ಹೋರಾಟದ ಫಲ. ಈ ಇಡೀ ಹೋರಾಟದಲ್ಲಿ ಯಾವುದೇ ಸಂಬಂಧವಿಲ್ಲದ ಆರ್‌ಎಸ್‌ಎಸ್, ಆಗಿನ ಜಮ್ಮು ಕಾಶ್ಮೀರ ರಾಜ್ಯವನ್ನು ಭಾರತದೊಂದಿಗೆ ವಿಲೀನಗೊಳಿಸುವುದನ್ನು ವಿರೋಧಿಸಿತ್ತು ಎಂಬುದನ್ನು ಮರೆಯಲಾಗದು. ಕಾಶ್ಮೀರ ಒಂದು ಸ್ವತಂತ್ರ ರಾಜ್ಯವಾಗಿಯೇ ಉಳಿಯಬೇಕು ಎಂದು ಹೇಳಿತ್ತು. ಅಂತಹ ಆರೆಸ್ಸೆಸ್ ಮತ್ತು ಅದರ ರಾಜಕೀಯ ವಿಭಾಗವಾದ ಬಿಜೆಪಿ ಈಗ ತೆಲಂಗಾಣದ ಇತಿಹಾಸವನ್ನು ಮತ್ತು ಜಮ್ಮು ಕಾಶ್ಮೀರದ ಇತಿಹಾಸವನ್ನು ತಿರುಚುತ್ತಿದೆ. ಈ ಮೂಲಕ ಹೊಸ ಪೀಳಿಗೆಯನ್ನು ದಾರಿ ತಪ್ಪಿಸುವ ಪ್ರಯತ್ನ ಮಾಡುತ್ತಿದ್ದಾರೆ. ಪ್ರತಿಯೊಂದಕ್ಕೂ ಧರ್ಮದ ಬಣ್ಣ ಹಚ್ಚುತ್ತಿದ್ದಾರೆ. ಅಧಿಕಾರದ ದಾಹ ಮತ್ತು ಸ್ವಾರ್ಥ ರಾಜಕೀಯ ಹಿತಾಸಕ್ತಿಗಾಗಿಯೇ ಹೊರತು ಇತಿಹಾಸವನ್ನು ಇತಿಹಾಸವನ್ನಾಗಿ ನೋಡಲು ಅವರು ಎಂದಿಗೂ ಸಿದ್ಧರಿಲ್ಲ. ●

'ಒಂದು ರಾಷ್ಟ್ರ–ಒಂದು ಚುನಾವಣೆ' ದೇಶದ ಒಕ್ಕೂಟ ಸ್ವರೂಪಕ್ಕೆ ದಕ್ಕೆಯಾಗುತ್ತದೆ

ಬಿಜೆಪಿ ಕೆಲವು ವರ್ಷಗಳಿಂದ ಹೇಳುತ್ತಾ ಬಂದಿದ್ದ 'ಒಂದು ರಾಷ್ಟ್ರ–ಒಂದು ಚುನಾವಣೆ' ಪ್ರತಿಪಾದನೆ ಮಾಡುತ್ತಾ ಬಂದಿದೆ. ಈಗ ನರೇಂದ್ರ ಮೋದಿ ಸರ್ಕಾರ ಈ ಸಂಬಂಧ ಮತ್ತೊಂದು ಹೆಜ್ಜೆ ಮುಂದಿಟ್ಟಿದೆ. ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರ ನೇತೃತ್ವದ ಸಮಿತಿ ಈ ಸಂಬಂಧ ಕೊಟ್ಟ ವರದಿಯನ್ನು ಕೇಂದ್ರ ಸರ್ಕಾರದ ಮಂತ್ರಿಮಂಡಲ ಔಪಚಾರಿಕವಾಗಿ ಸ್ವೀಕರಿಸುವುದರೊಂದಿಗೆ ಈ ವಿಷಯದ ಕುರಿತಂತೆ ರಾಷ್ಟ್ರವ್ಯಾಪಿ ಚರ್ಚೆ ಪ್ರಾರಂಭವಾಗಿದೆ. 2014 ರಲ್ಲಿ ಮೊದಲ ಬಾರಿಗೆ ಅಧಿಕಾರಕ್ಕೆ ಬಂದ ನಂತರ ಕಳೆದ ದಶಕದಲ್ಲಿ ನರೇಂದ್ರ ಮೋದಿ ಸರ್ಕಾರ ಭಾರತದ ಜನರ ವೈವಿಧ್ಯತೆ ಮತ್ತು ಬಹುಮುಖಿ ಸಂಸ್ಕೃತಿಯ ಮೇಲೆ ದಾಳಿ ಪ್ರಾರಂಭಿಸಿತು. ದೇಶದಲ್ಲಿ ಒಂದೇ ಧರ್ಮ ಇರಬೇಕೆಂದು, ಒಂದೇ ರೀತಿಯಾದ ತೆರಿಗೆ ಇರಬೇಕೆಂದು, ಒಂದೇ ರೀತಿಯ ಆಹಾರ ತಿನ್ನಬೇಕೆಂದು, ಒಂದೇ ಸಂಸ್ಕೃತಿ, ಒಂದೇ ಭಾಷೆ ಇರಬೇಕು ಎಂದು ಮಾಡುತ್ತಿರುವ ಪ್ರಚಾರದ ಭಾಗವಾಗಿಯೇ ಈಗ 'ಒಂದು ರಾಷ್ಟ್ರ, ಒಂದು ಚುನಾವಣೆ' ವ್ಯವಸ್ಥೆಯನ್ನು ತರಲು ಹೊರಟಿದೆ. ಒಂದು ರಾಷ್ಟ್ರ, ಒಂದು ಚುನಾವಣೆ ಎಂಬುದು ಪ್ರಜಾಪ್ರಭುತ್ವಕ್ಕೆ, ಸಾಂವಿಧಾನಿಕ ಮೂಲಸೌಕರ್ಯ ಮತ್ತು ದೇಶದ ಒಕ್ಕೂಟ ಸ್ವರೂಪಕ್ಕೆ ದಕ್ಕೆ ಉಂಟಾಗಬಹುದು ಎಂದು ರಾಷ್ಟ್ರೀಯ ಕಾನೂನು ಆಯೋಗವು ಹಲವು ಸಂದೇಹಗಳನ್ನು ಹಂತದಲ್ಲಿ ನಗರಸಭೆಗಳು, ಪುರಸಭೆಗಳು, ಗ್ರಾಮ ಪಂಚಾಯತಿಗಳಿಗೆ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಚುನಾವಣೆಗಳು ನಡೆಯಬೇಕು ಎಂದು ತಿಳಿಸಿದೆ. ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಲೋಕಸಭೆ ಮತ್ತು ವಿಧಾನಸಭೆ ಚುನಾವಣೆ ನಡೆದ 100 ದಿನಗಳಲ್ಲಿ ಪೂರ್ಣಗೊಳಿಸಬೇಕು ಎಂದು ಹೇಳಿದೆ. ರಾಷ್ಟ್ರೀಯ ಚುನಾವಣಾ ಆಯೋಗವು ರಾಜ್ಯ ಚುನಾವಣಾ ಸಂಸ್ಥೆಯೊಂದಿಗೆ ಒಂದೇ 'ಫೋಟೋ ಗುರುತಿನ ಚೀಟಿ'ಯನ್ನು ನೀಡಬೇಕು ಎಂದೂ ಸಮಿತಿ ಹೇಳಿದೆ.

ಸಂವಿಧಾನ ತಿದ್ದುಪಡಿಗಳು

ಒಂದು ರಾಷ್ಟ್ರ, ಒಂದು ಚುನಾವಣೆ ವ್ಯವಸ್ಥೆಯನ್ನು ಅನುಷ್ಠಾನಕ್ಕೆ ತರಲು ಸಂವಿಧಾನಕ್ಕೆ ಕನಿಷ್ಠ 6 ತಿದ್ದುಪಡಿಗಳನ್ನು ತರಬೇಕು ಎಂದು ರಾಮನಾಥ ಕೋವಿಂದ್ ಸಮಿತಿ ಹೇಳಿದೆ. ದೇಶದಲ್ಲಿ ವಿವಿಧ ಚುನಾವಣೆಗಳನ್ನು ನಡೆಸಲು ನಿಯಮಗಳು ಮತ್ತು ಮಾರ್ಗಸೂಚಿಗಳನ್ನು ರೂಪಿಸುವ ಪ್ರಜಾಪ್ರತಿನಿಧಿ ಕಾಯ್ದೆ 1951ಕ್ಕೆ ತಿದ್ದುಪಡಿ ಮಾಡುವುದರ ಜೊತೆಗೆ, ಕನಿಷ್ಠ 6 ಪ್ರಮುಖ ಸಾಂವಿಧಾನಿಕ ತಿದ್ದುಪಡಿಗಳನ್ನು ಮಾಡಬೇಕಾಗಿದೆ. ಲೋಕಸಭೆ ಮತ್ತು ರಾಜ್ಯಸಭೆ ಕಾಲಮಿತಿಯನ್ನು ನಿರ್ಧರಿಸುವ 83ನೇ ವಿಧಿ, ರಾಜ್ಯಗಳ ವಿಧಾನಸಭೆಗಳ ಕಾಲಮಿತಿಯನ್ನು ನಿರ್ಧರಿಸುವ 172ನೇ ವಿಧಿ, ಚುನಾವಣಾ ಆಯೋಗದ ಅಧಿಕಾರಗಳಿಗೆ ಸಂಬಂಧಿಸಿದ 324ನೇ


ಡಿಸೆಂಬರ್ 2022 ರಲ್ಲಿ ಆತಂಕ ವ್ಯಕ್ತಪಡಿಸಿದೆ. ಇದಕ್ಕೆ ರಾಮನಾಥ ಕೋವಿಂದ್ ಸಮಿತಿಯ ವರದಿಯಲ್ಲಿ ಯಾವುದೇ ಸಮಾದಾನಕರ ಉತ್ತರವಿಲ್ಲ. ಏಕಕಾಲಕ್ಕೆ ಚುನಾವಣೆಗಳು ನಡಯಬೇಕೆಂಬ ಶಿಫಾರಸುಗಳನ್ನು ಕೇಂದ್ರ ಮಂತ್ರಿಮಂಡಲ ಅನುಮೋದಿಸಿರುವುನ್ನು ಪ್ರಮುಖ ರಾಜಕೀಯ ಪಕ್ಷಗಳು, ಪ್ರಜಾಪ್ರಭುತ್ವವಾದಿಗಳು, ಜಾತ್ಯತೀತವಾದಿಗಳು ಮತ್ತು ಸಂವಿಧಾನದ ಪರ ಇರುವವರು ತೀವ್ರವಾಗಿ ವಿರೋಧಿಸುತ್ತಿದ್ದಾರೆ.

ರಾಮನಾಥ್ ಕೋವಿಂದ್ ಸಮಿತಿ ಶಿಫಾರಸುಗಳು

'ಒಂದು ರಾಷ್ಟ್ರ, ಒಂದು ಚುನಾವಣೆ'ಗಾಗಿ ನರೇಂದ್ರ ಮೋದಿ ಸರ್ಕಾರ ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ನೇತೃತ್ವದಲ್ಲಿ ಒಂದು ಸಮಿತಿಯನ್ನು ನೇಮಿಸಿತ್ತು. ಈ ಸಮಿತಿಯು 18,000 –ಪುಟಗಳ ವರದಿಯನ್ನು ರಾಷ್ಟ್ರಪತಿಯವರಿಗೆ ಸಲ್ಲಿಸಿದೆ. ದೇಶದಲ್ಲಿರುವ 47 ರಾಜಕೀಯ ಪಕ್ಷಗಳಲ್ಲಿ 32 ಪಕ್ಷಗಳು ಒಂದು ರಾಷ್ಟ್ರ, ಒಂದು ಚುನಾವಣೆಯ ಪರವಾಗಿವೆ ಎಂದು ಆ ವರದಿ ಹೇಳಿದೆ. 2029 ರ ಹೊತ್ತಿಗೆ ಸಂವಿಧಾನದ 5 ಆರ್ಟಿಕಲ್ಸ್ ಗಳನ್ನು ತಿದ್ದುಪಡಿ ಮಾಡಿ ಏಕಕಾಲಕ್ಕೆ ಚುನಾವಣೆಗೆ ಸಿದ್ದತೆ ಮಾಡಿಕೊಳ್ಳಬಹುದುಎಂದು ಸಮಿತಿ ತಿಳಿಸಿದೆ. ಏಕಕಾಲಕ್ಕೆ ಚುನಾವಣೆ ಕುರಿತು ಏಳು ದೇಶಗಳಲ್ಲಿ ಅಧ್ಯಯನ ಮಾಡಿದ್ದೇವೆ ಎಂದು ಅದು ಉಲ್ಲೇಖಿಸಿದೆ. ಆದರೆ ಸ್ವೀಡನ್, ಜರ್ಮನಿ ಮತ್ತು ಬೆಲ್ಜಿಯಂನಂತಹ ದೇಶಗಳಲ್ಲಿ ವ್ಯವಸ್ಥಿತವಾಗಿ ಇರುವ ಅನುಪಾತದ ಪ್ರಾತಿನಿಧ್ಯ ನೀತಿಯನ್ನು ಸಮಿತಿ ಉಲ್ಲೇಖಿಸಿಲ್ಲ. ಕೋವಿಂದ್ ಸಮಿತಿ 10 ಪ್ರಮುಖ ಶಿಫಾರಸುಗಳನ್ನು ಮಾಡಿದೆ. ಮೊದಲ ಹಂತದಲ್ಲಿ, ಲೋಕಸಭೆ ಮತ್ತು ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆಗಳನ್ನು ನಡೆಯಬೇಕು, ಎರಡನೇ ವಿಧಿಯನ್ನು ತಿದ್ದುಪಡಿ ಮಾಡಬೇಕು. ಇದಲ್ಲದೆ, ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದ ಆರ್ಟಿಕಲ್ 243–ಕೆ, 243–ಜೆಡ್ ಎ ಗಳನ್ನು ಕೂಡಾ ತಿದ್ದುಪಡಿ ಮಾಡಬೇಕಾಗುತ್ತದೆ. ಇವೆಲ್ಲವೂ ನಡೆಯಬೇಕೆಂದರೆ, ಸಂವಿಧಾನ ತಿದ್ದುಪಡಿಗಳಿಗೆ ರಾಜ್ಯಸಭೆ ಮತ್ತು ಲೋಕಸಭೆಯಲ್ಲಿ ಮೂರನೇ ಎರಡರಷ್ಟು ಬಹುಮತದಿಂದ ಅನುಮೋದನೆಯಾಬೇಕು. ಪ್ರಸ್ತುತ ಎರಡೂ ಮನೆಗಳಲ್ಲಿ ಬಿಜೆಪಿಗೆ ಇರುವ ಬಲದಿಂದ ಇದು ಸಾಧ್ಯವಿಲ್ಲ. ಇತರ ಪಕ್ಷಗಳ ಬೆಂಬಲವನ್ನು ಪಡೆಯಬೇಕಾಗುತ್ತದೆ. ಇದಲ್ಲದೆ, ಸ್ಥಳೀಯ ಸಂಸ್ಥೆಗಳ ಸಂವಿಧಾನ ತಿದ್ದುಪಡಿಗಳಿಗೆ ಆಯಾ ರಾಜ್ಯಗಳ ವಿಧಾನಸಭೆಗಳಲ್ಲಿ ಕೂಡಾ ಅನುಮೋದಿಸಬೇಕು.

ನರೇಂದ್ರ ಮೋದಿ ಸರ್ಕಾರದ ವಾದಗಳು

ಒಂದು ರಾಷ್ಟ್ರ ಒಂದು ಚುನಾವಣೆ ಕುರಿತು 2024 ರ ಚುನಾವಣೆಗೂ ಮುಂಚಿತವಾಗಿ ಕೇಂದ್ರವು ಹೇಳಿತ್ತು ಎಂದು, 2047 ರ ಹೊತ್ತಿಗೆ ಭಾರತ ದೇಶವನ್ನು 'ವಿಕಸಿತ್ ಭಾರತ ದೇಶ"ವನ್ನಾಗಿ ಅಭಿವೃದ್ಧಿಪಡಿಸಲು ಕೇಂದ್ರ ಪ್ರಯತ್ನಿಸುತ್ತಿದೆ ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ. ನರೇಂದ್ರ ಮೋದಿ 3.0 ರ ಆಡಳಿತದ ಅವಧಿಯಲ್ಲೇ ಏಕಕಾಲದಲ್ಲಿ ಚುನಾವಣೆ ಅನುಷ್ಠಾನಕ್ಕೆ ತರುತ್ತೇವೆ ಎಂದು ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ಲೋಕಸಭೆಗೆ ಮತ್ತು ವಿಧಾನಸಭೆಗಳಿಗೆ ಒಂದೇ ಬಾರಿ ಚುನಾವಣೆ ನಡೆದರೆ, ಅದು ಸಾರ್ವಜನಿಕ ನಿಧಿಯ ವೆಚ್ಚವನ್ನು ಕಡಿಮೆ ಮಾಡುತ್ತದೆ, ಸರ್ಕಾರ ತನ್ನ ಗಮನವನ್ನು ಅಭಿವೃದ್ಧಿಯ ಮೇಲೆ ಕೇಂದ್ರೀಕರಿಸುತ್ತದೆ ಮತ್ತು ಶಾಂತಿ ಸುವ್ಯವಸ್ಥೆಗಾಗಿನ ಭದ್ರತೆಯ ಸಮಸ್ಯೆಗಳನ್ನು ಕಡಿಮೆ ಮಾಡುತ್ತದೆ ಎಂದು ಅವರು ವಾದ ಮಾಡುತ್ತಿದ್ದಾರೆ. 2024–25ರಲ್ಲಿ,



ರಾಜಕೀಯ ಸರ್ವಾಧಿಕಾರದ ಸಲುವಾಗಿ 'ಒಂದು ರಾಷ್ಟ್ರ, ಒಂದು ಚುನಾವಣೆ' ವ್ಯವಸ್ಥೆಯನ್ನು ನರೇಂದ್ರ ಮೋದಿ ಸರ್ಕಾರ ಮತ್ತು ಬಿಜೆಪಿ ಪ್ರತಿಪಾದಿಸುತ್ತಿವೆ. ಸಮಕಾಲೀನ ಭಾರತೀಯರಲ್ಲಿನ ಪ್ರಾದೇಶಿಕ ಆಕಾಂಕ್ಷೆಗಳು ಮತ್ತು ಸಾಮಾಜಿಕ ಆಕಾಂಕ್ಷೆಗಳು ಹೆಚ್ಚಿವೆ. ಪ್ರಾದೇಶಿಕ ಪಕ್ಷಗಳ ಪ್ರಾಧಾನ್ಯತೆ ಹೆಚ್ಚಾಗಿದೆ. ಜನತೆಗೆ ರಾಷ್ಟ್ರೀಯ, ರಾಜ್ಯ ಮಟ್ಟದಲ್ಲಿನ ಹಾಗೂ ಸ್ಥಳೀಯ ಆಕಾಂಕ್ಷೆಗಳು ವಿಭಿನ್ನವಾಗಿವೆ. ಲೋಕಸಭಾ ಚುನಾವಣೆಯಲ್ಲಿ ಜನರ ಆಕಾಂಕ್ಷೆಗಳು ಒಂದು ರೀತಿಯದ್ದಾಗಿದ್ದರೆ, ವಿಧಾನಸಭಾ ಚುನಾವಣೆಯಲ್ಲಿ ಇನ್ನೊಂದು ರೀತಿಯಲ್ಲಿ ಇರಬಹುದು. ಲೋಕಸಭೆ ಮತ್ತು ವಿಧಾನಸಭೆಗಳಿಗೆ ಏಕಕಾಲಕ್ಕೆ ನಡೆಯುವ ಚುನಾವಣೆಗಳು ಜನರ ಆಕಾಂಕ್ಷೆಗಳಿಗೆ ಪ್ರತಿಬಿಂಬವಾಗಿ ಇರುವುದಿಲ್ಲ. ಕೆಲವು ರಾಜ್ಯಗಳಲ್ಲಿ ಲೋಕಸಭಾ ಚುನಾವಣೆಯಲ್ಲಿ ರಾಷ್ಟ್ರೀಯ ಪಕ್ಷಗಳಾದ ಬಿಜೆಪಿ ಅಥವಾ ಕಾಂಗ್ರೆಸ್ ಗೆದ್ದುಕೊಂಡ ನಂತರ ನಡೆದ ವಿಧಾನಸಭೆ ಚುನಾವಣೆಗಳಲ್ಲಿ ಇತರ ಪಕ್ಷಗಳು ಗೆದ್ದುಬಂದ ಸಾಕಷ್ಟು ಉದಾಹರಣೆಗಳಿವೆ. ಒಂದು ರಾಷ್ಟ್ರ–ಒಂದು ಚುನಾವಣೆ ಎಂಬುದು ದೇಶದ ಒಕ್ಕೂಟ ಸ್ವರೂಪಕ್ಕೆ ದಕ್ಕೆಯಾಗುತ್ತದೆ.

ಭಾರತದ ಒಟ್ಟು ದೇಶೀಯ ಉತ್ಪನ್ನವು ನಾಲ್ಕು ಲಕ್ಷ ಕೋಟಿ ಡಾಲರ್ ಗಳನ್ನು ದಾಟಿಹೋಗುತ್ತದೆ ಎಂದೂ, ಜಿಡಿಪಿಯಲ್ಲಿ ಜಪಾನ್ ದೇಶವನ್ನು ಹಿಂದಿಕ್ಕಿ ಅತಿ ಶೀಘ್ರದಲ್ಲಿಯೇ ಮೂರನೇ ದೊಡ್ಡ ಆರ್ಥಿಕ ವ್ಯವಸ್ಥೆಯಾಗಿ ಮಾರ್ಪಡುತ್ತದೆ ಎಂದೂ ಕೊಚ್ಚಿಕೊಳ್ಳುವ ಕೇಂದ್ರ ಸರ್ಕಾರಕ್ಕೆ ಚುನಾವಣೆಯ ವೆಚ್ಚ ಹೊರೆಯಾಗುತ್ತದೆಯೇ?

ಬಹು ಪಕ್ಷಗಳ ವಿಧಾನ–ಸಮ್ಮಿಶ್ರ ರಾಜಕೀಯ

ಭಾರತದಲ್ಲಿ ಸಂಸದೀಯ ಪ್ರಜಾಪ್ರಭುತ್ವ ಪ್ರಾರಂಭವಾದ ನಂತರ, 1952, 1957 ಮತ್ತು 1962 ರ ಚುನಾವಣೆಗಳಲ್ಲಿ ಕೇಂದ್ರದಲ್ಲಿ ಮತ್ತು ಎಲ್ಲಾ ರಾಜ್ಯಗಳಲ್ಲಿಯೂ (1957 ರಲ್ಲಿ ಕೇರಳವನ್ನು ಹೊರತುಪಡಿಸಿ) ಕಾಂಗ್ರೆಸ್ ಪಕ್ಷ ಪ್ರಾಬಲ್ಯ ಸಾಧಿಸುತ್ತಲೇ ಬಂದಿತ್ತು. 1967 ರ ಚುನಾವಣೆಯಲ್ಲಿ, ಕಾಂಗ್ರೆಸ್ 8 ರಾಜ್ಯಗಳಲ್ಲಿ ಸೋತು ಇತರೆ ಪಕ್ಷಗಳು ಅಧಿಕಾರಕ್ಕೆ ಬಂದವು. 1989 ರಿಂದ 2014 ರವರೆಗೆ, ಭಾರತದಲ್ಲಿ ಕೇಂದ್ರದಲ್ಲಿಯೂ, ಹಲವು ರಾಜ್ಯಗಳಲ್ಲಿಯೂ ಸಮ್ಮಿಶ್ರ ಸರ್ಕಾರಗಳು ಮತ್ತು ಸಮ್ಮಿಶ್ರ ರಾಜಕೀಯ ಮುಂದುವರೆಯಿತು. ಭಾರತದಲ್ಲಿನ ಐತಿಹಾಸಿಕ ಪರಿಸ್ಥಿತಿಗಳು ಮತ್ತು ವೈವಿಧ್ಯತೆಯ ದೃಷ್ಟಿಯಿಂದ ಬಹು –ಪಕ್ಷಗಳ ವ್ಯವಸ್ಥೆ ಏರ್ಪಟ್ಟಿದೆ. ದೇಶದಲ್ಲಿ ರಾಷ್ಟ್ರ ಮಟ್ಟದಲ್ಲಿ 7 ಪಕ್ಷಗಳು ರಾಷ್ಟ್ರೀಯ ಪಕ್ಷಗಳಾಗಿದ್ದರೆ, ರಾಜ್ಯಗಳಲ್ಲಿನ ಅನೇಕ ಪಕ್ಷಗಳು ಪ್ರಾದೇಶಿಕ ಮತ್ತು ರಾಜ್ಯ ಪಕ್ಷಗಳಾಗಿವೆ. 1989, 1996 ಮತ್ತು 1998 ರಲ್ಲಿ ರಚನೆಗೊಂಡ ಲೋಕಸಭೆಯನ್ನು ನಂತರ ರದ್ದುಗೊಳಿಸಲಾಯಿತು. ಮುಂದಿನ ದಿನಗಳಲ್ಲಿ ಏಕಕಾಲದಲ್ಲಿ ಚುನಾವಣೆಗಳು ನಡೆದ ನಂತರವೂ ಲೋಕಸಭೆ ಮತ್ತು ವಿಧಾನಸಭೆಗಳು ರದ್ದುಗೊಳ್ಳುವುದಿಲ್ಲ ಎಂಬ ಭರವಸೆ ಏನು? ಮೇ 2024 ರಲ್ಲಿ ಅಧಿಕಾರಕ್ಕೆ ಬಂದ ನರೇಂದ್ರ ಮೋದಿ ಸರ್ಕಾರ ಕೂಡಾ ಸಮ್ಮಿಶ್ರ ಸರ್ಕಾರವೇ ಆಗಿದೆ. ತೆಲುಗು ದೇಶಂ, ಜನತಾದಳ(ಯು) ಮತ್ತು ಇತರೆ ಕೆಲವು ಪಕ್ಷಗಳ ಬೆಂಬಲದ ಮೇಲೆ ಮೋದಿ ಸರ್ಕಾರ ಅವಲಂಬಿಸಿದೆ. ಸಂವಿಧಾನದಲ್ಲಿ 83 ನೇ ನಿಬಂಧನೆಯು ಲೋಕಸಭೆ, 172 ನೇ ನಿಬಂಧನೆಯು ವಿಧಾನಸಭೆಯನ್ನು ಮುಂಚಿತವಾಗಿ ರದ್ದುಗೊಳಿಸುವ ಅವಕಾಶವನ್ನು ಕಲ್ಪಿಸಿದೆ.

ರಾಜಕೀಯ ಸರ್ವಾಧಿಕಾರದ ಸಲುವಾಗಿ

ರಾಜಕೀಯ ಸರ್ವಾಧಿಕಾರದ ಸಲುವಾಗಿ ಒಂದು ರಾಷ್ಟ್ರ, ಒಂದು ಚುನಾವಣೆ ವ್ಯವಸ್ಥೆಯನ್ನು ನರೇಂದ್ರ ಮೋದಿ ಸರ್ಕಾರ ಮತ್ತು ಬಿಜೆಪಿ ಪ್ರತಿಪಾದಿಸುತ್ತಿವೆ. ಕೇಂದ್ರದಲ್ಲಿ ಹಾಗೂ ಎಲ್ಲಾ ರಾಜ್ಯಗಳಲ್ಲಿ ಬಿಜೆಪಿ ಮಾತ್ರ ಅಧಿಕಾರದಲ್ಲಿ ಇರಬೇಕು ಎಂಬ ತಂತ್ರ ಇದರಲ್ಲಿ ಕಾಣುತ್ತಿದೆ. ಈ ಉದ್ದೇಶಕ್ಕಾಗಿ, ಕಳೆದ ಒಂದು ದಶಕದಲ್ಲಿ ಕನಿಷ್ಠ ನೈತಿಕ ಮೌಲ್ಯಗಳನ್ನು ಅನುಸರಿಸದೆ ತ್ರಿಪುರ, ಮಣಿಪುರ, ಗೋವಾ ಮತ್ತು ಮಹಾರಾಷ್ಟ್ರದಂತಹ ರಾಜ್ಯಗಳಲ್ಲಿ ಅನೈತಿಕ ರಾಜಕೀಯ ಮಾಡಿದ್ದಾರೆ. ಇಲ್ಲಿ ಕನಿಷ್ಠ ಮೌಲ್ಯಗಳನ್ನು ಅನುಸರಿಸಲಿಲ್ಲ. ನರೇಂದ್ರ ಮೋದಿ ಮತ್ತು ಅಮಿತ್ ಷಾ ತಮ್ಮ ಪಕ್ಷದ ಪ್ರಾಬಲ್ಯಕ್ಕಾಗಿ ಒಂದು ರಾಷ್ಟ್ರ, ಒಂದು ಚುನಾವಣೆ ತಂತ್ರವನ್ನು ಜಾರಿಗೊಳಿಸುತ್ತಿದ್ದಾರೆ. ದೇಶಾದ್ಯಂತ 'ಡಬಲ್ ಎಂಜಿನ್' ಸರ್ಕಾರಕ್ಕಾಗಿ ಆಶಿಸುತ್ತಿರುವ ಬಿಜೆಪಿ ಈಗ ಏಕಕಾಲಕ್ಕೆ ಚುನಾವಣೆಯನ್ನು ಒಂದು ಅಸ್ತ್ರವನ್ನಾಗಿ ಬಳಸಿಕೊಳ್ಳಬಹುದೆಂದು ಭಾವಿಸುತ್ತಿದೆ. ಭಾರತದಂತಹ ವೈವಿಧ್ಯತೆ ಹಾಗೂ ಬಹುಸಂಸ್ಕೃತಿ ಇರುವ ದೇಶದಲ್ಲಿ ಒಂದು ಚುನಾವಣೆಯ ಮೂಲಕ ರಾಜಕೀಯ ಸರ್ವಾಧಿಕಾರವನ್ನು ಪ್ರಜೆಗಳ ಮೇಲೆ ಹೇರಬೇಕೆಂದು ಭಾವಿಸುತ್ತ, ಸಂಸದೀಯ ಪ್ರಜಾಪ್ರಭುತ್ವಕ್ಕೆ ಅಘಾತ ಉಂಟುಮಾಡಲು ಮುಂದಾಗಿದೆ.

ಒಕ್ಕೂಟ ಸ್ವರೂಪಕ್ಕೆ ವಿರುದ್ಧ

ಭಾರತದ ಸಂವಿಧಾನದಲ್ಲಿನ ಒಂದು ನಿಬಂಧನೆ ಭಾರತ ದೇಶವನ್ನು 'ರಾಜ್ಯಗಳ ಒಕ್ಕೂಟ'ವಾಗಿ ಪರಿಗಣಿಸಿದೆ. ಕೇಂದ್ರದಂತೆ ರಾಜ್ಯಗಳೂ ಬಲಶಾಲಿಯಾಗಿರಬೇಕು ಎಂದು ಸಂವಿಧಾನ ರಚನೆಕಾರರು ಆಶಿಸಿದ್ದಾರೆ. ಬಹು–ಪಕ್ಷ ವಿಧಾನದಲ್ಲಿ ಭಾರತ ದೇಶದಲ್ಲಿ ಕೇಂದ್ರದಲ್ಲಿ ಒಂದು ಪಕ್ಷ ಅಥವಾ ಸಮ್ಮಿಶ್ರ ಪಕ್ಷಗಳು, ರಾಜ್ಯಗಳಲ್ಲಿ ವಿವಿಧ ಪಕ್ಷಗಳು ಅಧಿಕಾರದಲ್ಲಿ ಮುಂದುವರಿಯುವ ಅವಕಾಶವನ್ನು ಸಂವಿಧಾನ ಕಲ್ಪಿಸಿದೆ. ಆದರೆ ಬಿಜೆಪಿ ಒಂದು ರಾಷ್ಟ್ರ, ಒಂದು ಚುನಾವಣೆಯ ಮೂಲಕ ಒಕ್ಕೂಟ ವ್ಯವಸ್ಥೆಯನ್ನು ಹಾಳುಮಾಡಲು

ಪುಟ 15 ಕ್ಕೆ

ಸೀತಾರಾಮ್ ಯೆಚೂರಿ: ವೈವಿಧ್ಯತೆಯಲ್ಲಿ ಏಕತೆಗಾಗಿ ಭಾವನಾತ್ಮಕ ಬದ್ಧತೆಯುಳ್ಳ ಸಂಗಾತಿ

ಬಿ.ವಿ. ರಾಘವುಲು



ಕಾಮ್ರೇಡ್ ಸೀತಾರಾಮ್ ಯೆಚೂರಿ ಅವರು ಇನ್ನು ಮುಂದೆ ನಮ್ಮೊಂದಿಗಿಲ್ಲ ಎಂಬ ಸತ್ಯ ಮತ್ತು ವಾಸ್ತವತೆ'ಯನ್ನು ರಾಜಿ ಮಾಡಿಕೊಳ್ಳುವುದೆಂದರೆ, ಅವರೊಂದಿಗೆ ದೀರ್ಘಕಾಲದ ಸಂಪರ್ಕ ಹೊಂದಿದ್ದ ಸಹೋದ್ಯೋಗಿಗಳು, ಸಂಗಾತಿಗಳು ಮತ್ತು ಸ್ನೇಹಿತರಿಗೆ ತುಂಬಾ ಕಷ್ಟಕರವಾದ ವಿಷಯ. ಹಿಂದುತ್ವದ ಕೋಮುವಾದಿ ಫ್ಯಾಸಿಸ್ಟ್ ಶಕ್ತಿಗಳ ಉಗ್ರ ದಾಳಿಯ ವಿರುದ್ಧ ಒಗ್ಗಟ್ಟಿನ ಭಾರತ ಪರಿಕಲ್ಪನೆ'ಯನ್ನು ಸಂರಕ್ಷಿಸಲು ನಡೆಸುತ್ತಿರುವ ಹೋರಾಟದಲ್ಲಿ ಅವರ ಶಾಶ್ವತ ದೈಹಿಕ ಅನುಪಸ್ಥಿತಿಯು ಸೃಷ್ಟಿಸಿದ ಶೂನ್ಯವನ್ನು; ಹಾಗೂ ನಮ್ಮ ದೇಶ ಪಾಲಿಸಬೇಕಾದ ದೃಷ್ಟಿಯಲ್ಲಿಯೂ; ಆದಾಗ್ಯೂ, ಕೋಮುವಾದದ ವಿರುದ್ಧ ಭವಿಷ್ಯದ ಮುಂದಿನ ಹೋರಾಟದಲ್ಲಿ ಸೀತಾರಾಂ ರವರ ಸ್ಥಾನ ತುಂಬಲು ಕಷ್ಟಕರವಾಗುತ್ತದೆ. ಅವರಿಗಿದ್ದ ಅಚಲ ಬದ್ಧತೆ, ಪ್ರಜಾಪ್ರಭುತ್ವದ ಆದರ್ಶಗಳ ರಕ್ಷಣೆಗೆ ಅವರ ಅಪ್ರತಿಮ ಸಮರ್ಪಣೆ ಮತ್ತು ತುಳಿತಕ್ಕೊಳಗಾದ, ದಮನಕ್ಕೆ ಸಿಕ್ಕ ಮತ್ತು ಶೋಷಣೆಗೊಳಪಟ್ಟವರ ಪರವಾಗಿ ಅವರ ಆಜೀವ ನಿಷ್ಠೆ, ಒಟ್ಟಾರೆಯಾಗಿ ಅವರು ಬಿಟ್ಟುಹೋದ ಪರಂಪರೆಯನ್ನು ಮುಂದುವರಿಸಲು ನಮಗೆ ಸ್ಫೂರ್ತಿ ನೀಡುತ್ತಲೇ ಇರುತ್ತದೆ.

ಸೀತಾರಾಂ ಅತ್ಯಂತ ವಿಶ್ವಮಾನ್ಯ ಮತ್ತು ಅಂತರಾಷ್ಟ್ರೀಯವಾದಿಯಾಗಿ ಜಗತ್ತಿನಾದ್ಯಂತ ವ್ಯಾಪಕವಾಗಿ ಪ್ರಯಾಣಿಸಿ ತಮ್ಮ ಸಹೋದ್ಯೋಗಿಗಳ ಮಧ್ಯೆ ಖ್ಯಾತಿ ಹೊಂದಿದ್ದರು. ಬಹು ಭಾಷೆಗಳನ್ನು ಸುಲಭವಾಗಿ ಮತ್ತು ಚತುರತೆಯಿಂದ ಮಾತನಾಡುತ್ತಿದ್ದರು ಮತ್ತು ಬಹುತೇಕ ಪ್ರತಿಯೊಂದು ವಿಷಯದ ಬಗ್ಗೆ ವಿಶ್ವಕೋಶದ ಜ್ಞಾನವನ್ನು ಹೊಂದಿದ್ದರು, ಅವರು ಉನ್ನತ ಮಟ್ಟದ ಕಮ್ಯುನಿಸ್ಟ್ ಪ್ರಚಾರಕರಾಗಿದ್ದರು. ಆದರೂ, ಅವರು ತೆಲುಗು ಪ್ರಗತಿಪರ ಸಂಸ್ಕೃತಿಯ ಅತ್ಯುನ್ನತ ಉತ್ಪನ್ನವಾಗಿ ಉಳಿದಿದ್ದರು. ಅವರ ಅದಮ್ಯ ಹಾಸ್ಯ, ಬುದ್ಧಿ ಮರುಕಳಿಸುವಿಕೆಯಲ್ಲಿ ಪ್ರತಿಫಲಿಸುತ್ತಿತ್ತು.

ಅವರ ಆರಂಭಿಕ ಜೀವನವು ತೆಲುಗು ಜನರ ರಾಜಕೀಯ ಬೆಳವಣಿಗೆಗಳೊಂದಿಗೆ ಪರೋಕ್ಷವಾಗಿ ಹೆಣೆದುಕೊಂಡಿತ್ತು. 1952ರಲ್ಲಿ ಮದ್ರಾಸ್ ಪ್ರಾಂತ್ಯದ ರಾಜಧಾನಿಯಾಗಿದ್ದ ಚೆನ್ನೈನಲ್ಲಿ ಜನಿಸಿದ ಅವರು ನಂತರ ಆಂಧ್ರ ರಾಜ್ಯ ರಚನೆಯಾದ ನಂತರ ತಮ್ಮ ಅಜ್ಜ, ಹೈಕೋರ್ಟ್ ನ್ಯಾಯಾಧೀಶರೊಂದಿಗೆ ಗುಂಟೂರಿಗೆ ತೆರಳಿದರು. ನಂತರ 1956ರಲ್ಲಿ, ಅವರು ಹೊಸದಾಗಿ ರೂಪುಗೊಂಡ ಭಾಷಾವಾರು ಆಂಧ್ರಪ್ರದೇಶದ ರಾಜಧಾನಿಯಾದ ಹೈದರಾಬಾದ್‌ಗೆ ತೆರಳಿದರು. 1969ರಲ್ಲಿ, ಆಂಧ್ರಪ್ರದೇಶದಲ್ಲಿ ಮತ್ತೊಂದು ರಾಜಕೀಯ ಕ್ರಾಂತಿ-ಪ್ರತ್ಯೇಕ ರಾಜ್ಯಕ್ಕಾಗಿ ತೆಲಂಗಾಣ ಆಂದೋಲನ ಸಂದರ್ಭದಲ್ಲಿ; ಯುವಕ ಯೆಚೂರಿ ಸೀತಾರಾಮ ರಾವ್ ಅವರು ತಮ್ಮ ಅಧ್ಯಯನವನ್ನು ಅಡ್ಡಿಯಿಲ್ಲದೆ ಮುಂದುವರಿಸಲು ಒತ್ತಾಯಪೂರ್ವಕವಾಗಿ ದೆಹಲಿಗೆ ಸ್ಥಳಾಂತರಿಸಬೇಕಾಯಿತು. ಅವರ ಅದ್ಭುತ ಶೈಕ್ಷಣಿಕ ಪಯಣ ಅವರನ್ನು ಪ್ರೆಸಿಡೆಂಟ್ಸ್ ಎಸ್ಟೇಟ್ ಶಾಲೆಯಿಂದ ಸೇಂಟ್ ಸ್ಟೀಫನ್ಸ್ ಕಾಲೇಜಿಗೆ ಕರೆದೊಯ್ದು, ನಂತರ ಜತೆ ಜೆಎನ್‌ಯು' ಗೆ ಕರೆದೊಯ್ದು, ಅಲ್ಲಿ ಅವರು ಕಾಮ್ರೇಡ್ ಸೀತಾರಾಮ್ ಯೆಚೂರಿಯಾದರು. ಆನಂತರ ತಮ್ಮ ಇಡೀ ಜೀವನವನ್ನು ಜನರು, ದೇಶ ಮತ್ತು ಅವರ ಪಕ್ಷವಾದ ಸಿಪಿಐ(ಎಂ) ಗಾಗಿ ಮುಡಿಪಾಗಿಟ್ಟರು.

ದೆಹಲಿ ಅವರ ಪಕ್ಷದ ರಾಜಕೀಯ ಚಟುವಟಿಕೆಯ ಕೇಂದ್ರವಾಗಿದ್ದರೂ, ತೆಲುಗು ಜನರ ರಾಜಕೀಯದೊಂದಿಗಿನ ಅವರ ಸಂಪರ್ಕವು ಎಂದಿಗೂ ಮರೆಯಾಗಲಿಲ್ಲ. ವಾಸ್ತವವಾಗಿ, ಆಂಧ್ರಪ್ರದೇಶದಲ್ಲಿ ತೆಲುಗು ದೇಶಂ ಪಕ್ಷದ (ಟಿಡಿಪಿ) ಉದಯ ಮತ್ತು ರಾಷ್ಟ್ರೀಯ ರಾಜಕೀಯವನ್ನು ರೂಪಿಸುವಲ್ಲಿ ಅವರ ಸಕ್ರಿಯ ಪಾತ್ರವು ಸಿಪಿಐ(ಎಂ) ನ ಕೇಂದ್ರ ಕಾರ್ಯಕಾರಿಣಿಯಲ್ಲಿ, ಅವರ ರಾಷ್ಟ್ರಮಟ್ಟದ ರಾಜಕೀಯ ಸಂಪರ್ಕಕ್ಕೆ ಹೊಸ ರೂಪ ಸಿಕ್ಕಿತು. ಪಕ್ಷದೊಳಗೆ ಅಪಾರವಾಗಿ ಅವರ ಒಳಗೊಳ್ಳುವಿಕೆ ಹೆಚ್ಚಾಗಿ ಹೊಂದಿಕೆಯಾಯಿತು.

1984ರಲ್ಲಿ ಕಾಂಗ್ರೆಸ್ ನೇತೃತ್ವದ ಕೇಂದ್ರ ಸರ್ಕಾರ ಎನ್.ಟಿ. ರಾಮರಾವ್ ಅವರ ಸರ್ಕಾರವನ್ನು ಪತನಗೊಳಿಸಿದಾಗ ಸಿಪಿಐ(ಎಂ) ಪಕ್ಷವು, ದೇಶದಾದ್ಯಂತ ಬೆಂಬಲ ಕ್ರೋಢೀಕರಿಸುವಲ್ಲಿ ಮುಂಚೂಣಿಯಲ್ಲಿತ್ತು. ಎನ್.ಟಿ. ರಾಮರಾವ್ ಅವರು ಬಹುಮತವನ್ನು ಸಾಬೀತುಪಡಿಸಲು, ಎಂ.ಎಲ್.ಎ.ಗಳನ್ನು ದೆಹಲಿಗೆ ಕರೆ ತಂದಿದ್ದರು. ರಾಷ್ಟ್ರಪತಿಗಳ ಮುಂದೆ ಪರೇಡ್ ಮಾಡಲು ದೆಹಲಿಗೆ ಬಂದಿದ್ದ ಶಾಸಕರನ್ನು ವ್ಯವಸ್ಥಿತ ರೀತಿಯಲ್ಲಿ, ಸಂಘಟಿಸುವಲ್ಲಿ ಯುವ ಸೀತಾರಾಂ ಯೆಚೂರಿಯವರು ಕಮ್ಯೂನಿಸ್ಟ್ ಕಾರ್ಯಕರ್ತರಾಗಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಅಂತಿಮ ವಾಗಿ, 1989-90ರಲ್ಲಿ ಸಿಪಿಐ(ಎಂ) ಪ್ರಮುಖ ಪಾತ್ರ ವಹಿಸಿದ್ದ ರಾಷ್ಟ್ರೀಯ ರಂಗ (ನ್ಯಾಷನಲ್ ಫ್ರಂಟ್) ರಚನೆಯಲ್ಲಿ ಕಾಂಗ್ರೆಸ್ ವಿರೋಧಿ ಶಕ್ತಿಗಳನ್ನು ಒಟ್ಟುಗೂಡಿಸುವಲ್ಲಿ ಎನ್.ಟಿ. ರಾಮರಾವ್ ಪ್ರಮುಖ ಪಾತ್ರ ವಹಿಸಿದರು. ನಂತರ, 1996-98ರಲ್ಲಿ ಯುನೈಟೆಡ್ ಫ್ರಂಟ್ ರಚನೆಯ ಸಮಯದಲ್ಲಿ, ಅಂದಿನ ಟಿಡಿಪಿ ಅಧ್ಯಕ್ಷ ಎನ್.ಟಿ.ಆರ್, ರವರು ರಾಷ್ಟ್ರೀಯ ಸಂಚಾಲಕರಾಗಿದ್ದರು, ಸೀತಾರಾಂ ಅವರು ಪಕ್ಷದ ಹಿರಿಯ ನಾಯಕರೊಂದಿಗಿನ ಚರ್ಚೆಯಲ್ಲಿ ಸೀತಾರಂ ಸಕ್ರಿಯ ಪಾತ್ರ ವಹಿಸಿದ್ದರು ಮತ್ತು ಪ್ರಮುಖ ಮಾತುಕತೆಗಳಲ್ಲಿ ಭಾಗವಹಿಸಿದ್ದರು.

ವೈಯಕ್ತಿಕವಾಗಿ, 2004 ರ ಸಾರ್ವತ್ರಿಕ ಚುನಾವಣೆಗಳ ಮೊದಲು ಅವರ ಸಂಧಾನ-ಮಾತುಕತೆ ಕೌಶಲ್ಯವನ್ನು ನೇರವಾಗಿ ವೀಕ್ಷಿಸಲು ನನಗೆ ಅವಕಾಶ ಸಿಕ್ಕಿತು. ಅವರು ಮತ್ತು ನಾನು ದೆಹಲಿಯ ಕೆಲವು ಪ್ರಮುಖ ಕಾಂಗ್ರೆಸ್ ನಾಯಕರೊಂದಿಗೆ ಸಂಧಾನದಲ್ಲಿ ತೊಡಗಿದ್ದೆವು. ಅವರ ವಿಶಿಷ್ಟವಾದ ಮಾತುಕತೆಯ ಶೈಲಿಯು ನನ್ನನ್ನು ಆಕರ್ಷಿಸಿತು. ಹಾಗೆಯೇ, ತುಂಬಾ ತಾಳ್ಮೆಯಿಂದ, ಇಂಚಿಂಚಾಗಿ, ಅಪೇಕ್ಷಿತ ಫಲಿತಾಂಶದ ಕಡೆಗೆ-ಒಪ್ಪಿಕೊಳ್ಳದೆ, ಅಥವಾ ಮುರಿಯದೆ ಹಾಗೆಯೇ ಮುಂದುವರಿಯಿತು.

ಆದಾಗ್ಯೂ, ದೂರದ ದೆಹಲಿಯಲ್ಲಿ ಅವರು ವಾಸಿಸುತ್ತಿದ್ದರೂ, ರಾಷ್ಟ್ರ ಮಟ್ಟದಲ್ಲಿ ಜವಾಬ್ದಾರಿಗಳನ್ನು ನಿರ್ವಹಿಸುತ್ತಿದ್ದರೂ, ಅವರು ಪಕ್ಷ ಮತ್ತು ತೆಲುಗು ರಾಜ್ಯಗಳ ಜನರನ್ನು ಬೆಂಬಲಿಸಲು ಯಾವಾಗಲೂ ಲಭ್ಯವಿರುತ್ತಿದ್ದರು. 2014ರಲ್ಲಿ ರಾಜ್ಯ ಇಬ್ಭಾಗವಾದಾಗ ಸಿಪಿಐ(ಎಂ)ನ ದೃಷ್ಟಿಕೋನವನ್ನು ರಾಷ್ಟ್ರದ ಮುಂದೆ ಸಂಸತ್ತಿನೊಳಗೆ ಮಂಡಿಸುವ ಮೂಲಕ ಪ್ರಮುಖ ಪಾತ್ರ ವಹಿಸಿದ್ದರು. ಜನರ ಹಿತಾಸಕ್ತಿಗೆ ವಿರುದ್ಧವಾಗಿ ಆಂಧ್ರಪ್ರದೇಶವನ್ನು ವಿಭಜಿಸುವ ನಿರ್ಧಾರದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವಿನ 'ಮ್ಯಾಚ್ ಫಿಕ್ಸಿಂಗ್' ಅನ್ನು ಅವರು ಬಹಿರಂಗ ಪಡಿಸಿದರು. ತೆಲುಗಿನ ಮಹಾಕವಿ ಗುರಜಡ ಅಪ್ಪಾರಾವ್ ಅವರ ಪ್ರಸಿದ್ಧ ಕವನವನ್ನು ಉಲ್ಲೇಖಿಸಿದ ಅವರು, “ದೇಶ ಎಂದರೆ ಅದರ ಮಣ್ಣು ಅಥವಾ ನೆಲ ಮಾತ್ರವಲ್ಲ, ದೇಶ ಎಂದರೆ ಅದರಲ್ಲಿನ ಜನರು ಪ್ರಾಮುಖ್ಯರು” ಎಂದು ಅವರು ಉಭಯ ಪ್ರದೇಶಗಳಲ್ಲಿನ ಜನರಿಗೆ ಹಾನಿ ಮಾಡುವ ಇಂತಹ ಕಠಿಣ ನಿರ್ಧಾರದ ಹಿಂದಿನ ದುರುದ್ದೇಶವನ್ನು ಪ್ರಶ್ನಿಸಿದರು. ಅವರು ಕಾಂಗ್ರೆಸ್‌ಗೆ ಎಚ್ಚರಿಕೆ ನೀಡಿದರು, “ನೀವು ಎರಡು ಸ್ಟೂಲ್"ಗಳಲ್ಲಿ ಕುಳಿತುಕೊಳ್ಳಲು ಪ್ರಯತ್ನಿಸುತ್ತಿದ್ದೀರಿ; ನೀವು ಎರಡರ ನಡುವೆ ಬೀಳುತ್ತೀರಿ." ಎಂದಿದ್ದರು. 2014ರ ಚುನಾವಣೆಯಲ್ಲಿ ಆಂಧ್ರಪ್ರದೇಶ ಮತ್ತು ತೆಲಂಗಾಣ ಎರಡು ರಾಜ್ಯಗಳಲ್ಲಿಯೂ ಕಾಂಗ್ರೆಸ್ ಮುಗ್ಗರಿಸಿ, ಸೋಲನ್ನು ಅನುಭವಿಸಿತು. ಯಚೂರಿಯವರ ಎಚ್ಚರಿಕೆಯ ಮಾತುಗಳು ನಿಜವಾಯಿತು.

ಜುಲೈ 28, 2016 ರಂದು, ರಾಜ್ಯಸಭೆಯಲ್ಲಿ ಆಂಧ್ರ ಪ್ರದೇಶ ಮರು ಸಂಘಟನೆ ಕಾಯ್ದೆಯ ಅನುಷ್ಠಾನದ ಸ್ಥಿತಿಗತಿ ಮತ್ತು ಆಂಧ್ರಪ್ರದೇಶಕ್ಕೆ ಸಂಬಂಧಿಸಿದಂತೆ ಫೆಬ್ರವರಿ 20, 2014 ರಂದು ಸರ್ಕಾರವು ಸದನಕ್ಕೆ ನೀಡಿದ ಭರವಸೆಗಳ ಕುರಿತು ಅಲ್ಪಾವಧಿಯ ಚರ್ಚೆಯನ್ನು ನಡೆಸಲಾಯಿತು. ಮಾತೃಭಾಷೆ ತೆಲುಗಿನಲ್ಲಿ ಮಾತನಾಡಿದ ಅವರು, ವಿಭಜನೆಯ ಸಂದರ್ಭದಲ್ಲಿ ನೀಡಿದ ಭರವಸೆಗಳನ್ನು ಈಡೇರಿಸುವಂತೆ ಒತ್ತಾಯಿಸಿದರು. ಸಿಪಿಐ(ಎಂ) ಸುಮ್ಮನೆ ಕೂರುವುದಿಲ್ಲ ಆದರೆ ಈ ಆಶ್ವಾಸನೆಗಳ ಅನುಷ್ಠಾನಕ್ಕಾಗಿ ಹೋರಾಟ ನಡೆಸಲಿದೆ ಎಂದು ಅವರು ಸದನದಲ್ಲಿ ಘೋಷಿಸಿದರು.

ರಾಷ್ಟ್ರದ ಏಕತೆಗೆ ಕೋಮುವಾದಿ ಶಕ್ತಿಗಳು ಒಡ್ಡುವ ಅಪಾಯಗಳ ಬಗ್ಗೆ ಸೀತಾರಾಂ ಅವರು ಯಾವಾಗಲೂ ತೀವ್ರವಾಗಿ ಚಿಂತಿಸುತ್ತಿದ್ದರು. ಭಾರತವು ತನ್ನ ಪೂರ್ವಜರಿಂದ ಆನುವಂಶಿಕವಾಗಿ ಪಡೆದಿರುವ ಸಂಯೋಜಿತ-ಒಗ್ಗಟ್ಟಿನ ಸಂಸ್ಕೃತಿಯೇ ದೇಶವು ಐಕ್ಯವಾಗಿರಲು ಏಕೈಕ ಭರವಸೆ ಎಂದು ಅವರು ದೃಢವಾಗಿ ನಂಬಿದ್ದರು. ಭಾರತದ ಅನನ್ಯತೆಯ ಮೂಲಾಧಾರವಾಗಿ 'ವಿವಿಧತೆಯಲ್ಲಿ ಏಕತೆ' ಅವರ ಭಾವೋದ್ರಿಕ್ತ ಬದ್ಧತೆಯು ಅವರ ದೃಢವಿಶ್ವಾಸದ ಆಳದಿಂದ ಬಂದಿತು.

ಆಗಸ್ಟ್ 10, 2017 ರಂದು ರಾಜ್ಯಸಭೆಯಲ್ಲಿ ಅವರ ವಿದಾಯ ಭಾಷಣವು ಅವರ ವ್ಯಕ್ತಿತ್ವದ ಈ ಅಂಶವನ್ನು ವಿವರಿಸುತ್ತದೆ. ತನ್ನ ಮಗನ ಗುರುತನ್ನು ಹೇಗೆ ವಿವರಿಸಬೇಕು ಎಂಬ ಪ್ರಶ್ನೆಯನ್ನು ಮುಂದಿಡುತ್ತಾ-"ಅವನು ಉತ್ತರ ಭಾರತೀಯನೋ ಅಥವಾ ದಕ್ಷಿಣ ಭಾರತೀಯನೋ, ಮೇಲ್ಜಾತಿಯೋ ಅಥವಾ ಕೆಳಜಾತಿಯೋ, ಹಿಂದೂವೋ ಅಥವಾ ಮುಸಲ್ಮಾನನೋ?"-ಎಂದು ಪ್ರಶ್ನಿಸಿದಾಗ? ನಾನು ಭಾರತೀಯ'.ಎಂಬುದೇ ನನ್ನ ಉತ್ತರ ಎಂದು ಹೆಮ್ಮೆಯಿಂದ ಪ್ರತಿಪಾದಿಸಿದರು. ಅದೇ ಭಾಷಣದಲ್ಲಿ, ಸ್ವಾತಂತ್ರ್ಯ ಹೋರಾಟದ ಘಟನೆಯನ್ನು ಉಲ್ಲೇಖಿಸಿ-1921 ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ನ ಅಹಮದಾಬಾದ್ ಅಧಿವೇಶನದಲ್ಲಿ ಮೌಲಾನಾ ಹಸರತ್ ಮೊಹಾನಿ ಮತ್ತು ಸ್ವಾಮಿ ಕುಮಾರಾನಂದರು ಒಟ್ಟಾಗಿ ಪೂರ್ಣ ಸ್ವಾತಂತ್ರ್ಯದ ಬೇಡಿಕೆಯ ನಿರ್ಣಯವನ್ನು ಮಂಡಿಸಿದಾಗ-ಸೀತಾರಾಂ ಆ ಕ್ಷಣದ ಮಹತ್ವವನ್ನು ಎತ್ತಿ ತೋರಿಸಿದರು. ಮೌಲಾನಾ ಮತ್ತು ಸ್ವಾಮಿ ಒಟ್ಟಾಗಿ ನಿರ್ಣಯವನ್ನು ಮಂಡಿಸಿದರು. ಇದು ಅವರ ವೈವಿಧ್ಯಮಯ ಗುರುತುಗಳನ್ನು ಲೆಕ್ಕಿಸದೆ ಭಾರತೀಯ ಜನರ ಏಕತೆಯನ್ನು ಸಂಕೇತಿಸುತ್ತದೆ ಎಂದರು.

ಸೀತಾರಾಂ ಅವರು ದಕ್ಷಿಣ ಭಾರತದಲ್ಲಿ ಹುಟ್ಟಿ ಉತ್ತರ ಭಾರತದಲ್ಲಿ ನೆಲೆಸಿದ್ದಾರೆ. ಅವರು ಅನೇಕ ಭಾಷೆಗಳನ್ನು ಮಾತನಾಡಬಲ್ಲರು ಮತ್ತು ತೆಲುಗು, ಹಿಂದಿ, ಬಂಗಾಳಿ, ತಮಿಳು ಭಾಷಿಕರಾಗಿ ಸುಲಭವಾಗಿ ಪಾಸಾಗುತ್ತಿದ್ದರು. ಅವರ ಕುಟುಂಬವು ಮಿನಿ ಭಾರತವನ್ನು ಎತ್ತಿ ತೋರುತ್ತದೆ ಮತ್ತು ಪ್ರತಿನಿಧಿಸುತ್ತದೆ. "ವಿವಿಧತೆಯಲ್ಲಿ ಏಕತೆ"ಯ ನಿಜವಾದ ಉದಾಹರಣೆ ಇವರ ಕುಟುಂಬವಾಗಿತ್ತು.

ಅವರು ಯೌವನದಿಂದಲೂ ಅವರ ತಮ್ಮ ಸ್ಥಳೀಯ ರಾಜ್ಯದಿಂದ ದೂರವಿದ್ದರೂ, ಅವರ ತೆಲುಗು ಮಾತನಾಡುವ ಕೌಶಲ್ಯವು ತುಂಬಾ ಉತ್ತಮವಾಗಿ ಮೂಡಿ ಬರುತ್ತಿತ್ತು. ಅವರು ತೆಲುಗು ರಾಜ್ಯಗಳಿಗೆ ಭೇಟಿ ನೀಡಿದಾಗಲೆಲ್ಲಾ ಜನರು ತೆಲುಗಿನಲ್ಲಿ ಮಾತನಾಡುವಂತೆ ಕೇಳುತ್ತಿದ್ದರು. ಕಥೆಗಳು ಮತ್ತು ಉಪಾ ವ್ಯಾಖ್ಯಾನಗಳಿಂದ ಕೂಡಿದ ಅವರ ಭಾಷಣಗಳು ಪ್ರೇಕ್ಷಕರಿಗೆ ಉತ್ಸಾಹ ಮತ್ತು ಜ್ಞಾನವನ್ನು ಅಪಾರ ನೀಡುತ್ತಿತ್ತು. ➚



ಮುನಿರತ್ನರವರ ಶಾಸನಸಭಾ ಸದಸ್ಯತ್ವ ಅಮಾನತುಗೊಳಿಸಿ; ಸಿಪಿಐ(ಎಂ) ಒತ್ತಾಯ

ಮುನಿರತ್ನರವರ ಶಾಸನ ಸಭಾ ಸದಸ್ಯತ್ವ ಅಮಾನತುಗೊಳಿಸಬೇಕು ಮತ್ತು ಅವರ ಮೇಲಿನ ಗಂಭೀರ ಆರೋಪಗಳನ್ನು ನ್ಯಾಯಾಂಗ ತನಿಖೆಗೆ ಒಳಪಡಿಸಬೇಕು ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಒತ್ತಾಯಿಸಿದೆ.

ಶಾಸಕ ಮುನಿರತ್ನರವರು ಮಾಡಿರುವ ಜಾತಿ ಹಾಗೂ ಮಹಿಳಾ ನಿಂದನೆ ಗಂಭೀರ ಸ್ವರೂಪದ್ದಾಗಿದೆ. ಇದಲ್ಲದೆ, ಮತ್ತಷ್ಟು ಗಂಭೀರ ಸ್ವರೂಪದ ಹನಿಟ್ರ್ಯಾಪ್ ಹಾಗು ಆ ಮೂಲಕ ಜೀವ ವಿರೋದಿ ಏಡ್ಸ್ ರೋಗವನ್ನು ಹರಡುವ ದುಷ್ಕೃತ್ಯದ ಆರೋಪಗಳನ್ನು ಹೊತ್ತು ಜೈಲು ಪಾಲಾಗಿದ್ದಾರೆ. ಇದು ಶಾಸನ ಸಭಾ ಸ್ಥಾನಕ್ಕೆ ಮತ್ತು ಅವರು ಶಾಸಕನಾಗಿ ಮಾಡಿದ ಪ್ರತಿಜ್ಞೆಗೆ ತೀವ್ರ ಅಪಮಾನ ಉಂಟು ಮಾಡಿರುವುದನ್ನು ಮತ್ತು ಸಂವಿಧಾನ ವಿರೋಧಿ ನಡೆಯನ್ನು ಎತ್ತಿ ತೋರುತ್ತಿದೆ ಎಂದಿರುವ ಸಿಪಿಐ(ಎಂ), ಶಾಸನ ಸಭೆಯ ಘನತೆಯನ್ನು ಎತ್ತಿ ಹಿಡಿಯಲು ಈ ಕೂಡಲೆ ಅವರ ಶಾಸನಸಭಾ ಸ್ಥಾನವನ್ನು ಅಮಾನತಿನಲ್ಲಿಡಲು ಮತ್ತು ಅವರ ಮೇಲಿನ ಎಲ್ಲ ಪ್ರಕರಣಗಳನ್ನು ನ್ಯಾಯಾಂಗ ಸುಪರ್ಧಿಯ ತನಿಖೆಗೊಳಪಡಿಸಲು ಅಗತ್ಯ ಕ್ರಮ ವಹಿಸುವಂತೆ ಮುಖ್ಯಮಂತ್ರಿ ಸಿದ್ಧರಾಮಯ್ಯರವರನ್ನು ಒತ್ತಾಯಿಸಿದೆ. ಅದೇ ರೀತಿ, ಶಾಸನಸಭೆಯ ಘನತೆಯನ್ನು ಎತ್ತಿ ಹಿಡಿಯಲು ಶಾಸಕ ಮುನಿರತ್ನರ ಅಮಾನತಿಗೆ ಕ್ರಮವಹಿಸುವಂತೆ ವಿಧಾನ ಸಭೆಯ ಅಧ್ಯಕ್ಷರಿಗೂ ಸಿಪಿಐ(ಎಂ) ಮನವಿ ಮಾಡಿದೆ.

➘ ಅವರು ಮಾತನಾಡುವ ಶೈಲಿ ಸರಳವಾಗಿತ್ತು, ಸಾಮಾನ್ಯ ಜನರಿಗೆ ತಲುಪುತ್ತಿತ್ತು ಮತ್ತು ಅವರು ಉತ್ತಮ ಹಾಸ್ಯಪ್ರಜ್ಞೆಯನ್ನು ಹೊಂದಿದ್ದರು. ಅವರು ಕಮ್ಯುನಿಸ್ಟ್ ಸಂಸದೀಯ ಮತ್ತು ಪ್ರಚಾರಕರಲ್ಲಿ ಅತ್ಯಂತ ಶ್ರೇಷ್ಠರಾಗಿದ್ದರು.

ಅವರ ಪೂರ್ವಜರ ಮನೆ ಆಂಧ್ರಪ್ರದೇಶದ ಪೂರ್ವ ಗೋದಾವರಿ ಜಿಲ್ಲೆಯ ಕಾಕಿನಾಡ ಪಟ್ಟಣದಲ್ಲಿದೆ. ಅವರ ತಾಯಿ ಅಲ್ಲಿ ವಾಸಿಸುತ್ತಿದ್ದರು. ಅವರ ತಾಯಿಯ ಚಿಕ್ಕಪ್ಪ, ಆಂಧ್ರಪ್ರದೇಶದ ಮಾಜಿ ಮುಖ್ಯ ಕಾರ್ಯದರ್ಶಿ, ಹೈದರಾಬಾದ್ ನಲ್ಲಿ ವಾಸಿಸುತ್ತಿದ್ದರು. ಸೀತಾರಾಂ ಅವರು ತೆಲುಗು ರಾಜ್ಯಗಳಿಗೆ ಭೇಟಿ ನೀಡಿದಾಗಲೆಲ್ಲಾ, ಅವರು ತಮ್ಮ ಪ್ರವಾಸದಿಂದ ಸ್ವಲ್ಪ ಸಮಯವನ್ನು ವಿರಮಿಸಲು ಕಳೆಯುತ್ತಿದ್ದರು. ಆಗಲಾದರೂ ಮನೆಗೆ ಬಂದು ತಾನು ಮಾಡಿದ ಅಡುಗೆಯನ್ನು ತಿನ್ನಬೇಕೆಂಬುದು ಅವನ ತಾಯಿಯ ಆಸೆಯಾಗಿತ್ತು. ಸೀತಾರಾಂ ಅಮ್ಮನ ಆಸೆಯನ್ನು ಆಗಾಗ ಈಡೇರಿಸಲು ಪ್ರಯತ್ನಿಸಿದ್ದರು. ಇದು ಅವರ ಕೊನೆಯ ಪ್ರಯಾಣದವರೆಗೂ ಮುಂದುವರಿದಿತ್ತು. ಅವರ ಅವಿಶ್ರಾಂತ ಮತ್ತು ಒತ್ತಡದ ಕೆಲಸದ ವೇಳಾಪಟ್ಟಿಯ ನಡುವೆಯೂ, ಸ್ವಲ್ಪ ಮಟ್ಟಿಗೆ ಬಿಡುವು ಮಾಡಿಕೊಂಡು ತಮ್ಮ ಪ್ರೀತಿಪಾತ್ರರಿಗೆ ನೀಡಬಹುದಾದ ಏಕೈಕ ಸಾಂತ್ವನ ಇದಾಗಿತ್ತು.

ಅನು:ನಾಗರಾಜ ನಂಜುಂಡಯ್ಯ

ನ್ಯಾಯಾಧೀಶರು ಸಾಂವಿಧಾನಿಕ ಮೌಲ್ಯವನ್ನು ಎತ್ತಿ ಹಿಡಿಯುವ ಪರಿಭಾಷೆ ಬಳಸಬೇಕು: ಜನವಾದಿ ಮಹಿಳಾ ಸಂಘಟನೆ

ನ್ಯಾಯಾಲಯಗಳು ಸಾಂವಿಧಾನಿಕ ಮೌಲ್ಯಗಳನ್ನು ಎತ್ತಿ ಹಿಡಿಯುವ ಸ್ಥಳ ಎಂದು ಭಾವಿಸಲಾಗುತ್ತಿದೆ. ನ್ಯಾಯಾಧೀಶರು ಸಾಂವಿಧಾನಿಕ ಘನತೆ ಮತ್ತು ಮೌಲ್ಯವನ್ನು ಎತ್ತಿ ಹಿಡಿಯುವ ಪರಿಭಾಷೆ ಬಳಸಬೇಕು. ವಿಶ್ವಮಟ್ಟದಲ್ಲಿ ಭಾರತದ ಸಂವಿಧಾನ ಮತ್ತು ನ್ಯಾಯ ವ್ಯವಸ್ಥೆಗೆ ಬಹುದೊಡ್ಡ ಸ್ಥಾನವಿದೆ. ಆದರೆ ಇತ್ತೀಚಿನ ಹಲವು ವಿದ್ಯಮಾನಗಳು ಈ ನಂಬಿಕೆಯನ್ನು ಹುಸಿಗೊಳಿಸುತ್ತಿವೆ ಮತ್ತು ಇದು ಆಘಾತವನ್ನು ಉಂಟುಮಾಡಿದೆ ಎಂದಿರುವ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ (ಜೆಎಂಎಸ್) ಕರ್ನಾಟಕ ರಾಜ್ಯ ಸಮಿತಿಯು, ಇತ್ತೀಚಿನ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣಗಳ ವಿಚಾರಣೆ, ವಾದ ಪ್ರತಿವಾದಗಳ ಸಂದರ್ಭದಲ್ಲಿ ಮಾನ್ಯ ನ್ಯಾಯಾಧೀಶರು ವ್ಯಕ್ತಪಡಿಸಿದ ಅಭಿಪ್ರಾಯಗಳು ತೀರ ಆಕ್ಷೇಪಾರ್ಹವಾಗಿವೆ ಎಂದಿದೆ.

ನಮ್ಮ ಕಾನೂನಿನ ಪರಿಪಾಲಕರು ಅಂದರೆ ನ್ಯಾಯಾಧೀಶರು, ವಕೀಲರು ಆದಿಯಾಗಿ ಎಲ್ಲರೂ ಅತ್ಯಂತ ಗೌರವಯುತ ಭಾಷೆ, ಪರಿಭಾಷೆ ಬಳಸುತ್ತ, ನಿಷ್ಪಕ್ಷಪಾತ ನ್ಯಾಯ ನೀಡುವ ಪರಂಪರೆ ಇತ್ತು. ಹೀಗಾಗಿ ದೇಶದ ಜನರಿಗೆ ನ್ಯಾಯಾಂಗ ವ್ಯವಸ್ಥೆಯ ಮೇಲೆ ಅಪಾರ ವಿಶ್ವಾಸವಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ನಮ್ಮ ಘನವೆತ್ತ ನ್ಯಾಯಾಧೀಶರು ಅದೆಷ್ಟು ಹಗುರವಾಗಿ ಮಾತಾಡಿದ್ದಾರೆಂದರೆ, ಇದನ್ನು ನೋಡಿ ದೇಶವೇ ತಲೆ ತಗ್ಗಿಸುವಂತಾಗಿದೆ ಎಂದು ಜೆಎಂಎಸ್ ಅಧ್ಯಕ್ಷೆ ಮೀನಾಕ್ಷಿ ಬಾಳಿ ಮತ್ತು ಪ್ರಧಾನ ಕಾರ್ಯದರ್ಶಿ ದೇವಿ ಹೇಳಿದ್ದಾರೆ.

ಪ್ರಕರಣಗಳ ವಿಚಾರಣೆ ಸಂದರ್ಭದಲ್ಲಿ ಗೋರಿಪಾಳ್ಯ ಏರಿಯಾವನ್ನು ಕುರಿತು ನ್ಯಾಯಾಧೀಶರೊಬ್ಬರು 'ಅದು ಪಾಕಿಸ್ತಾನದಲ್ಲಿದೆ ಹೊರತು ಭಾರತದಲ್ಲಿ ಇಲ್ಲ' ಎಂದು ಹೇಳಿದ್ದಾರೆ. ಇನ್ನೊಂದು ಪ್ರಕರಣದಲ್ಲಿ ಮಹಿಳಾ ವಕೀಲರೊಬ್ಬರನ್ನು ಮಾತಿನ ಮಧ್ಯೆ ತಡೆದು 'ಸುಮ್ಮನಿರಮ್ಮ ನಿನಗೆ ಎಲ್ಲವೂ ಗೊತ್ತಿರುವಂತೆ ಮಾತಾಡುತ್ತಿರುವೆ. ನಾಳೆ ನೀನು ಅವನ ಒಳ ಉಡುಪಿನ ಬಣ್ಣವನ್ನು ಹೇಳುತ್ತಿ ಏನು? ಎಂದು ಮಾತನಾಡಿದ್ದಾರೆ.

ಇಂಥ ಲಿಂಗ ಅಸೂಕ್ಷ್ಮ ಭಾಷೆಯನ್ನು ಘನತೆವೆತ್ತ ನ್ಯಾಯಾಧೀಶರೊಬ್ಬರು ಬಳಸಿದ್ದು ಆಘಾತವನ್ನುಂಟು ಮಾಡಿದೆ. ಇಂತಹ ಘಟನೆಗಳಿಂದಾಗಿ ಜನರಿಗೆ ನ್ಯಾಯಾಂಗ ವ್ಯವಸ್ಥೆಯ ಮೇಲೆ ನಂಬಿಕೆ ಹೋಗುತ್ತಿದೆ. ಜನಾಂಗೀಯ ದ್ವೇಷ, ಮಹಿಳಾ ವಿರೋಧಿ ನಿಲುವು ನ್ಯಾಯಪೀಠಗಳಿಂದಲೇ ಬರುತ್ತವೆಯಾದರೆ, ದೇಶದಲ್ಲಿ ಹೆಚ್ಚುತ್ತಿರುವ ದ್ವೇಷ ಭಾಷಣಗಳು, ಧಾರ್ಮಿಕ ನೆಲೆಯ ಅಸಹನೆಗಳು, ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯದ ಜನರನ್ನೇ ಗುರಿಯಾಗಿಸಿ ನಡೆಸುವ ದುರ್ದಾಳಿಗಳು, ದೌರ್ಜನ್ಯಗಳು ಇದೇ ಪೀಠದ ಮುಂದೆ ಬಂದರೆ ಅದಕ್ಕೆ ನ್ಯಾಯ ಸಿಗಬಹುದೆ ಎಂದು ಜೆಎಂಎಸ್ ಪ್ರಶ್ನಿಸಿದೆ.

ಉಚ್ಚ ನ್ಯಾಯಾಲಯದ ಪೀಠದಿಂದ ಬಂದ ಈ ಹೇಳಿಕೆಯನ್ನು ತೀವ್ರವಾಗಿ ಖಂಡಿಸಿರುವ ಜೆಎಂಎಸ್, ಕೆಲವು ಸ್ಥಾನಗಳಲ್ಲಿ ಇರುವವರಿಗೆ ಕೆಲವು ನಿರ್ದಿಷ್ಟ ಕಾರಣಗಳಿಗಾಗಿ ಇಮ್ಯುನಿಟಿ ಅಥವಾ ವಿಶೇಷ ರಕ್ಷಣಾ ವಲಯದ ಅವಕಾಶವಿರುತ್ತದೆ. ಆದರೆ ಅದು ಹೀಗೆ ಮಹಿಳೆಯರ ಘನತೆಗೆ ಚ್ಯುತಿ ಬರುವ ರೀತಿ, ದೇಶದ ಬಹುತ್ವಕ್ಕೆ ಧಕ್ಕೆ ತರುವ ರೀತಿಯ ಮಾತುಗಳಿಗೆ ಎಡೆ ಕೊಡುವಂತೆ ಆಗಬಾರದು. ನ್ಯಾಯಾಲಯದ ಕುರಿತು ಟೀಕೆ ವಿಮರ್ಶೆ ಮಾಡಿದರೆ ಕಂಟೆಂಪ್ಟ್ ಆಫ್ ಕೋರ್ಟ್ ಎಂಬ ಆಯುಧದ ಭಯವನ್ನು ಜನರ ತಲೆಯ ಮೇಲೆ ತೂಗುಬಿಟ್ಟು ಪೀಠದಿಂದ ಇಂತಹ ಆಕ್ಷೇಪಕಾರಕ ಮಾತುಗಳು ಬರತೊಡಗುವುದನ್ನು ಒಪ್ಪಲಾಗದು ಎಂದಿದೆ.

ಈ ಮೇಲಿನ ಘಟನೆಗಳನ್ನು ಆಧರಿಸಿ ಸರ್ವೋಚ್ಚ ನ್ಯಾಯಾಲಯವು ಸ್ವಯಂಪ್ರೇರಿತ ಗಣನೆಗೆ ತೆಗೆದುಕೊಂಡಿರುವುದನ್ನು ಸ್ವಾಗತಿಸಿರುವ ಜೆಎಂಎಸ್, ಅದೇ ವೇಳೆಗೆ ಕರ್ನಾಟಕ ಉಚ್ಚ ನ್ಯಾಯಾಲಯ ಕೋರ್ಟ್ ಕಲಾಪಗಳನ್ನು ನೇರ ಪ್ರಸಾರ ಮಾಡುವುದಕ್ಕೆ ನಿರ್ಬಂಧ ವಿಧಿಸುವ ಸೂಚನೆಗಳು ಮತ್ತು ನೇರ ಪ್ರಸಾರವನ್ನೇ ನಿಲ್ಲಿಸಬೇಕೆಂದು ವಕೀಲರ ಸಂಘ ಬೇಡಿಕೆ ಇಟ್ಟಿದೆ ಎಂಬ ಮಾಧ್ಯಮಗಳ ವರದಿ, ಇದನ್ನು ಕೂಡಾ ಉಚ್ಚ ನ್ಯಾಯಾಲಯವು ಪುನರ್ ಪರಿಶೀಲನೆ ಮಾಡಬೇಕೆಂದು ಒತ್ತಾಯಿಸಿದೆ.

ದಂಪತಿಗಳ ವಿಚ್ಛೇದನ ಪ್ರಕರಣವೊಂದರಲ್ಲಿ ಇನ್ನೊಬ್ಬ ನ್ಯಾಯಮೂರ್ತಿಗಳು, ಆ ದಂಪತಿಗಳ ವಾಸ್ತವ ಸಮಸ್ಯೆ ಏನು, ಅವರ ನಡುವಿನ ಸಂಬಂಧ ಹಳಸಲು ಕಾರಣವಾದ ಸಮಾಜೋ ಆರ್ಥಿಕ, ಸಾಂಸ್ಕೃತಿಕ ಕಾರಣಗಳೇನು ಎಂಬುದನ್ನು ವಿಶ್ಲೇಷಿಸದೆ, ಮಠಾಧೀಶರ ಬಳಿಗೆ ಹೋಗಿ ಸಮಸ್ಯೆ ಬಗೆ ಹರಿಸಿಕೊಳ್ಳಬೇಕು ಎಂದು ಆದೇಶ ಹೊರಡಿಸಿದ್ದಾರೆ. ವಿವಾಹವೇ ಆಗದಿರುವ ಮಠಾಧೀಶರು ದಾಂಪತ್ಯ ಸಮಸ್ಯೆಗಳನ್ನು ಬಗೆ ಹರಿಸಲು ಸಮರ್ಥವಾಗುವುದಾದರೆ, ನ್ಯಾಯಾಲಯಗಳಿಗೆ ಕೆಲಸವೇ ಇರುವುದಿಲ್ಲ. ಹೀಗೆ ನ್ಯಾಯ ವ್ಯವಸ್ಥೆಯನ್ನು ಅಪಹಾಸ್ಯ ಮಾಡುವ ಸ್ಥಿತಿಯನ್ನು ಹೇಗೆ ಒಪ್ಪಲು ಸಾಧ್ಯ.

ಒಟ್ಟಾರೆ ನ್ಯಾಯಾಂಗ ವ್ಯವಸ್ಥೆ ತನ್ನ ಮೂಲದ ತಾತ್ವಿಕತೆ ಕಳೆದುಕೊಳ್ಳುತ್ತಿರುವುದು ಬಹುದೊಡ್ಡ ದುರಂತವಾಗಿದೆ. ನ್ಯಾಯಾಧೀಶರುಗಳೇ ಪ್ರಜಾತಾಂತ್ರಿಕ ಮೌಲ್ಯಗಳನ್ನು ಧ್ವಂಸ ಮಾಡುತ್ತಿರುವುದಕ್ಕೆ ಕಳವಳ ಉಂಟಾಗಿದೆ. ಇಂತಹ ಘಟನೆಗಳು ಮರುಕಳಿಸದಂತೆ ಸೂಕ್ತ ಕ್ರಮಕೈಗೊಳ್ಳಬೇಕು. ನ್ಯಾಯಾಂಗ ವ್ಯವಸ್ಥೆಯಲ್ಲಿಯೂ ಲಿಂಗ ಸಂವೇದನೆ ಮತ್ತು ಜಾತ್ಯಾತೀತ ಸಂವಿಧಾನವನ್ನು ಎತ್ತಿ ಹಿಡಿಯಲು ಅಗತ್ಯವಾದ ಅರಿವು ಮೂಡಿಸುವ ಕಾರ್ಯ ಚಟುವಟಿಕೆಗಳನ್ನು ಪ್ರಾರಂಭಿಸಬೇಕೆಂದು ಜೆಎಂಎಸ್ ಒತ್ತಾಯಿಸಿದೆ.

ಒಂದು ರಾಷ್ಟ್ರ–ಒಂದು ಚುನಾವಣೆ....

ಪುಟ 13 ರಿಂದ

ಪ್ರಯತ್ನಿಸುತ್ತಿದೆ. ಇದು ಭಾರತದ ಒಕ್ಕೂಟದ ಸ್ವರೂಪಕ್ಕೆ ಅನುಗುಣವಾಗಿಲ್ಲ ಎಂದು ಸುಪ್ರೀಂ ಕೋರ್ಟ್ನ ಮಾಜಿ ನ್ಯಾಯಾಧೀಶ ನ್ಯಾಯಮೂರ್ತಿ ಪಿಬಿ ಸಾವಂತ್ ಒಮ್ಮೆ ಹೇಳಿದರು. ಹೈಕೋರ್ಟ್ ಮಾಜಿ ನ್ಯಾಯಮೂರ್ತಿಗಳಾದ ಅಜಿತ್ ಪ್ರಕಾಶ್ ಶಾ, ಗಿರೀಶ್ ಚಂದ್ರ ಗುಪ್ತಾ ಮತ್ತು ಸಂಜೀವ್ ಬ್ಯಾನರ್ಜಿ ಕೂಡ ಇಂತಹ ಚುನಾವಣೆಯನ್ನು ಅರ್ಥಹೀನ ಎಂದು ಬಣ್ಣಿಸಿದ್ದಾರೆ. ಹಲವು ತಜ್ಞರು ಕೂಡಾ ಇಂತಹ ಚುನಾವಣೆಯನ್ನು' ವೈವಿದ್ಯತೆಯ ಒಕ್ಕೂಟ ವ್ಯವಸ್ಥೆಗೆ ಕೃತಕವಾಗಿ ಕೇಂದ್ರೀಕೃತ ಸ್ವರೂಪವನ್ನು ತುಂಬುತ್ತಿದ್ದಾರೆ' ಎಂದು ಟೀಕಿಸಿದ್ದಾರೆ. ಒಂದು ರಾಷ್ಟ್ರ, ಒಂದು ಚುನಾವಣೆಯನ್ನು 'ವೈವಿದ್ಯತೆಯ ನೆಲದ ಒಕ್ಕೂಟ ವ್ಯವಸ್ಥೆಯಲ್ಲಿ ಇದು ಕೃತಕವಾಗಿ ಕೇಂದ್ರೀಕೃತ ಪಾತ್ರವನ್ನು ತುಂಬುತ್ತಿದೆ' ಎಂದು ಅನೇಕ ಬುದ್ದಿಜೀವಿಗಳು ಟೀಕಿಸಿದ್ದಾರೆ.

ರಾಷ್ಟ್ರೀಯ, ರಾಜ್ಯ, ಸ್ಥಳೀಯ ಆಕಾಂಕ್ಷೆಗಳು ವಿಭಿನ್ನವಾಗಿವೆ

ಸಮಕಾಲೀನ ಭಾರತೀಯರಲ್ಲಿನ ಪ್ರಾದೇಶಿಕ ಆಕಾಂಕ್ಷೆಗಳು ಮತ್ತು ಸಾಮಾಜಿಕ ಆಕಾಂಕ್ಷೆಗಳು ಹೆಚ್ಚಿವೆ. ಪ್ರಾದೇಶಿಕ ಪಕ್ಷಗಳ ಪ್ರಾಧಾನ್ಯತೆ ಹೆಚ್ಚಾಗಿದೆ. ಪ್ರಜೆಗಳಿಗೆ ರಾಷ್ಟ್ರೀಯ, ರಾಜ್ಯ ಮಟ್ಟದಲ್ಲಿನ ಹಾಗೂ ಸ್ಥಳೀಯ ಆಕಾಂಕ್ಷೆಗಳು ವಿಭಿನ್ನವಾಗಿವೆ. ಲೋಕಸಭಾ ಚುನಾವಣೆಯಲ್ಲಿ ಜನರ ಆಕಾಂಕ್ಷೆಗಳು ಒಂದು ರೀತಿಯದ್ದಾಗಿದ್ದರೆ, ವಿಧಾನಸಭಾ ಚುನಾವಣೆಯಲ್ಲಿ ಇನ್ನೊಂದು ರೀತಿಯಲ್ಲಿ ಇರಬಹುದು. ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಸ್ಥಳೀಯ ಸಮಸ್ಯೆಗಳು ಮತ್ತು ಅಭ್ಯರ್ಥಿಗಳ ವ್ಯಕ್ತಿತ್ವಗಳು ಪ್ರಧಾನ ಪಾತ್ರ ವಹಿಸುತ್ತವೆ. 2014 ರ ಲೋಕಸಭಾ ಚುನಾವಣೆಯಲ್ಲಿ ದೆಹಲಿಯಲ್ಲಿ 7 ಲೋಕಸಭಾ ಸ್ಥಾನಗಳನ್ನು ಬಿಜೆಪಿ ಗೆದ್ದಿದೆ. ಕೆಲ ತಿಂಗಳ ನಂತರ ನಡೆದ ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಎಎಪಿ ಪಕ್ಷ ಒಟ್ಟು 70 ಸ್ಥಾನಗಳಲ್ಲಿ 67 ಸ್ಥಾನಗಳನ್ನು ಗೆದ್ದುಕೊಂಡಿತು. 1980 ರ ದಶಕದಲ್ಲಿ ಕರ್ನಾಟಕದಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಒಟ್ಟು 28 ಸ್ಥಾನಗಳ ಪೈಕಿ 26 ಸ್ಥಾನಗಳನ್ನು ಗೆದ್ದುಕೊಂಡಿತು. ಕೆಲವು ತಿಂಗಳ ನಂತರ ನಡೆದ ವಿಧಾನಸಭೆ ಚುನಾವಣೆಯಲ್ಲಿ ರಾಮಕೃಷ್ಣ ಹೆಗ್ಡೆ ಅವರ ನಾಯಕತ್ವದ ಜನತಾ ಪಕ್ಷವು ಬಹುಪಾಲು ಸ್ಥಾನಗಳನ್ನು ಗೆದ್ದುಕೊಂಡಿತು. ಆದ್ದರಿಂದ, ಲೋಕಸಭೆ ಮತ್ತು ವಿಧಾನಸಭೆಗಳಿಗೆ ಒಂದೇ ಸಮಯದಲ್ಲಿ ಚುನಾವಣೆಗಳು ಜನರ ಆಕಾಂಕ್ಷೆಗಳಿಗೆ ಪ್ರತಿಬಿಂಬವಾಗಿ ಇರುವುದಿಲ್ಲ. ಇತ್ತೀಚಿನ ದಿನಗಳಲ್ಲಿ ಕೂಡಾ, ಕೆಲವು ರಾಜ್ಯಗಳಲ್ಲಿ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಹೆಚ್ಚು ಸ್ಥಾನ ಗಳಿಸಿದ ನಂತರ ನಡೆದ ವಿಧಾನಸಭೆ ಚುನಾವಣೆಗಳಲ್ಲಿ ಇತರ ಪಕ್ಷಗಳು ಗೆದ್ದುಬಂದ್ದವು.

ಸಂಸದೀಯ ಪ್ರಜಾಪ್ರಭುತ್ವವನ್ನು ಕಾಪಾಡಿಕೊಳ್ಳಬೇಕು

ಭಾರತೀಯ ಸಂವಿಧಾನದ ಮೂಲಭೂತ ಲಕ್ಷಣಗಳೆಂದರೆ ಒಕ್ಕೂಟ ವ್ಯವಸ್ಥೆ, ಜಾತ್ಯತೀತ ವ್ಯವಸ್ಥೆ ಹಾಗೂ ಸಂಸದೀಯ ಪ್ರಜಾಪ್ರಭುತ್ವ ಪ್ರಮುಖವಾದುದು. ವಿಶ್ವದ ಸಂಸದೀಯ ಪ್ರಜಾಪ್ರಭುತ್ವದಲ್ಲಿ ಬ್ರಿಟನ್ ಹೊರತುಪಡಿಸಿ ಎಲ್ಲಾ ದೇಶಗಳಲ್ಲಿ ಬಹು –ಪಕ್ಷಗಳ ವ್ಯವಸ್ಥೆಯು ಮುಂದುವರೆದಿದೆ. ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್ ಅವರು ಭಾರತ ದೇಶಕ್ಕೆ ಸಂಸದೀಯ ಪ್ರಜಾಪ್ರಭುತ್ವವು ಜನರ ಹಕ್ಕುಗಳು ಮತ್ತು ಸ್ವಾತಂತ್ರ್ಯವನ್ನು ರಕ್ಷಿಸುತ್ತದೆ ಎಂದು ಹೇಳಿದರು. ಒಂದು ರಾಷ್ಟ್ರ, ಒಂದು ಚುನಾವಣೆ ಮೂಲಕ ಮೋದಿ ಸರ್ಕಾರ ಸಂಸದೀಯ ಪ್ರಜಾಪ್ರಭುತ್ವವನ್ನು ನಾಶಮಾಡಲು ಪ್ರಯತ್ನಿಸುತ್ತಿದೆ. ಬಿಜೆಪಿ ಹೊರತುಪಡಿಸಿ ಉಳಿದ ರಾಷ್ಟ್ರೀಯ ಪಕ್ಷಗಳು ಮತ್ತು ಅನೇಕ ಪ್ರಾದೇಶಿಕ ಪಕ್ಷಗಳು ಒಂದು ರಾಷ್ಟ್ರ, ಒಂದು ಚುನಾವಣೆಯನ್ನು ವಿರೋಧಿಸುತ್ತಿವೆ. ಭಾರತದ ಜನರ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳಲು ನಾಗರಿಕ ಸಮಾಜ ಮುಂದಾಗಬೇಕಿದೆ.

ಕೃಪೆ:ಪ್ರಜಾಶಕ್ತಿ (ಕನ್ನಡಕ್ಕೆ:ಸಿಚಿ)

NEW No. MAG(3)/NPP/205/2021-2022
JANASHAKTHI KANNADA VARA PATRIKE September 23-29, 2024 Price: Rs. 10/- Date of Publication: 20 September 2024 RNI No. KARKAN /2006/17926 Posted on 24-09-2024
Posted at BG PSO, BG - 560026 **Posted at Periodical Rate -** Rs. 2

ಸೀತಾರಾಂ ಯೆಚೂರಿಯವರಿಗೆ ಗೌರವ ಸಲ್ಲಿಕೆ

ಸಂಗಾತಿ ಸೀತಾರಾಮ್ ಯೆಚೂರಿಯವರ ಪರಂಪರೆಯನ್ನು ಮುಂದುವರಿಸೋಣ

ಸಂಗಾತಿ ಸೀತಾರಾಂ ಯೆಚೂರಿಯವರು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಅಡಿಯಲ್ಲಿ ಭಾರತದ ಕಮ್ಯೂನಿಸ್ಟ್ ಚಳವಳಿಗೆ ನೀಡುತ್ತಿದ್ದ ಕೊಡುಗೆ ಹಾಗೂ ಕೆಲಸಗಳು ಹಠಾತ್ತಾಗಿ ಮತ್ತು ಅನಿರೀಕ್ಷಿತವಾಗಿ ನಿಂತುಹೋದವು. ಅವರ ಅಕಾಲಿಕ ಸಾವಿನಿಂದಾಗಿ ಅವರ ಹಲವಾರು ಕೆಲಸ ಕಾರ್ಯಗಳು ಹಾಗೆಯೇ ಉಳಿದು ಹೋದವು. ಭಾರತದ ಕಮ್ಯೂನಿಸ್ಟ್ ಚಳವಳಿಗೆ ಸಂಗಾತಿ ಯೆಚೂರಿಯವರಿಂದ ಇನ್ನೂ ಬಹಳ ಕೆಲಸಗಳು ಆಗಬೇಕಿತ್ತು, ಆದರೆ ಅವರ ಅನಿರೀಕ್ಷಿತ ಅಗಲಿಕೆಯಿಂದಾಗಿ ಮುಂದಿನ ಪೀಳಿಗೆಗೆ ಅವರ ಅಮೂಲ್ಯವಾದ ಮಾರ್ಗದರ್ಶನ ಇಲ್ಲದಂತಾಯಿತು.



ಮಾಣಿಕ್ ಸರ್ಕಾರ್

ಸೀತಾರಾಮ್ ಯೆಚೂರಿಯವರು ಅವರ ಕಾಲದ ಕಮ್ಯೂನಿಸ್ಟ್ ಚಳವಳಿಯ ಮಹೋನ್ನತವಾದ ಹಾಗೂ ಬಹುಮುಖಿ ಪ್ರತಿಭೆಯ ನಾಯಕರಲ್ಲಿ ಒಬ್ಬರಾಗಿದ್ದರು. ಅವರು ಮಾರ್ಕ್ಸ್‌ವಾದ ಹಾಗೂ ಲೆನಿನ್‌ವಾದದ ಮೇಲೆ ಪ್ರಭುತ್ವವನ್ನು ಸಾಧಿಸಿದ್ದರು ಮತ್ತು ವಿಶ್ವಸನೀಯ ಸೈದ್ಧಾಂತಿಕ ತಿಳುವಳಿಕೆಯನ್ನು ಹೊಂದಿದ್ದರು. ಮಾರ್ಕ್ಸ್‌ವಾದಿ ಅರ್ಥಶಾಸ್ತ್ರದ ಮೇಲಿನ ಅವರ ಪರಿಣತಿಯು ಅಸಾಧಾರಣವಾದುದು. ಕಮ್ಯೂನಿಸ್ಟ್ ಚಳವಳಿಯ ವಿರೋಧಿಗಳು ಕೂಡ ಸೈದ್ಧಾಂತಿಕ ಅಥವಾ ಆರ್ಥಿಕ ವಿಷಯಗಳ ಕುರಿತು ಅವರಿಗೆ ಸವಾಲೆಸೆಯಲು ಹಿಂಜರಿಯುತ್ತಿದ್ದರು. ಏಕೆಂದರೆ ಅವರ ವಾದಗಳು ಅಷ್ಟೇ ತೀಕ್ಷ್ಣವಾಗಿ, ಸಮೃದ್ಧವಾಗಿ ಮತ್ತು ಕುಶಲತೆಯಿಂದ ಆದರೆ ಮನವೊಲಿಸುವಂತೆ ಇರುತ್ತಿದ್ದವು. ಯೆಚೂರಿಯವರು ತನ್ನ ಪಕ್ಷದ ಪರವಾಗಿ ಒಂದು ವಿಚಾರದ ಬಗ್ಗೆ ಒಂದು ನಿಲುವನ್ನು ತಳೆದಾಗ್ಯೂ ಆ ವಿಷಯದ ಮೇಲಿನ ಇತರರ ಭಿನ್ನ ಆಯಾಮಗಳನ್ನು ಎಂದಿಗೂ ಕಡೆಗಣಿಸುತ್ತಿರಲಿಲ್ಲ. ತರ್ಕಬದ್ಧ ವಾದ ಚರ್ಚೆಗಳಲ್ಲಿ ತೊಡಗುವುದನ್ನು ಇಷ್ಟಪಡುತ್ತಿದ್ದರು. ಆದರೆ ಮುಕ್ತ ಮನಸ್ಸಿನಿಂದ ಹಾಗೂ ನಿಗರ್ವಿಯಾಗಿ ಚರ್ಚೆ ಮಾಡುತ್ತಿದ್ದರು.

ತನ್ನ ಇಡೀ ಜೀವನವನ್ನೇ ಮುಡಿಪಾಗಿಟ್ಟಿದ್ದ ಮತ್ತು ವಿಚಾರಶೀಲ ವಿದ್ಯಾರ್ಥಿ ನಾಯಕರಾಗಿದ್ದ ಸೀತಾರಾಮ್ ಯೆಚೂರಿ ದೇಶಾದ್ಯಂತ ವಿಸ್ತಾರವಾಗಿ ತಿರುಗಾಡಿದ್ದರು. ಅವರ ಆರ್ಥಿಕ, ರಾಜಕೀಯ ಹಾಗೂ ಸಾಮಾಜಿಕ ವಿಶಿಷ್ಟ ಗುಣಲಕ್ಷಣಗಳು ಹಾಗೂ ಅವರ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳುವ ಸಲುವಾಗಿ ಹಲವಾರು ರಾಜ್ಯಗಳಿಗೆ ಭೇಟಿ ನೀಡಿದರು. ಅವರ ಗಾಢವಾದ ಈ ತೊಡಗಿಕೊಳ್ಳುವಿಕೆಯು ಆ ಅವಧಿಯಲ್ಲಿ ವಿವಿಧ ರಾಜ್ಯಗಳ ವಿದ್ಯಾರ್ಥಿ ಚಳವಳಿಯನ್ನು ಪರಿಣಾಮಕಾರಿಯಾಗಿ ರೂಪಿಸಲು ಅವರಿಗೆ ಸಹಾಯ ಮಾಡಿತು. ಅವರ ಈ ಪ್ರಯತ್ನಗಳು ದೇಶಾದ್ಯಂತ ವಿದ್ಯಾರ್ಥಿ ಚಳವಳಿಯನ್ನು ಮತ್ತು ಸಂಘಟನೆಯನ್ನು ಕಟ್ಟಿ ವಿಸ್ತರಿಸುವಲ್ಲಿ ನೆರವಾದವು. ಒಬ್ಬ ವಿದ್ಯಾರ್ಥಿ ಮುಖಂಡನಾಗಿ ಅವರು ಗಳಿಸಿದ ಸೂಕ್ಷ್ಮ ದೃಷ್ಟಿ ಹಾಗೂ ಅನುಭವಗಳು ನಂತರದಲ್ಲಿ ಪಕ್ಷದ ಒಬ್ಬ ಸಂಭಾವ್ಯ ನಾಯಕನನ್ನಾಗಿ ತರಬೇತುಗೊಳಿಸಿ ಬೆಳೆಸುವಲ್ಲಿ ಅಮೂಲ್ಯ ಆಕರಗಳಾದವು.

ಅವರ ಬರವಣಿಗೆ ಹಾಗೂ ಸಂಕಲನಗಳಲ್ಲಿನ ಯೆಚೂರಿಯವರ ಈ ಅಸಾಧಾರಣ ಕೌಶಲ್ಯವು ಮುಂದೆ ಹಲವಾರು ಪ್ರಮುಖ ಪ್ರಕಾಶನಗಳ ಕೆಲಸದಲ್ಲಿ ಕಂಡುಬಂದವು. ಎಸ್.ಎಫ್.ಐ.ನ ಮುಖವಾಣಿಯಾದ ‘ಸ್ಟೂಡೆಂಟ್ಸ್ ಸ್ಟ್ರಗಲ್’ನ ಸಂಪಾದಕರಾಗಿ ಅವರು ಅದನ್ನು ವಿಭಿನ್ನವಾಗಿ, ಆಕರ್ಷಕ ರೂಪದಲ್ಲಿ ಮತ್ತು ಉನ್ನತ ಗುಣಮಟ್ಟ ಹಾಗೂ ನಾನಾ ಬಗೆಯ ವಸ್ತು ವಿಷಯಗಳೊಂದಿಗೆ ಪ್ರಕಟಿಸಿದರು. ಇದು ಕೇವಲ ವಿದ್ಯಾರ್ಥಿ ಚಳವಳಿಯ ಸಂಘಟಕರ ಗಮನವನ್ನು ಮಾತ್ರ ಸೆಳೆಯದೆ, ಉನ್ನತ ಶ್ರೇಣಿಯ ಬುದ್ಧಿಜೀವಿಗಳು ಹಾಗೂ ವಿಮರ್ಶಕರ ಒಂದು ವಿಭಾಗದ ಮೇಲೂ ಪರಿಣಾಮ ಬೀರಿತು. ಅವರ ಈ ವಿಶಿಷ್ಟ ಸಂಪಾದಕೀಯ ಹಿರಿಮೆಯು ಸಿಪಿಐ(ಎಂ) ಪಕ್ಷದ ವಾರ ಪತ್ರಿಕೆ ‘ಪೀಪಲ್ಸ್ ಡೆಮಾಕ್ರಸಿ’ಯ ಮತ್ತು ತ್ರೈಮಾಸಿಕ ಸೈದ್ಧಾಂತಿಕ ಪತ್ರಿಕೆ ‘ಮಾರ್ಕ್ಸಿಸ್ಟ್’ನ ಸಂಪಾದಕತ್ವದಲ್ಲೂ ಮುಂದುವರಿಯಿತು. ಈ ಕೆಲಸಗಳ ಜತೆಯಲ್ಲೇ, ಯೆಚೂರಿಯವರು ಅಸಂಖ್ಯಾತ ಅಮೂಲ್ಯವಾದ ಪುಸ್ತಕಗಳನ್ನು ಬರೆದರು. ಅವು ಕಮ್ಯೂನಿಸ್ಟರ ರಾಜಕೀಯ ಹಾಗೂ ಸೈದ್ಧಾಂತಿಕ ಸಮರಗಳಿಗೆ ಬಹು ಮುಖ್ಯ ಆಕರಗಳಾಗಿ ಒದಗಿಬಂದವು.

1964 ರಲ್ಲಿ ಸಿಪಿಐ(ಎಂ) ಪಕ್ಷ ರಚನೆಯಾದಾಗ ಆರಂಭದಲ್ಲಿ ಅದು ಅಂತರರಾಷ್ಟ್ರೀಯ ಕಮ್ಯೂನಿಸ್ಟ್ ಚಳವಳಿಯಿಂದ ದೂರವಾಯಿತು. ಯುಎಸ್‌ಎಸ್‌ಆರ್ ಕಮ್ಯೂನಿಸ್ಟ್ ಪಕ್ಷ ಮತ್ತು ಚೀನಾ ಕಮ್ಯೂನಿಸ್ಟ್ ಪಕ್ಷದಂತಹ ಪ್ರಮುಖ ಕಮ್ಯೂನಿಸ್ಟ್ ಪಕ್ಷಗಳು ಸಿಪಿಐ(ಎಂ) ಪಕ್ಷದ ಬಗ್ಗೆ ನಕಾರಾತ್ಮಕ ಧೋರಣೆ ತಳೆದಿದ್ದವು. ವಿಯೆಟ್ನಾಂ ಕಮ್ಯೂನಿಸ್ಟ್ ಪಕ್ಷ ಮಾತ್ರವೇ ಆ ಅವಧಿಯಲ್ಲಿ ಸಿಪಿಐ(ಎಂ) ಜತೆ ಸಂಬಂಧವನ್ನು ಇಟ್ಟುಕೊಂಡಿತ್ತು. ಈ ಏಕಾಂತದ ನಡುವೆಯೂ, ತನ್ನ ಸೈದ್ಧಾಂತಿಕ ಹಾಗೂ ರಾಜಕೀಯ ನಿಲುವುಗಳಲ್ಲಿ ಸಿಪಿಐ(ಎಂ) ದೃಢತೆಯನ್ನು ಕಾಯ್ದುಕೊಂಡಿತ್ತು. ಪಕ್ಷದ ಕಾರ್ಯಕ್ರಮವನ್ನು ಅನುಸರಿಸುತ್ತಾ ವರ್ಗ ಹಾಗೂ ಸಾಮೂಹಿಕ ಹೋರಾಟಗಳನ್ನು ಬೆಳೆಸುವ ನಿಟ್ಟಿನಲ್ಲಿ ಕಾರ್ಯನಿರತವಾಗಿತ್ತು. ಕಾಲ ಕಳೆದಂತೆ, ಸಿಪಿಐ(ಎಂ) ನೆಲೆ ಪಡೆದುಕೊಂಡಿತು ಮತ್ತು ಕಾರ್ಮಿಕ ವರ್ಗ, ರೈತ ಸಮುದಾಯ ಹಾಗೂ ಮಧ್ಯಮ ವರ್ಗ ಮುಂತಾದ ವಿಶಾಲ ಜನಸಮೂಹದ ನಡುವೆ ಅಂಗೀಕಾರ ಪಡೆಯಿತು. ಕೇರಳ, ಪಶ್ಚಿಮ ಬಂಗಾಳ ಮತ್ತು ತ್ರಿಪುರಾ ರಾಜ್ಯಗಳಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕ ಹಾಗೂ ಎಡ ನೇತೃತ್ವದ ಸರ್ಕಾರಗಳನ್ನು ರಚಿಸುವುದರೊಂದಿಗೆ ವ್ಯಾಪಕ ಬೆಂಬಲ ಪಡೆದಿರುವುದು ಪ್ರತಿಫಲನವಾಯಿತು.

ಈ ಅನುಭವಗಳ ಮೂಲಕ, ಪ್ರಮುಖ ಅಂತರರಾಷ್ಟ್ರೀಯ ಕಮ್ಯೂನಿಸ್ಟ್ ಪಕ್ಷಗಳು ಸಿಪಿಐ(ಎಂ) ಬಗ್ಗೆ ಹೊಂದಿದ್ದ ತಮ್ಮ ಹಿಂದಿನ ತಪ್ಪು ಅಭಿಪ್ರಾಯಗಳನ್ನು ಸರಿಪಡಿಸಿಕೊಂಡವು ಮತ್ತು ಪಕ್ಷದೊಂದಿಗೆ ರಾಜಕೀಯ ಸಂಬಂಧಗಳನ್ನು ಬೆಳೆಸಿಕೊಂಡವು. ಜಗತ್ತಿನ ಇತರ ಹಲವಾರು ಕಮ್ಯೂನಿಸ್ಟ್ ಮತ್ತು ವರ್ಕರ್ಸ್ ಪಕ್ಷಗಳೊಂದಿಗೆ ರಾಜಕೀಯ ಸಂಬಂಧಗಳನ್ನು ಏರ್ಪಡಿಸುವಲ್ಲಿ ಹಾಗೂ ಮುಂದುವರಿಸುವಲ್ಲಿ ಹರ್ಕಿಷನ್ ಸಿಂಗ್ ಸುರ್ಜಿತ್ ಅವರು ಪಕ್ಷದ ಪ್ರಧಾನ ಕಾರ್ಯದರ್ಶಿಯಾಗುವ ಮೊದಲೇ ಪ್ರಮುಖ ಪಾತ್ರ ವಹಿಸಿದ್ದರು. ಪಕ್ಷದ ನಿರ್ಧಾರಕ್ಕೆ ಅನುಸಾರವಾಗಿ, ಈ ಜವಾಬ್ದಾರಿಗಳನ್ನು ಕ್ರಮೇಣವಾಗಿ ಕಾಂ.ಸೀತಾರಾಮ್ ಯೆಚೂರಿಯವರಿಗೆ ವಹಿಸಿದರು ಮತ್ತು ಅಂತಿಮವಾಗಿ ಸೀತಾರಾಮ್ ಅವರನ್ನು ಪಕ್ಷದ ಅಂತರರಾಷ್ಟ್ರೀಯ ಇಲಾಖೆಯ ಮುಖ್ಯಸ್ಥನನ್ನಾಗಿ ಮಾಡಲಾಯಿತು.

ಈ ನಿರ್ಣಾಯಕ ಪಾತ್ರವನ್ನು ಅತ್ಯಂತ ಕೌಶಲ್ಯದಿಂದ ನಿರ್ವಹಿಸುವ ಮೂಲಕ ಸೀತಾರಾಂ ಯೆಚೂರಿ ಜಗತ್ತಿನ ಹಲವಾರು ಕಮ್ಯೂನಿಸ್ಟ್ ಹಾಗೂ ವರ್ಕರ್ಸ್ ಪಾರ್ಟಿಗಳ ಜತೆ ಸದೃಢವಾದ ಸಂಬಂಧಗಳನ್ನು ಬೆಸೆಯುವಲ್ಲಿ ಯಶಸ್ವಿಯಾದರು. ಕೇವಲ ಔಪಚಾರಿಕ ಸಂಬಂಧಗಳಿಗೆ ಮಾತ್ರ ಸೀಮಿತವಾಗದೆ, ಇನ್ನೂ ಮುಂದುವರಿದು ಈ ಎಲ್ಲಾ ಸೋದರ ಪಕ್ಷಗಳ ಸೈದ್ಧಾಂತಿಕ, ರಾಜಕೀಯ ಹಾಗೂ ಸಂಘಟನಾತ್ಮಕ ಆಯಾಮಗಳನ್ನು ಆಳವಾಗಿ ಅಧ್ಯಯನ ಮಾಡಿದರು. ಅಂತರರಾಷ್ಟ್ರೀಯ ಕಮ್ಯೂನಿಸ್ಟ್ ಚಳವಳಿಯ ಬಗ್ಗೆ ಒಂದು ಸಮಗ್ರವಾದ ತಿಳುವಳಿಕೆಯನ್ನು ಬೆಳೆಸಿಕೊಳ್ಳುವ ಮೂಲಕ ಅಂತರರಾಷ್ಟ್ರೀಯ ವಿದ್ಯಮಾನಗಳ ಬಗ್ಗೆ ಒಂದು ಸರಿಯಾದ ಮಾಹಿತಿ ಪಡೆದು ಯೋಗ್ಯ ನಿಲುವುಗಳನ್ನು ತಳೆಯಲು ಸಾಧ್ಯವಾಯಿತು.

ಫ್ಯಾಸಿಸ್ಟಿಕ್ ಆರ್‌ಎಸ್‌ಎಸ್–ಬಿಜೆಪಿ ಕೂಟವನ್ನು ಏಕಾಂಗಿಯಾಗಿಸಿ ಸೋಲಿಸುವ ಸಲುವಾಗಿ ದೇಶದ ಎಡ, ಪ್ರಜಾಸತ್ತಾತ್ಮಕ ಹಾಗೂ ಜಾತ್ಯತೀತ ಶಕ್ತಿಗಳನ್ನು ಎಷ್ಟು ಸಾಧ್ಯವೋ ಅಷ್ಟು ಒಗ್ಗೂಡಿಸಬೇಕಾಗಿರುವುದು ತೀರಾ ಅಗತ್ಯವಾಗಿದೆ. ಇಂತಹ ನಿರ್ಣಾಯಕ ಸಮಯದಲ್ಲಿ, ಸೀತಾರಾಂ ಯೆಚೂರಿ ಸಿಪಿಐ(ಎಂ) ನ ಪ್ರಧಾನ ಕಾರ್ಯದರ್ಶಿಯಾಗಿ ಪ್ರಮುಖ ಪಾತ್ರ ವಹಿಸಿದ್ದಾರೆ. ಈ ಐಕ್ಯತೆಯನ್ನು ಸಾಧಿಸುವ ಸಲುವಾಗಿ ಅಗತ್ಯವಿರುವ ರಾಜಕೀಯ ಕಲೆ ಹಾಗೂ ತಂತ್ರಗಾರಿಕೆಯಲ್ಲಿ ಅವರು ಪಾರಂಗತರಾಗಿದ್ದಾರೆ, ಅದನ್ನು ಅತ್ಯಂತ ವಿನಯ ಹಾಗೂ ಕೌಶಲ್ಯದಿಂದ ಕಾರ್ಯಗತ ಮಾಡಿದ್ದಾರೆ. ಇತರ ಪಕ್ಷಗಳ ಜತೆ ಸಭೆ ಹಾಗೂ ಚರ್ಚೆ ಮಾಡುವಾಗ ಹರ್ಕಿಷನ್ ಸಿಂಗ್ ಸುರ್ಜಿತ್ ಅವರೊಂದಿಗೆ ಇದ್ದು ಈ ಸಾಮರ್ಥ್ಯವನ್ನು ಗಳಿಸಿಕೊಂಡಿದ್ದಾರೆ. ಸಂಸತ್ತಿನ ಮೇಲ್ಮನೆಯ (ರಾಜ್ಯಸಭೆಯ) ಸದಸ್ಯರಾಗಿ ತನ್ನ ರಾಜಕೀಯ ಪಕ್ವತೆ ಹಾಗೂ ಪ್ರಭಾವಶಾಲಿತ್ವವನ್ನು ಪ್ರದರ್ಶಿಸಿ ಗಮನಾರ್ಹ ಪರಿಣಾಮ ಬೀರಿದ್ದಾರೆ. ಸಂಸತ್ತಿನಲ್ಲಿರುವ ಇತರ ಬಹುವಿಧದ ರಾಜಕೀಯ ಪಕ್ಷಗಳೊಟ್ಟಿಗೆ ಮಿತ್ರತ್ವ ಬೆಳೆಸಿಕೊಳ್ಳುವ ತಮ್ಮ ಸಾಮರ್ಥ್ಯವನ್ನು ಸದುಪಯೋಗಪಡಿಸಿಕೊಂಡು ಜಾತ್ಯತೀತ ಶಕ್ತಿಗಳ ಸಮನ್ವಯ ಹಾಗೂ ಐಕ್ಯತೆಯನ್ನು ಸಾಧಿಸಿದ್ದರು.

ಇತ್ತೀಚಿನ ವರ್ಷಗಳಲ್ಲಿ, 2024 ರ ಚುನಾವಣೆಗಳ ಮುಂಚೆಯೇ ‘ಇಂಡಿಯಾ ಬ್ಲಾಕ್’ ರಚಿಸುವಲ್ಲಿ ಸಂಗಾತಿ ಸೀತಾರಾಂ ಯೆಚೂರಿಯವರ ಪಾತ್ರ ಗಣನೀಯವಾದುದು ಮತ್ತು ಬಹಳ ಪರಿಣಾಮ ಬೀರಿತು ಕೂಡ.

ಪ್ರಜಾಸತ್ತಾತ್ಮಕ ಕೇಂದ್ರವಾದ ಎನ್ನುವುದು ಕಮ್ಯೂನಿಸ್ಟ್ ಪಕ್ಷದ ಮೂಲಭೂತ ಸಂಘಟನಾತ್ಮಕ ತತ್ವವಾಗಿದೆ ಮತ್ತು ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿಯವರು ಅದನ್ನು ತಪ್ಪದೇ ಪಾಲಿಸುತ್ತಿದ್ದರು. ಐಕ್ಯ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಲುವಾಗಿ ಸಂಘಟನಾತ್ಮಕ ಶಿಸ್ತನ್ನು ಪಾಲಿಸುವಾಗಲೇ, ಕಮ್ಯುನಿಸ್ಟ್ ಪಕ್ಷದಲ್ಲಿ ಚರ್ಚೆ ಹಾಗೂ ಸಂವಾದ ಮಾಡುವ ಮುಕ್ತ ಅವಕಾಶ ಪಕ್ಷದ ಒಳಗಡೆ ಇರಬೇಕು. ಅವರ ಅವಧಿಯಲ್ಲಿ ಈ ತತ್ವಕ್ಕೆ ಅವರು ಪ್ರಜ್ಞಾಪೂರ್ವಕವಾಗಿ ಬದ್ಧರಾಗಿದ್ದರು ಮತ್ತುಅದು ಪಕ್ಷವನ್ನು ಒಗ್ಗೂಡಿಸಲು ಸಹಾಯ ಮಾಡಿತು.

ಸೀತಾರಾಂ ಯೆಚೂರಿಯವರು ಇವತ್ತಿನ ಕಾಲಕ್ಕೆ ನಿರ್ಧಾರಕವಾದ ಅನೇಕ ಪ್ರಮುಖ ಪಾಠಗಳನ್ನು ಮತ್ತು ಹಲವಾರು ಅಪೂರ್ಣ ಕೆಲಸಗಳನ್ನು ಬಿಟ್ಟು ಹೋಗಿದ್ದಾರೆ. ಅವರ ಅನುಪಸ್ಥಿತಿಯನ್ನು ನಿಸ್ಸಂಶಯವಾಗಿ ನಾವೆಲ್ಲರೂ ತೀವ್ರವಾಗಿ ಅನುಭವಿಸುತ್ತೇವೆ, ಆದರೆ ನಾವು ಯಾರೂ ಹತಾಶರಾಗಬೇಕಿಲ್ಲ, ತಡಮಾಡಬೇಕಿಲ್ಲ. ಪಕ್ಷದ ಮುಂದಿರುವ ತುರ್ತಾದ ಕೆಲಸವೆಂದರೆ ಪಕ್ಷವನ್ನು ಗಟ್ಟಿಗೊಳಿಸಬೇಕಾಗಿದೆ, ಅದೇ ಸಮಯದಲ್ಲಿಎಡಐಕ್ಯತೆಯನ್ನು ಬೆಳೆಸಬೇಕು ಹಾಗೂ ಎಡ ಪ್ರಜಾಸತ್ತಾತ್ಮಕ ಮತ್ತು ಜಾತ್ಯತೀತ ಒಕ್ಕೂಟವನ್ನು ಎತ್ತಿಹಿಡಿಯಬೇಕಿದೆ.

ಸಂಗಾತಿ ಸೀತಾರಾಂ ಯೆಚೂರಿಯವರ ನೆನಪನ್ನು ನಿಜವಾಗಿಯೂ ಗೌರವಿಸಬೇಕೆಂದರೆ, ಈ ಸವಾಲುಗಳನ್ನು ನಾವು ಪ್ರಾಮಾಣಿಕತೆಯಿಂದ ಹಾಗೂ ಗಂಭೀರವಾಗಿ ಎದುರಿಸಬೇಕು, ನವಚೈತನ್ಯದ ಬದ್ಧತೆಯೊಂದಿಗೆ ಜನಸಾಮಾನ್ಯರನ್ನು ತಲುಪಬೇಕು. ಹಲವಾರು ಹೋರಾಟಗಳ ಮೂಲಕ ಜನರನ್ನು ಸಂಘಟಿಸಲು ಸಕಾರಾತ್ಮಕ ಪ್ರಯತ್ನಗಳನ್ನು ಮಾಡಬೇಕು. ಯುವ ಪೀಳಿಗೆಯನ್ನು ಸೆಳೆಯಲು ವಿಶೇಷ ಗಮನ ನೀಡಬೇಕು. ನಮ್ಮ ಗುರಿಯನ್ನು ತಲುಪುವ ನಿಟ್ಟಿನಲ್ಲಿಎಲ್ಲಾ ಅಡಚಣೆಗಳನ್ನು ಹಿಮ್ಮೆಟ್ಟಿಸಲು ಸಮರ್ಥರಾಗುವ ಮೂಲಕ ಪಕ್ಷವನ್ನು ಹುರಿದುಂಬಿಸೋಣ.

ಅನು: ಸುರೇಂದ್ರ ರಾವ್

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**